
ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಬೊಳುವಾರು
ಅಭಿನಂದನೆಗಳು



ಸಂಪುಟ 11 | ಸಂಚಿಕೆ 01 | ಪುಟ 16 | ಜನವರಿ 1, 2017 | ರೂ. 10/-

web: www.janashakthi.co.in | e-mail : js_weekly@yahoo.com



ಯಶಸ್ವಿ ಕೃಷಿಕೂಲಿಕಾರರ ಸಮ್ಮೇಳನ

ದಿಡ್ಡಳ್ಳಿ ಆದಿವಾಸಿಗಳ ಹೋರಾಟ





'ನಗದು ಕೂಪನ್ ಭಾಗ್ಯ' ಬೇಡ!

'ಸಮಾನ ಕೆಲಸಕ್ಕೆ ಸಮಾನ ವೇತನ'

ಡಿ. 29 ಕೇರಳ: ನೋಟು ನಿಷೇಧದ ವಿರುದ್ಧ 700 ಕಿ.ಮಿ. ಮಾನವ ಸರಪಣಿ

ಬದುಕಿನ ಮೇಲೆ ಪ್ರಹಾರ ಮಾಡುತ್ತಿರುವ ಅನಾಣ್ಯೀಕರಣ

ಜನವರಿ 3 ರಂದು ದೇಶವ್ಯಾಪಿ ಪ್ರತಿಭಟನೆ: ಸಿಐಟಿಯು ಕರೆ

ಜನವರಿ 3ರಂದು ದೇಶದ ದುಡಿಯುವ ಜನತೆ ಕೇಂದ್ರದ ಬಿಜೆಪಿ ನೇತೃತ್ವದ ಸರಕಾರ ಅನಾಣ್ಯೀಕರಣ ಎಂದು ಹರಿಯ ಬಿಟ್ಟಿರುವ ಕ್ರಮಗಳ ವಿರುದ್ಧ ತಮ್ಮ ಪ್ರತಿಭಟನೆಯ ದನಿ ಎತ್ತಬೇಕು ಎಂದು ಡಿಸೆಂಬರ್ 19–20ರಂದು ಸಭೆ ಸೇರಿದ ಸಿಐಟಿಯು ಕಾರ್ಯದರ್ಶಿ ಮಂಡಳಿ ಕರೆ ನೀಡಿದೆ. ಸರಕಾರದ ಕ್ರಮಗಳು ಕಾರ್ಮಿಕರ ಮೇಲೆ, ಅದರಲ್ಲೂ ಅಸಂಘಟಿತ ವಲಯದ ಕಾರ್ಮಿಕರು, ರೈತರು, ಸಣ್ಣ ವ್ಯಾಪಾರ ನಡೆಸುತ್ತಿರುವವರು, ಬೀದಿ ಬದಿ ವ್ಯಾಪಾರಿಗಳು ಮತ್ತು ಮತ್ತಿತರರ ಮೇಲೆ ವಿಪರೀತ ಸಂಕಟಗಳನ್ನು ಹೇರಿವೆ. ಕೂಡಲೇ ಸರಕಾರ ಈ ಸಂಕಟಗಳಿಂದ ಪರಿಹಾರ ಒದಗಿಸಲು ನಗದಿನ ಲಭ್ಯತೆಯನ್ನು ಹೆಚ್ಚಿಸಬೇಕು ಮತ್ತು ಎಲ್ಲ ಕಾರ್ಮಿಕರಿಗೆ ಸಂಬಳ ಸಿಗುವಂತೆ ಮಾಡಬೇಕು ಎಂದು ಸಿಐಟಿಯು ಆಗ್ರಹಿಸಿದೆ.

ದೇಶಾದ್ಯಂತ ಸಾವಿರಾರು ಸಣ್ಣ ಮತ್ತು ಮಧ್ಯಮ ಗಾತ್ರದ ಘಟಕಗಳು ಮುಚ್ಚಿವೆ, ವ್ಯವಹಾರಗಳು ನಿಂತು ಹೋಗಿವೆ. ಲಕ್ಷಾಂತರ ಕಾಟ್ರಾಕ್ಟ್, ಕ್ಯಾಶುವಲ್ ಕಾರ್ಮಿಕರು, ನಿಗದಿತ ಅವಧಿಯ ನೌಕರರು, ಟ್ರೈನೀಗಳು, ಅಪ್ರೆಂಟಿಸ್‌ಗಳು ಮುಂತಾದವರನ್ನು ಸಂಬಳ ಕೊಡದೇ ವಜಾ ಮಾಡಲಾಗಿದೆ. ಕಟ್ಟಡ ಕೆಲಸ, ಇಟ್ಟಿಗೆ ಗೂಡುಗಳು ಮತ್ತು ಪ್ಲಾಂಟೇಶನ್‌ಗಳಲ್ಲಿ ಕೆಲಸಮಾಡುತ್ತಿದ್ದ ವಲಸೆ ಕಾರ್ಮಿಕರು ಕೆಲಸ ಸಿಗದ್ದರಿಂದಾಗಿ ತಮ್ಮ ಊರುಗಳಿಗೆ ಮರಳಬೇಕಾಗಿ ಬಂದಿದೆ. ಸಾರಿಗೆ, ವಾಹನಗಳಿಗೆ ಪೂರಕವಾದ ಉತ್ಪಾದನೆ, ಪವರ್‌ಲೂಮ್ ಮುಂತಾದವುಗಳನ್ನು ಈ ಕ್ರಮಗಳು ಗಂಭೀರವಾಗಿ ತಟ್ಟಿವೆ. ಕಾರ್ಮಿಕರಿಗೆ ಸಂಬಳ ಕೊಟ್ಟಿಲ್ಲ. ಹಲವು ಕಡೆಗಳಲ್ಲಿ ಮಾಲಕರು ಹಳೆಯ ನೋಟುಗಳ ವಿನಿಮಯದ ವೆಚ್ಚಗಳನ್ನು ಹಂಚಿಕೊಳ್ಳುವಂತೆ ಕಾರ್ಮಿಕರನ್ನು ಬಲವಂತ ಮಾಡುತ್ತಿದ್ದಾರೆ ಎಂದು ಸಿಐಟಿಯು ಕಾರ್ಯದರ್ಶಿ ಮಂಡಳಿ ಹೇಳಿದೆ.

ಇದು ಕಪ್ಪು ಹಣವನ್ನು ದಮನ ಮಾಡುವ ಕ್ರಮ ಎಂದಿದ್ದ ಸರಕಾರ ಈಗ 'ನಗದುರಹಿತ ಆರ್ಥಿಕ'ದ ಮಾತಾಡಲಾರಂಭಿಸಿದೆ. 35% ಹಳ್ಳಿಗಳಲ್ಲಿ ಬ್ಯಾಂಕ್ ಸೌಲಭ್ಯಗಳೇ ಇಲ್ಲದಿರುವಾಗ, 6ಲಕ್ಷ ಹಳ್ಳಿಗಳ ಪೈಕಿ ಕೇವಲ 9000 ಹಳ್ಳಿಗಳನ್ನು ಅಂತರ್ಜಾಲ ತಲುಪಿರುವಾಗ 'ನಗದುರಹಿತ'ದ ಬಗ್ಗೆ ಮಾತಾಡುವುದು ಹಾಸ್ಯಾಸ್ಪದ ಎಂದಿರುವ ಸಿಐಟಿಯು ಬಹುಪಾಲು ಅಸಂಘಟಿತ ವಲಯದ ಕಾರ್ಮಿಕರು ಮತ್ತು ದಿನಗೂಲಿಗಳು ಸರಿಯಾದ ಬ್ಯಾಂಕ್ ಖಾತೆಗಳನ್ನು ಹೊಂದಿಲ್ಲದಿರುವಾಗ ಬ್ಯಾಂಕುಗಳ ಮೂಲಕ ಸಂಬಳ ಪಾವತಿ ಕಡ್ಡಾಯ ಮಾಡುತ್ತಿರುವುದು ಮಾಲಕರ ಸಬಲೀಕರಣವಾಗುತ್ತದೆ ಎಂದು ಹೇಳಿದೆ. ಇದನ್ನು ವಸತಿಪ್ರದೇಶಗಳ ಬಳಿ ಬ್ಯಾಂಕು ಶಾಖೆಗಳನ್ನು ತೆರೆದು ಎಲ್ಲ ಕಾರ್ಮಿಕರು ಖಾತೆಗಳನ್ನು ಹೊಂದಿದಾಗಲಷ್ಟೇ, ಅದೂ ಕಾರ್ಮಿಕರ ಒಪ್ಪಿಗೆಯೊಂದಿಗೆ ಮಾತ್ರ ಇದು ಸಾಧ್ಯ ಎಂದು ಸಿಐಟಿಯು ಹೇಳಿದೆ.

ಪ್ರತಿದಿನ ಸರಕಾರ ಬ್ಯಾಂಕುಗಳಿಂದ ಹಣ ಹಿಂತೆಗೆದುಕೊಳ್ಳುವುದರ ಮೇಲೆ ಹೊಸ–ಹೊಸ ಮಿತಿಗಳನ್ನು ಹಾಕುತ್ತಿದೆ. ಇದು ಜನಗಳಿಂದ ಹಣವನ್ನು ಸೆಳೆದುಕೊಂಡು ಕಾರ್ಪೊರೇಟ್‌ಗಳಿಗೆ ಮತ್ತು ದೊಡ್ಡ ಬಂಡವಳಿಗರಿಗೆ ಅಗ್ಗದಲ್ಲಿ ಹಣಕಾಸು ಒದಗಿಸುವ ಆಶಯವನ್ನು ಮಾತ್ರ ಹೊಂದಿರುವಂತಿದೆ ಎಂದು ಅಭಿಪ್ರಾಯ ಪಟ್ಟಿರುವ ಸಿಐಟಿಯು ದೇಶಾದ್ಯಂತ ದೊಡ್ಡ ಸಂಖ್ಯೆಯಲ್ಲಿ ಈ ಪ್ರತಿಭಟನೆಗಳಲ್ಲಿ ಭಾಗವಹಿಸಬೇಕು ಎಂದು ಕಾರ್ಮಿಕರಿಗೆ ಕರೆ ನೀಡಿದೆ.

ಜನವರಿ 17: ರೋಹಿತ್ ವೇಮುಲ ನೆನಪಿನಲ್ಲಿ

'ದಲಿತ ಹಕ್ಕುಗಳ ದಿನಾಚರಣೆ'

ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿ ರೋಹಿತ್ ವೇಮುಲ ಆತ್ಮಹತ್ಯೆಯ ಘಟನೆ ಸಂಭವಿಸಿ ಈ ಜನವರಿ 17ಕ್ಕೆ ಒಂದು ವರ್ಷವಾಗುತ್ತದೆ. ದೇಶಾದ್ಯಂತ ಪ್ರತಿಭಟನೆಗಳು ನಡೆದರೂ ಆತನ ಸಾವಿಗೆ ಕಾರಣರಾದವರು ಇನ್ನೂ ಯಾವುದೇ ಶಿಕ್ಷೆಯಿಲ್ಲದೆ ಅಡ್ಡಾಡಿಕೊಂಡು ಇದ್ದಾರೆ, ಪ್ರಮುಖ ಆಪಾದಿತ ವಿವಿಯ ಉಪಕುಲಪತಿ ಪೀಠದ ಸೌಲಭ್ಯಗಳನ್ನೆಲ್ಲ ಅನುಭವಿಸಿಕೊಂಡು ಆರಾಮವಾಗಿದ್ದಾರೆ. ಯಾವುದೇ ಕ್ರಮಗಳನ್ನು ಕೈಗೊಳ್ಳುವ ಬದಲು ಮಾನವ ಸಂಪನ್ಮೂಲ ಮಂತ್ರಾಲಯ ರೋಹಿತ್‌ನ ಜಾತಿಯ ಬಗ್ಗೆ ಮಾಹಿತಿಗಳನ್ನು ಅಗೆದು ತೆಗೆಯುವ ಕಾನೂನುಬಾಹಿರ, ಅಸಂವಿಧಾನಿಕ ಪ್ರಯತ್ನ ನಡೆಸಿದೆ ಎಂದು ಖೇದ ವ್ಯಕ್ತಪಡಿಸಿರುವ ದಲಿತ ಶೋಷಣ ಮುಕ್ತಿ ಮಂಚ್ ಮತ್ತಿತರ ಒಟ್ಟು ಏಳು ಸಂಘಟನೆಗಳು ರೋಹಿತ್ ವೇಮುಲಾ ಮೊದಲ ಮರಣ ವಾರ್ಷಿಕದಂದು 'ದಲಿತ ಹಕ್ಕುಗಳ ದಿನಾಚರಣೆ' ನಡೆಸಲು ಕರೆ ನೀಡಿವೆ.

ರೋಹಿತ್ ಸಾವಿಗೆ ಕಾರಣರಾದವರನ್ನು ತಕ್ಷಣವೇ ಬಂಧಿಸಿ ಆತನ ಕುಟುಂಬಕ್ಕೆ ನ್ಯಾಯ ಒದಗಿಸಬೇಕು, ಎಲ್ಲ ಶೈಕ್ಷಣಿಕ ಸಂಸ್ಥೆಗಳಲ್ಲಿ ಸಾಮಾಜಿಕವಾಗಿ ಹಿಂದುಳಿದ ವಿಭಾಗಗಳ ವಿದ್ಯಾರ್ಥಿಗಳಿಗೆ ರಕ್ಷಣೆ ಕೊಡಲು ರೋಹಿತ್ ಕಾಯ್ದೆ ತರಬೇಕು ಎಂದು ಈ ಸಂಘಟನೆಗಳು ಆಗ್ರಹಿಸಿವೆ. ಜನವರಿ 17ರಂದು ರಾಜ್ಯ ಮತ್ತು ಜಿಲ್ಲಾ ಮಟ್ಟಗಳಲ್ಲಿ ರೋಹಿತ್ ವೇಮುಲಾ ಸ್ಮರಣ ಸಭೆಗಳನ್ನು ನಡೆಸಬೇಕು ಎಂದು ಎಲ್ಲ ಪ್ರಜಾಪ್ರಭುತ್ವವಾದಿ ಮತ್ತು ದಲಿತ ಸಂಘಟನೆಗಳಿಗೆ ಮನವಿ ಮಾಡಿಕೊಂಡಿರುವ ಜಂಟಿ ಮನವಿಗೆ ಭಾರತ ರಿಪಬ್ಲಿಕನ್ ಪಕ್ಷದ ಪ್ರಕಾಶ ಅಂಬೇಡ್ಕರ್, ದಲಿತ ಶೋಷಣ ಮುಕ್ತಿ ಮಂಚ್‌ನ ವಿ.ಶ್ರೀನಿವಾಸ ರಾವ್, ಭಾರತೀಯ ಮಜ್ದೂರ್ ಯೂನಿಯನ್‌ನ ವಿ.ಎಸ್‌ನಿರ್ಮಲ್, ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘದ ತಿರುನಾವಕ್ಕರಸು, ದಲಿತ ಹಕ್ಕುಗಳ ರಾಷ್ಟ್ರೀಯ ಒಕ್ಕೂಟದ ಜೆ.ಮಲ್ಲೇಶ್, ರಾಷ್ಟ್ರೀಯ ದಲಿತ ಮಾನವ ಅಧಿಕಾರ್ ಆಂದೋಲನ್‌ದ ಪೌಲ್ ದಿವಾಕರ್ ಹಾಗೂ ಅಖಿಲ ಭಾರತ ದಲಿತ ಹಕ್ಕುಗಳ ಒಕ್ಕೂಟದ ಕೆ. ಆನಂದ ರಾವ್ ಸಹಿ ಹಾಕಿದ್ದಾರೆ.

ಆರ್‌ಬಿಐನ ತಿಕ್ಕಲು ಆದೇಶ: ಅನಾಣ್ಯೀಕರಣದ ಅಧ್ವಾನವನ್ನು ಮುಚ್ಚಿಕೊಳ್ಳಲು

ಜನಗಳ ಮೇಲೆಯೇ ಗೂಬೆ ಕೂರಿಸುವ ಪ್ರಯತ್ನ–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಹಳೆಯ ನೋಟುಗಳನ್ನು ಕೊಡಲು ಡಿಸೆಂಬರ್ 30ರ ವರೆಗೂ ಸಮಯ ಇದೆ, ಜನ ಆತುರ ಪಡಬೇಕಾಗಿಲ್ಲ ಎಂದ ಸರಕಾರ ಮತ್ತು ರಿಝರ್ವ್ ಬ್ಯಾಂಕ್ ಆಫ್ ಇಂಡಿಯಾ(ಆರ್‌ಬಿಐ) ಡಿಸೆಂಬರ್ 19ರಂದು 5000ರೂ.ಗಿಂತ ಹೆಚ್ಚು ಹಳೆಯ ನೋಟುಗಳನ್ನು ಡಿಪಾಸಿಟ್ ಮಾಡಲು ಮತ್ತಷ್ಟು ಮಿತಿಗಳನ್ನು ಹೇರಿತು. ಆರ್‌ಬಿಐನ ಈ ಕ್ರಮ ತಿಕ್ಕಲುತನದ್ದಾಗಿದ್ದು ಜನ–ವಿರೋಧಿಯಾಗಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಆದೇಶವನ್ನು ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿತು.

ನಿಜ ಹೇಳಬೇಕೆಂದರೆ, ಚಲಾವಣೆಯಿಂದ ಹಿಂತೆಗೆದುಕೊಂಡ ಸುಮಾರಾಗಿ ಎಲ್ಲ ಹಣವೂ ಬ್ಯಾಂಕಿಂಗ್ ವ್ಯವಸ್ಥೆಗೆ ಹಿಂದೆ ಬಂದಿದ್ದು ಕಪ್ಪುಹಣ ನಿರ್ಮೂಲನದ ದಾವೆ ಸುಳ್ಳು ಎಂಬುದು ಬಯಲಾಗಿರುವುದರಿಂದಾಗಿ ಇಂತಹ ಆದೇಶಗಳು ಬರುತ್ತಿವೆ ಎಂದಿರುವ ಪೊಲಿಟ್‌ಬ್ಯುರೊ ಈಗ ಹಾಕಿರುವ ಮಿತಿಗಳನ್ನೆಲ್ಲ ತೆಗೆದು ಪರ್ಯಾಯ ವ್ಯವಸ್ಥೆ ಆಗುವ ವರೆಗೆ ಹಳೆಯ ನೋಟುಗಳ ಚಲಾವಣೆಗೆ ಅವಕಾಶ ಕೊಡಬೇಕು ಎಂದು ಮತ್ತೆ ಆಗ್ರಹಿಸಿದೆ.

ಅನಾಣ್ಯೀಕರಣದಿಂದ ಜನಸಾಮಾನ್ಯರ ಮೇಲೆ, ಅದರಲ್ಲೂ ರೈತರ ಮೇಲೆ ವಿಪರೀತ ಸಂಕಟಗಳನ್ನು ಹೇರಿರುವಾಗ ಅವುಗಳಿಗೆ ಪರಿಹಾರ ಒದಗಿಸುವ ಬದಲು ಕೇಂದ್ರ ಸರಕಾರ ಇಂತಹ ಮಿತಿಗಳನ್ನು ಮತ್ತೆ–ಮತ್ತೆ ಹಾಕಿ ಅವರ ಪರಿಸ್ಥಿತಿಯನ್ನು ಇನ್ನಷ್ಟು ಶೋಚನೀಯಗೊಳಿಸುತ್ತಿದೆ, ಹಳೆಯ ನೋಟುಗಳನ್ನು ಕೊಡಲು ಸಾಕಷ್ಟು ಸಮಯ ಇದೆ, ಆತುರ ಬೇಡ ಎಂದ ಸರಕಾರ, ಈ ಮೊದಲೇ ಏಕೆ ಕೊಟ್ಟಿಲ್ಲ ಎಂದು ಈ ಆದೇಶದಮೂಲಕ ಪೀಡಿಸ ಹೊರಟಿತು.

ಅನಾಣ್ಯೀಕರಣದ ಜಾರಿಯಲ್ಲಿ ಮಾಡಿಕೊಂಡಿರುವ ಎಡವಟ್ಟುಗಳು ಮತ್ತು ಕಪ್ಪುಹಣ ಮತ್ತು ಭ್ರಷ್ಟಾಚಾರದ ನಿರ್ಮೂಲನೆಯ ಹೆಸರಲ್ಲಿ ಆಗಿರುವ ಅಧ್ವಾನವನ್ನು ಮುಚ್ಚಿಕೊಳ್ಳಲು ಸಾಮಾನ್ಯ ಜನಗಳು ದೊಡ್ಡ ಪ್ರಮಾಣದಲ್ಲಿ ಕಪ್ಪುಹಣವನ್ನು ಬಿಳಿಮಾಡುತ್ತಿದ್ದಾರೆ ಎಂಬಂತೆ ಬಿಂಬಿಸಲು ಪ್ರಯತ್ನಿಸುತ್ತಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖೇದ ವ್ಯಕ್ತಪಡಿಸಿದೆ.

ಆರ್‌ಬಿಐನ ಇತ್ತೀಚಿನ ಈ ಆದೇಶಕ್ಕೆ ದೇಶವ್ಯಾಪಿ ವಿರೋಧ ವ್ಯಕ್ತಪಟ್ಟಮೇಲೆ ಈ ಆದೇಶವನ್ನು ಮರುದಿನವೇ ಕೊನೆಗೂ 'ಮಾರ್ಪಡಿಸ'ಲಾಯಿತು ಎಂಬುದು ಅನಾಣ್ಯೀಕರಣ ಎಂಬ ಅಧ್ವಾನದ ಬಗ್ಗೆ ಸಿಪಿಐ(ಎಂ)ನ ಅಭಿಪ್ರಾಯವನ್ನು ಸಮರ್ಥಿಸುತ್ತದೆ.

ಎನ್‌ಜಿಒಗಳ ಎಫ್‌ಸಿಆರ್‌ಎ ನೋಂದಣಿ ರದ್ದು

ಹಗೆ ತೀರಿಸುವ ಹೊಲಸು ರಾಜಕೀಯ ಪ್ರೇರಿತ

ಪ್ರಧಾನ ಮಂತ್ರಿಗಳಿಗೆ ಸಂಸತ್ ಸದಸ್ಯರ ಪತ್ರ

ಸರ್ಕಾರೇತರ ಸಂಘಟನೆಗಳು, ಅಂದರೆ ಎನ್‌ಜಿಒಗಳು ವಿದೇಶಗಳಿಂದ ವಂತಿಗೆ ಪಡೆಯಬೇಕಾದರೆ ವಿದೇಶಿ ವಂತಿಗೆ ನಿಯಂತ್ರಣ ಕಾಯ್ದೆಯ (ಎಫ್‌ಸಿಆರ್‌ಎ) ಅಡಿಯಲ್ಲಿ ನೋಂದಣಿ ಮಾಡಿಕೊಳ್ಳಬೇಕು. ಈ ರೀತಿ ನೋಂದಣಿ ಮಾಡಿಕೊಂಡು ವಿದೇಶಿ ವಂತಿಗೆಗಳನ್ನು ಪಡೆಯುತ್ತಿದ್ದ ಕೆಲವು ಎನ್‌ಜಿಒಗಳ ಪರವಾನಿಗೆಗಳನ್ನು ಈ ಬಾರಿ ನವೀಕರಿಸಿದ ಮರುದಿನವೇ ಅವುಗಳ ಎಫ್‌ಸಿಆರ್‌ಎ ನೋದಂಣಿಗಳನ್ನು ರದ್ದು ಮಾಡಲಾಗಿದೆ. ಈ ಬಗ್ಗೆ ದೇಶವ್ಯಾಪಿಯಾಗಿ ಪ್ರತಿಭಟನೆಗಳು ವ್ಯಕ್ತವಾಗಿವೆ.

ಈ ರೀತಿ ರದ್ದು ಮಾಡಿರುವ ಪಟ್ಟಿಯಲ್ಲಿ ಗುಜರಾತಿನ 2002ರ ಹತ್ಯಾಕಾಂಡಗಳಲ್ಲಿ ನೊಂದವರಿಗೆ ನ್ಯಾಯ ಕೊಡಿಸಲು ಹೋರಾಡುತ್ತಿರುವ ತೀಸ್ತಾ ಸೆಟಲ್‌ವಾಡ್‌ರವರ ಸಂಘಟನೆ, ಕೋಮುವಾದದ ವಿರುದ್ಧ ಸದಾ ದನಿಯೆತ್ತುವ ಸಬ್‌ರಂಗ್, ಸರಕಾರದ ಕ್ರಮಗಳ ವಿಮರ್ಶೆ ಮಾಡುವ ಲಾಯರ್ಸ್ ಕಲೆಕ್ಟಿವ್ ಮಂತಾದವುಗಳ ಹೆಸರು ಕಾಣಬರುತ್ತದೆ.

ಸರಕಾರದ ಈ ಕ್ರಮವನ್ನು ಖಂಡಿಸಿ ವಿವಿಧ ಪಕ್ಷಗಳ ಸಂಸತ್ ಸದಸ್ಯರು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದು ಇದನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕೆಂದು ಆಗ್ರಹಿಸಿದ್ದಾರೆ.

ಈ ಸಂಘಟನೆಗಳ ಪರವಾನಿಗೆಗಳನ್ನು ನವೀಕರಿಸಲಾಯಿತು ಎಂದರೆ ಅವು ಎಫ್‌ಸಿಆರ್‌ಎ ನೋಂದಣಿಗೆ ಬೇಕಾದ ಶರತ್ತುಗಳನ್ನು ಪೂರೈಸಿವೆ ಎಂದೇ ಅರ್ಥ. ಆದ್ದರಿಂದ ಅವುಗಳ ನೋಂದಣಿಯನ್ನು ರದ್ದು ಮಾಡಿರುವುದರ ಹಿಂದೆ ಹಗೆತೀರಿಸುವ ರಾಜಕೀಯದ, ಅವನ್ನು ಬಲಿ ಹಾಕುವ ಮತ್ತು ಅವು ಬಾಯಿ ಮುಚ್ಚಿಕೊಳ್ಳುವಂತೆ ಬೆದರಿಸುವ ಉದ್ದೇಶ ಇದೆ ಎಂದು ಈ ಸಂಸತ್ ಸದಸ್ಯರು ಪ್ರಧಾನ ಮಂತ್ರಿಗಳಿಗೆ ಹೇಳಿದ್ದಾರೆ.

ತದ್ವಿರುದ್ಧವಾಗಿ, ವಿದೇಶಗಳಿಂದ ಹೇರಳವಾಗಿ ಧನ ಸಂಗ್ರಹಿಸಿ ಅವನ್ನು ದ್ವೇಷಪೂರ್ಣ ಅಜೆಂಡಾದ ಸಾಧನೆಗೆ ಬಳಸಿಕೊಳ್ಳುತ್ತಿರುವ ಆರೆಸ್ಸೆಸ್‌ಗೆ ಸೇರಿದ ಹಲವು ಸಂಘಟನೆಗಳಿವೆ. ಅವುಗಳ ಬಗ್ಗೆ ಸರಕಾರ ಏನೂ ತನಿಖೆ ನಡೆಸುತ್ತಿಲ್ಲ ಎಂಬುದನ್ನೂ ಪ್ರಧಾನ ಮಂತ್ರಿಗಳ ಗಮನಕ್ಕೆ ತಂದಿರುವ ಈ ಪತ್ರ ಈ ರೀತಿ ಸಂಘಟನೆಗಳನ್ನು ಆರಿಸಿ–ಆರಿಸಿ ಅವುಗಳ ಮೇಲೆ ಗುರಿಯಿಡುವುದು ಜುಗುಪ್ಸೆ ತರುವಂತದ್ದು ಮತ್ತು ಪ್ರಜಾಪ್ರಭುತ್ವ–ವಿರೋಧಿ ಕ್ರಮ ಎಂದು ಸ್ಪಷ್ಟಮಾತುಗಳಲ್ಲಿ ಹೇಳಿದೆ.

ತೀಸ್ತಾ ಸೆಟಲ್‌ವಾಡ್ ನಡೆಸುತ್ತಿರುವ ಸಬ್‌ರಂಗ್ ಟ್ರಸ್ಟ್ ಮತ್ತಿತರ ಸಂಘಟನೆಗಳು, ಅನ್ಹದ್,ಲಾಯರ್ಸ್ ಕಲೆಕ್ಟಿವ್, ಗ್ರೀನ್‌ಪೀಸ್ ಇಂಡಿಯಾ, ನವಸರ್ಜನ್ ಟ್ರಸ್ಟ್, ಆರ್‌ಡಿಆರ್‌ಸಿ ಮುಂತಾದ ಸಂಘಟನೆಗಳ ನೋಂದಣಿಯನ್ನು ರದ್ದು ಮಾಡಿರುವುದನ್ನು ಹಿಂತೆಗೆದುಕೊಳ್ಳಬೇಕು ಮತ್ತು ಅವುಗಳ ಪರವಾನಿಗೆಗಳನ್ನು ಮತ್ತೆ ಊರ್ಜಿತಗೊಳಿಸಬೇಕು ಎಂದು ಈ ಸಂಸತ್ ಸದಸ್ಯರು ಪ್ರಧಾನ ಮತ್ರಿಗಳಿಗೆ ಬರೆದ ಪತ್ರದಲ್ಲಿ ಆಗ್ರಹಿಸಿದ್ದಾರೆ.

ಸಿಪಿಐ(ಎಂ)ನ ಸೀತಾರಾಮ್ ಯೆಚೂರಿ ಮತ್ತು ಪಿ.ಕರುಣಾಕರನ್, ಸಿಪಿಐನ ಡಿ.ರಾಜ, ಕಾಂಗ್ರೆಸ್‌ನ ಅಹಮದ್ ಪಟೇಲ್ ಮತ್ತು ರೇಣುಕಾ ಚೌಧುರಿ, ಆರ್‌ಜೆಡಿಯ ಪ್ರೇಮಚಂದ್ ಗುಪ್ತ, ಎನ್‌ಸಿಪಿಯ ಪ್ರಫುಲ್ಲ ಪಟೇಲ್ ಮತ್ತು ಸುಪ್ರಿಯಾ ಸುಳೆ, ಸಮಾಜವಾದಿ ಪಕ್ಷದ ನೀರಜ್ ಶೇಖರ್ ಮತ್ತಿತರರು ಈ ಪತ್ರಕ್ಕೆ ಸಹಿ ಹಾಕಿದ್ದಾರೆ.

ರವಿಶಂಕರ ಪ್ರಸಾದ್ ಪ್ರಧಾನಿ ಗಂಗಾದಷ್ಟು ಸ್ವಚ್ಛ ಅಂತಾರೆ. ಗಂಗಾ ನದಿಯ ವಿಷ ಮತ್ತು ಮಾಲಿನ್ಯಗಳನ್ನು ತೊಡೆಯಲು ಕೈಗೊಂಡ ಸರಕಾರದ 'ಸ್ವಚ್ಛಗಂಗಾ' ಯೋಜನೆ ವಿಫಲವಾಗಿದೆ ಎಂದು ಅವರಿಗೆ ಗೊತ್ತಿಲ್ಲ ಅಂತ ಕಾಣುತ್ತದೆ.

ಬೃಂದಾ ಕಾರಟ್



ಡಿಸೆಂಬರ್ 15ರಂದು ದಿಲ್ಲಿಯಲ್ಲಿ ಅರಣ್ಯ ಹಕ್ಕುಗಳ ಕಾಯ್ದೆ ಅಂಗೀಕಾರದ ಹತ್ತನೇ ವರ್ಷಿಕೋತ್ಸವದ ಆಚರಣೆ ನಡೆಸಲಾಯಿತು. ಬೃಂದಾ ಕಾರಟ್, ಹನ್ನನ್ ಮೊಲ್ಲ, ಜಿತೇಂದ್ರ ಚೌಧುರಿ ಮುಂತಾದ ವಿವಿಧ ಸಂಘಟನೆಗಳ ಮುಖಂಡರು ಮಾತಾಡಿದರು. ಎಡಪಕ್ಷಗಳು ಮತ್ತಿತರ ಸಂಘಟನೆಗಳ ಹಲವು ವರ್ಷಗಳ ಹೋರಾಟದ ಫಲವಾಗಿ ಬಂದ ಈ ಕಾನೂನನ್ನು ದುರ್ಬಲಗೊಳಿಸಲು ಪ್ರಸಕ್ತ ಸರಕಾರ ಪ್ರಯತ್ನಿಸುತ್ತಿದೆ ಎಂಬ ಸಂಗತಿಯತ್ತ ಈ ಸಭೆ ಗಮನ ಸೆಳೆಯಿತು.

'ನಗದು ಕೂಪನ್ ಭಾಗ್ಯ'ವೇ ಅಥವಾ ರೇಶನ್ ವ್ಯವಸ್ಥೆ ನಾಶದ ಹುನ್ನಾರವೇ?

ಸಂಪಾದಕೀಯ

'ಅನ್ನಭಾಗ್ಯ'ದ ಬದಲು ನಗದು ರೂಪದ ಕೂಪನ್ ನೀಡುವ ಪದ್ಧತಿಯನ್ನು ಪ್ರಾಯೋಗಿಕವಾಗಿ ಜಾರಿ ಮಾಡಲಾಗುವುದು ಎಂಬ ಆಹಾರ ಮತ್ತು ನಾಗರಿಕ ಪೂ–ರೈಕೆ ಸಚಿವ ಯು.ಟಿ. ಖಾದರ್ ಅವರ ಇತ್ತೀಚಿನ ಘೋಷಣೆ ತೀವ್ರ ಅನುಮಾನ ಆತಂಕಗಳನ್ನು ಉಂಟು ಮಾಡಿದೆ.

ಬಿಪಿಎಲ್ ಪಡಿತರ ಫಲಾನುಭವಿಗಳಿಗೆ ಪಡಿತರಕ್ಕೆ ಬದಲಾಗಿ ಸಹಾಯಧನ ಮೊತ್ತದ ನಗದು ಕೂಪನ್ ನೀಡಲು ರಾಜ್ಯ ಸರಕಾರ ನಿರ್ಧರಿಸಿದೆ ಪಡಿತರ ಚೀಟಿದಾರರು ತಮ್ಮ ಆಯ್ಕೆಯ ಆಹಾರಧಾನ್ಯಗಳನ್ನು ನೋಂದಾಯಿತ ದಿನಸಿ ಮಳಿಗೆಗಳಲ್ಲಿ ಖರೀದಿಸಲು ಅವಕಾಶ ಕಲ್ಪಿಸಲಾಗುವುದಂತೆ. ಪ್ರಸ್ತುತ ಪಡಿತರ ಚೀಟಿದಾರರಿಗೆ ಯೂನಿಟ್ ಪದ್ಧತಿಯಡಿ ನ್ಯಾಯಬೆಲೆ ಅಂಗಡಿಗಳಲ್ಲಿ ನಿಗದಿತ ಪ್ರಮಾಣದಲ್ಲಿ ಪಡಿತರ ವಿತರಣೆ ಮಾಡಲಾಗುತ್ತಿದೆ. ಹೊಸ ತೀರ್ಮಾನದಂತೆ ಪಡಿತರ ಚೀಟಿದಾರರಿಗೆ ಅಕ್ಕಿ, ಸಕ್ಕರೆ, ತಾಳೇಎಣ್ಣೆ, ಉಪ್ಪು ವಿತರಣೆ ಬದಲಿಗೆ ಈ ದಿನಸಿಗಳ ಮೊತ್ತದ ನಗದು ಕೂಪನ್ ನೀಡಲಾಗುವುದು. ಆ ಕೂಪನ್ ಪಡೆದು ಫಲಾನುಭವಿಗಳು ನೋಂದಾಯಿತ ಮಳಿಗೆಗಳಿಗೆ ತೆರಳಿ ಆಹಾರ ಧಾನ್ಯಗಳನ್ನು ಖರೀದಿಸಬಹುದಂತೆ. ಆಹಾರ ಧಾನ್ಯಗಳ ಕೂಪನ್ ಬದಲು ನಗದು ಕೂಪನ್ನಿಂದ ಪಡಿತರ ಪಡೆಯಲು ಮನೆಯ ಒಡತಿ ಹೋಗಬೇಕಾಗುತ್ತದೆ. ಆಕೆಯ ಬಯೋಮೆಟ್ರಿಕ್ ಪಡೆದು ಆಹಾರಧಾನ್ಯ ವಿತರಿಸಲಾಗುವುದು. ಇದಕ್ಕಾಗಿ ಖಾಸಗಿ ಅಂಗಡಿಗಳ ಜತೆ ಆಹಾರ ಇಲಾಖೆ ಒಪ್ಪಂದ ಮಾಡಿಕೊಳ್ಳಲಿದೆ. ಆಹಾರ ಇಲಾಖೆಯಿಂದ ನೋಂದಣಿ ಗೊಂಡಿರುವ ಅಂಗಡಿಗಳು ಬಯೋಮೆಟ್ರಿಕ್ ಯಂತ್ರ, ಲ್ಯಾಪ್ಟಾಪ್ ಇಟ್ಟುಕೊಳ್ಳುವುದು ಕಡ್ಡಾಯ ಎಂದು ಸಚಿವರು ಹೊಸ 'ವ್ಯವಸ್ಥೆ'ಯ ಬಗ್ಗೆ ಮಾಹಿತಿ ನೀಡಿದ್ದಾರೆ.

ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಘಟಕ ಪದ್ಧತಿಯ ಅನುಸಾರ ಒಬ್ಬ ವ್ಯಕ್ತಿಗೆ 5 ಕೆ.ಜಿ. ಅಕ್ಕಿ ನೀಡಲಾಗುತ್ತಿದೆ. ಒಂದು ಕುಟುಂಬಕ್ಕೆ ಒಂದು ಕೆ.ಜಿ.ಸಕ್ಕರೆ ನೀಡಲಾಗುತ್ತದೆ. ಇದರ ಬದಲು 1 ಕೆ.ಜಿ. ಅಕ್ಕಿಗೆ ತಲಾ 27 ರಂತೆ, 1 ಕೆ.ಜಿ. ಸಕ್ಕರೆಗೆ ರೂ. 20 ರಂತೆ ನಗದು ರೂಪದ ಕೂಪನ್ ನೀಡಲಾಗುತ್ತದೆ. 5 ಸದಸ್ಯರಿರುವ ಕುಟುಂಬಕ್ಕೆ ತಿಂಗಳಿಗೆ ಅಂದಾಜು ರೂ. 800 ಮೊತ್ತದ ಕೂಪನ್ ಸಿಗಲಿದೆ ಎಂದು ಸಚಿವ ಖಾದರ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ಅವರ ಹೇಳಿಕೆ ಪ್ರಕಾರ ಆಹಾರ ಇಲಾಖೆಯಲ್ಲಿ ನೋಂದಾಯಿಸಿಕೊಂಡ ಆಯಾ ನ್ಯಾಯಬೆಲೆ ಅಂಗಡಿ ವ್ಯಾಪ್ತಿಯ ದಿನಸಿ ಅಂಗಡಿಗೆ ಹೋಗಿ ಈ ಕೂಪನ್ ನೀಡಿ ಅಕ್ಕಿ, ಗೋಧಿ, ಬೇಳೆ ಸೇರಿದಂತೆ ಆಹಾರ ಉತ್ಪನ್ನಗಳನ್ನು ಮಾತ್ರ ಖರೀದಿಸಬಹುದು. ಬೇರೆ ಯಾವುದೇ ವಸ್ತು ಖರೀದಿಸಲು ಅವಕಾಶ ಇರುವುದಿಲ್ಲ ಎಂದೂ ಅವರು ಸ್ಪಷ್ಟನೆ ನೀಡಿದ್ದಾರೆ.

ಬೆಂಗಳೂರು, ಮೈಸೂರು ಹಾಗೂ ಮಂಗಳೂರು ಜಿಲ್ಲೆಗಳ ಆಯ್ದ ನ್ಯಾಯಬೆಲೆ ಅಂಗಡಿಗಳ ವ್ಯಾಪ್ತಿಯ ಸುಮಾರು 5000 ಪಡಿತರ ಚೀಟಿದಾರರಿಗೆ ಅನ್ವಯವಾಗುವಂತೆ ಬಡತನ ರೇಖೆಗಿಂತ ಕೆಳಗಿರುವ (ಬಿಪಿಎಲ್) ಕುಟುಂಬಗಳಿಗೆ 2017ರ ಜನವರಿ ಅಥವಾ ಫೆಬ್ರವರಿ ತಿಂಗಳಿನಿಂದ ಪ್ರಾಯೋಗಿಕವಾಗಿ ಈ ಯೋಜನೆ ಜಾರಿಮಾಡಲು ತೀರ್ಮಾನಿಸಲಾಗಿದೆ. ಯೋಜನೆಯ ಯಶಸ್ಸು ಗಮನಿಸಿ ಉಳಿದ ಜಿಲ್ಲೆಗಳಿಗೆ ವಿಸ್ತರಿಸಲಾಗುವುದು ಎಂದೂ ಖಾದರ್ ಅವರು ತಿಳಿಸಿದ್ದಾರೆ.

ಈ ಹಠಾತ್ ನಿರ್ಣಯಕ್ಕೆ ಕಾರಣವೇನು? "ಅನ್ನಭಾಗ್ಯದ ಅಕ್ಕಿ ಉತ್ತಮ ಗುಣಮಟ್ಟದಿಂದ ಕೂಡಿಲ್ಲ ಎಂಬ ಪಡಿತರ ಚೀಟಿದಾರರ ಆಕ್ಷೇಪ ಇದರಿಂದ ತಪ್ಪಲಿದೆ. ತಮಗೆ ಬೇಕಾಗಿರುವುದನ್ನು ಖರೀದಿಸಲು ಅವಕಾಶ ಸಿಗಲಿದೆ. ಸರ್ಕಾರಕ್ಕೂ ಉಳಿತಾಯವಾಗಲಿದೆ" ಎಂಬುದು ಖಾದರ್ ಅವರು ಕೊಟ್ಟ ಕೆಲವು ಕಾರಣಗಳು. ಅನ್ನಭಾಗ್ಯದಲ್ಲಿ ಉತ್ತಮ ಗುಣಮಟ್ಟದ ಆಹಾರಧಾನ್ಯ ಪೂರೈಸುವುದು ಅಂಥ ಅಸಾಧ್ಯ ಕೆಲಸವೇ? ಆಹಾರಧಾನ್ಯಗಳ ಖರೀದಿ, ಧಾಸ್ತಾನು, ವಿತರಣೆಗಳಲ್ಲಿ ನಡೆಯುತ್ತಿರುವ ಅಕ್ರಮಗಳನ್ನೂ, ಅವ್ಯವಸ್ಥೆಗಳನ್ನೂ ಕಾಳಸಂತೆಯನ್ನೂ ನಿಯಂತ್ರಿಸುವುದು ಅಸಾಧ್ಯವೇ? ಸರಕಾರ ತನ್ನ ಅದಕ್ಷತೆಯನ್ನು ಒಪ್ಪಿಕೊಳ್ಳುತ್ತಿದೆಯೇ? ಬಡವರಿಗೆ ಆಹಾರ ಭದ್ರತೆ ಕೊಡುವುದು ಅನ್ನಭಾಗ್ಯದ ಉದ್ದೇಶವೇ ಅಥವಾ "ಸರಕಾರಕ್ಕೆ ಹಣ ಉಳಿತಾಯ" ಮಾಡುವುದೇ? ಅಥವಾ ಒಂದು ಕೋಟಿ ಬಿಪಿಎಲ್ ಕುಟುಂಬಗಳು ಫಲಾನುಭವಿಗಳಾಗಿರುವ 'ಅನ್ನಭಾಗ್ಯ' ಯೋಜನೆಯ ಹೊಣೆಗಾರಿಕೆಯಿಂದ ಮುಕ್ತವಾಗಲು ಸರಕಾರ ಹೊರಟಿದೆಯೇ?

ಈ ಕ್ರಮದ ಹುಳುಕುಗಳು ಸ್ಪಷ್ಟವಾಗಿವೆ. ಈಗ ನಿಗದಿ ಮಾಡಿರುವ ನಗದು ಕೂಪನ್ ಬೆಲೆಯಲ್ಲಿ ಇಷ್ಟು ಆಹಾರಧಾನ್ಯಗಳನ್ನು ಕೊಳ್ಳಲು ಸಾಧ್ಯ ವೇ? ನಗದು ಕೂಪನ್ ಬೆಲೆ ಆಹಾರಧಾನ್ಯಗಳ ಬೆಲೆಏರಿಕೆಯ ಜತೆ ಏರಲಿವೆಯೇ? ಈ ಹಣದಲ್ಲಿ ಈ ಕೂಪನುಗಳನ್ನು ಪಡೆಯಲು ಇನ್ನಾವ ಹೊಸ ನಿಯಮಗಳನ್ನೂ ಶರತ್ತುಗಳನ್ನು ಜಾರಿಗೆ ತರುತ್ತಾರೋ? "ಸರಕಾರಕ್ಕೆ ಹಣ ಉಳಿತಾಯ" ಮಾಡುವುದು ಉದ್ದೇಶವಾಧ್ದರಿಂದ ಇನ್ನಷ್ಟು ನಿಯಮಗಳನ್ನೂ ಶರತ್ತುಗಳನ್ನು ನಿರೀಕ್ಷಿಸಬಹುದು. ಹಿಂದೆ ರೇಶನ್ ಕಾರ್ಡಿನಲ್ಲಿ ನಡೆಯುತ್ತಿದ್ದ ಅಕ್ರಮಗಳು ದಂಧೆಗಳು ಈ ಕೂಪನಿನ ಮೇಲೆ ನಡೆಯುವುದಿಲ್ಲವೆಂದು ಏನು ಗ್ಯಾರಂಟಿ? ಇಂತಹ ಅಕ್ರಮಗಳು ನಡೆದಾಗ ನಗದು ಕೂಪನ್ ವ್ಯವಸ್ಥೆಯನ್ನೂ ರದ್ದು ಮಾಡುವುದಿಲ್ಲವೇ?

ರೇಶನ್ ವ್ಯವಸ್ಥೆಯಲ್ಲಿ ಬೇಕಾದಷ್ಟು ಅಕ್ರಮಗಳು ಇವೆ. ನಿಜ. ಯಾವುದೇ ರೇಷನ್ ಡಿಪೋಗಳಿಗೆ ಹೋದರೂ ಒಂದಲ್ಲ ಒಂದು ರೀತಿಯ ಸಮಸ್ಯೆಗಳು ಕಣ್ಣಿಗೆ ರಾಚುವಂತೆ ಕಾಣುತ್ತವೆ. ಅಳತೆಯಲ್ಲಿ ಮೋಸ, ಡಿಜಿಟಲ್ ತೂಕದ ಯಂತ್ರವನ್ನು ಬಳಸದಿರುವುದು, ನಿಗದಿ ಪಡಿಸಿದಷ್ಟು ರೇಷನನ್ನು ಗ್ರಾಹಕರಿಗೆ ನೀಡದಿರುವುದು, ನಿಗದಿಪಡಿಸಿದಷ್ಟು ದರಕ್ಕಿಂತ ಹೆಚ್ಚು ದರವನ್ನು ಪಡೆಯುವುದು, ಯಾವುದೇ ರೇಷನ್ ಡಿಪೋದಲ್ಲಿಯೂ ನಿಗದಿತ ಸಮಯಕ್ಕೆ ರೇಷನ್ ವಿತರಿಸದಿರುವುದು ಮತ್ತು ಯಾವ ಡಿಪೋಗಳಲ್ಲಿಯೂ ಸರ್ಕಾರ ನಿಗದಿಪಡಿಸಿದ ದರದ ಪಟ್ಟಿಯನ್ನು ಗ್ರಾಹಕರಿಗೆ ತಿಳುವಳಿಕೆ ನೀಡುವ ಸಲುವಾಗಿ ಪ್ರದರ್ಶಿಸದಿರುವುದು, ಪ್ರತಿ ಕೂಪನ್ಗೆ ಗ್ರಾಹಕರಿಂದ 10 ರೂ ಪಡೆಯುವುದು ಹೀಗೆ ಪಟ್ಟಿ ಮಾಡುತ್ತಾ ಹೋದರೆ ಬೆಳೆಯುತ್ತಾ ಹೋಗುತ್ತದೆ. ಇವುಗಳ ಬಗ್ಗೆ ಜನ ದೂರುವುದು ಸಹಜ. ಈ ಅಕ್ರಮಗಳು, ಅವ್ಯವಸ್ಥೆಗಳನ್ನು ತೊಡೆದು ಹಾಕುವುದು ಸರಕಾರದ ಕರ್ತವ್ಯ. ಇದು ಸರಕಾರ ಭಾವಿಸುವಂತೆ ಅಸಾಧ್ಯ ಕೆಲಸವೇನಲ್ಲ. ಪಕ್ಕದ ರಾಜ್ಯಗಳಾದ ಕೇರಳ, ತಮಿಳುನಾಡುಗಳು ರೇಶನ್ ವ್ಯವಸ್ಥೆಯನ್ನು ಸಾಕಷ್ಟು ದಕ್ಷತೆಯಿಂದ ಸಮರ್ಪಕವಾಗಿ ನಡೆಸುತ್ತಿವೆ. ಅಲ್ಲಿ ರೇಶನ್ ವ್ಯವಸ್ಥೆಯನ್ನು ವಿಸ್ತರಿಸಲಾಗುತ್ತಿದೆ. ಕೇರಳದಲ್ಲಿ ಸಿಪಿಐ(ಎಂ) ನಾಯಕತ್ವದ ಎಡರಂಗ ಸರ್ಕಾರದ ನೇತೃತ್ವದಲ್ಲಿ ಮಾವಳ್ಳಿ ಸ್ಟೋರ್ಗಳ ಮೂಲಕ 19 ಅಗತ್ಯ ವಸ್ತುಗಳನ್ನು ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ. ಇದಕ್ಕೆ ರಾಜಕೀಯ ಇಚ್ಛಾಶಕ್ತಿ ಬೇಕು ಅಷ್ಟೆ.

ಜನಸಾಮಾನ್ಯರ ಆಹಾರದ ಕೊರತೆಯನ್ನು ನೀಗಿಸಿ ಆಹಾರ ಭಧ್ರತೆಯನ್ನು ಒದಗಿಸಲು ಪೂರಕವಾಗಿ ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ಬಲಪಡಿಸಲು ಬೇಕಾದ ಕ್ರಮಗಳನ್ನು ತೆಗೆದುಕೊಳ್ಳಬೇಕಾದ ಸರ್ಕಾರ ಬದಲಿಗೆ ಜನರನ್ನು ರೇಷನ್ ವ್ಯವಸ್ಥೆಯಿಂದ ದೂರಮಾಡುವ ಹುನ್ನಾರಗಳು ನಡೆಯುತ್ತಲೇ ಇವೆ. ಇದರಲ್ಲಿ ಪ್ರಮುಖವಾದ್ದು ನಕಲಿ ರೇಶನ್ ಕಾರ್ಡುಗಳನ್ನು ತೊಡೆದು ಹಾಕುವ ನೆಪದಲ್ಲಿ ಅಸಲಿ ಕಾರ್ಡುದಾರರಿಗೆ ಹಲವು ತೊಂದರೆ, ಕಿರಿಕಿರಿಗಳನ್ನು ಮಾಡುತ್ತಾ ಬಂದಿರುವುದು. ನಕಲಿ ರೇಶನ್ ಕಾರ್ಡುಗಳನ್ನು ಹೋಗಲಾಡಿಸಲು ಮತ್ತು ಅಪಾತ್ರರು ರೇಶನ್ ಪಡೆದುಕೊಳ್ಳುವುದನ್ನು ತಡೆಯಲು ಹಲವು ವಿಧಾನಗಳನ್ನು ಸರಕಾರ ಜಾರಿಗೆ ತಂದಿದೆ. ಕಾರ್ಡಿನಲ್ಲಿ ಫೋಟೋ, ರೇಶನ್ ಅಂಗಡಿಗಳಲ್ಲಿ ಬಯೊಮೆಟ್ರಿಕ್ಸ್, ವಿದ್ಯುತ್ ಕನೆಕ್ಶನಿನ ಆರ್.ಆರ್. ನಂಬರಿನ ಜತೆ ಹೋಲಿಕೆ, ಆಧಾರ್ ಜತೆ ಹೋಲಿಕೆ, ಇತ್ತೀಚೆಗೆ ಪ್ರತಿ ಬಾರಿ ಕಾರ್ಡು ತೋರಿಸಿ ಕೂಪನ್ ಪಡೆದುಕೊಳ್ಳುವುದು – ಸರಕಾರ ತಂದಿರುವ ಎಲ್ಲಾ ವಿಧಾನಗಳೂ ವಿಫಲವಾಗಿವೆ ಎಂಬುದಕ್ಕೆ, ಇಷ್ಟು ವಿವಿಧ ವಿಧಾನಗಳ ಪ್ರಯೋಗ ನಡೆದಿದೆ ಎಂಬುದಕ್ಕಿಂತ ಹೆಚ್ಚಿನ ನಿದರ್ಶನ ಬೇಕೆ?

ಆದರೆ ಅವುಗಳ ನಿಜವಾದ ಉದ್ದೇಶ ನಕಲಿ ರೇಶನ್ ಕಾರ್ಡುಗಳನ್ನು ಅಥವಾ ಅಪಾತ್ರರು ರೇಶನ್ ಪಡೆಯುವುದನ್ನು ಹೋಗಲಾಡಿಸುವುದು ಅಲ್ಲವೇ ಅಲ್ಲ. ರೇಶನ್ ನಿಜವಾದ ಬಡವರಿಗೆ ಸಿಗಬೇಕು ಎಂಬುದೂ ಅಲ್ಲ. ಈ ಎಲ್ಲಾ 'ಪರಿಹಾರ'ಗಳ ನಿಜವಾದ ಉದ್ದೇಶ, ರೇಶನ್ ಕಾರ್ಡುಗಳ ಸಂಖ್ಯೆ, ರೇಶನ್ ಪಡೆಯುವವರ ಸಂಖ್ಯೆ ಕಡಿಮೆ ಮಾಡುತ್ತಾ ಹೋಗಿ ಅದನ್ನು ಒಂದು ದಿನ ಇಲ್ಲವಾಗಿಸುವುದು. ಸಚಿವ ಖಾಧರ್ ಅವರು ಈ ವಾರ ಘೋಷಿಸಿದ ಕ್ರಮ, ಬಡವರ ಬದುಕಿಗೆ ಆಶಾಕಿರಣವಾಗಿರುವ ರೇಶನ್ ವ್ಯವಸ್ಥೆಯನ್ನು ಹಂತಹಂತವಾಗಿ ನಿಷ್ಕ್ರಿಯಗೊಳಿಸಿ ಮುಂದೊಂದು ದಿನ ಸಂಪೂರ್ಣವಾಗಿ ನಾಶಮಾಡುವ ವ್ಯವಸ್ಥಿತ ಹುನ್ನಾರ ದ ಭಾಗವಾಗಿದೆ ಎಂಬುದು ಸ್ಪಷ್ಟ.. ಕೇಂದ್ರದ ಬಿಜೆಪಿ ಮತ್ತು ರಾಜ್ಯದ ಕಾಂಗ್ರೆಸ್ ಸರ್ಕಾರಗಳು ಒಂದಕ್ಕೊಂದು ಪೂರಕವಾಗಿಯೇ ಕೆಲಸಮಾಡುತ್ತಿದ್ದು ಜನರ ಆಹಾರ ಭದ್ರತೆಯ ಹಕ್ಕುಗಳನ್ನು ಕಸಿದುಕೊಳ್ಳುವಂತಹ ಇಂತಹ ಜನವಿರೋಧಿ ನೀತಿಗಳನ್ನು ಜಾರಿಮಾಡುತ್ತಿವೆ.

ಮೋದಿಯವರ ಬಿಜೆಪಿ ಸರಕಾರದಿಂದ ಸಿದ್ದರಾಮಯ್ಯನವರ ಕಾಂಗ್ರೆಸ್ ಸರಕಾರ ಕಲಿಯಿತೋ ಅಥವಾ ತಿರುವು–ಮುರುವೋ, ಅಥವಾ ಎರಡೂ ಸರಕಾರಗಳು ಇದರಲ್ಲಿ ಪೈಪೋಟಿ ನಡೆಸಿದ್ದಾವೋ ಗೊತ್ತಿಲ್ಲ. ಮೋದಿ ಸರಕಾರ ನೋಟು ನಿಷೇಧದಲ್ಲಿ ಕಳೆದ 40 ದಿನಗಳಲ್ಲಿ ತೋರಿಸುತ್ತಿರುವ ದಿನಕ್ಕೊಂದು ಆಟದ ನಿಯಮವನ್ನು, ಬದಲಾಯಿಸುವ ವೈಖರಿಯನ್ನು, ಸಿದ್ಧರಾಮಯ್ಯ ಸರಕಾರ ರೇಶನ್ ವ್ಯವಸ್ಥೆಯಲ್ಲಿ ಕಳೆದ 40 ತಿಂಗಳುಗಳಲ್ಲಿ ತಿಂಗಳಿಗೊಂದರಂತೆ ತೋರಿಸುತ್ತಿದೆ. ಇಬ್ಬರ ಗುರಿ ಒಂದೇ. ಏನೋ ಘನವಾದ್ದು ಮಾಡುತ್ತೇವೆಂದು ಹೇಳಿಕೊಂಡು ಆಟ ಆರಂಭಿಸಿ, ಆಟದ ನಿಯಮಗಳನ್ನು ಬದಲಾಯಿಸುತ್ತಾ ಹೋಗಿ ಅದಕ್ಕೆ ತದ್ವಿರುದ್ಧವಾದದ್ದನ್ನು ಮಾಡಿ ಜನರನ್ನು ವಂಚಿಸುವುದು.

'ಅನ್ನಭಾಗ್ಯ' ಸಿದ್ಧರಾಮಯ್ಯ ಸರಕಾರದ ಅರ್ಥಪೂರ್ಣ ಕಾರ್ಯಕ್ರಮಗಳಲ್ಲಿ ಒಂದು. ಕಳೆದ ಚುನಾವಣೆಯಲ್ಲಿ ಗೆಲ್ಲಲು ಮತ್ತು ಆ ಮೇಲೆ ರಾಜಕೀಯ ಬೆಂಬಲ ಉಳಿಸಿಕೊಳ್ಳಲು ಕಾರಣವಾದ ಕಾರ್ಯಕ್ರಮ. ಆದರೆ ಈ ಕಾರ್ಯಕ್ರಮದ ಜಾರಿ ಅತ್ಯಂತ ಅದಕ್ಷ ಮತ್ತು ಅಸಮರ್ಪಕವಾಗಿದ್ದು, ಕ್ರಮೇಣ ಕಾರ್ಯಕ್ರಮವನ್ನೇ ನಿಷ್ಕ್ರಿಯಗೊಳಿಸುತ್ತಾ ನಾಶ ಮಾಡುವತ್ತ ಬಂದು ನಿಂತಿದೆ. ಕಾಂಗ್ರೆಸ್ ಈ ಕ್ರಮದಿಂದ ರಾಜಕೀಯ ಆತ್ಮಹತ್ಯೆ ಮಾಡಿಕೊಳ್ಳುತ್ತಿದೆ. ಅದು ಕಾಂಗ್ರೆಸಿನ ರಾಜಕೀಯ ಆಯ್ಕೆ.

ಜನತೆಯ, ಅದರಲ್ಲೂ ಬಡವರ ಆಹಾರ ಭದ್ರತೆಯನ್ನು ಮೂಲಭೂತ ಮಾನವ ಹಕ್ಕು ಎಂದು ಪರಿಗಣಿಸುವ ಎಲ್ಲರೂ 'ಅನ್ನಭಾಗ್ಯ' ವನ್ನು ನಾಶ ಮಾಡುವ ನಗದು ಕೂಪನ್ ವ್ಯವಸ್ಥೆಯನ್ನು ಬಲವಾಗಿ ವಿರೋಧಿಸಬೇಕಾಗಿದೆ. ಎಪಿಎಲ್, ಬಿಪಿಎಲ್, ಅಂತ್ಯೋದಯದಂತಹ ತಾರತಮ್ಯದ ನೀತಿಯನ್ನು ಕೈಬಿಟ್ಟು ಎಲ್ಲರಿಗೂ ಒಂದೇ ರೀತಿಯ ರೇಷನ್ ಕಾರ್ಡ್ ವಿತರಿಸುವ ಸಾರ್ವತ್ರಿಕ ಪಡಿತರ ರೇಶನ್ ವ್ಯವಸ್ಥೆಗೆ ಒತ್ತಾಯಿಸಿ ಜನರನ್ನು ಅಣಿ ನೆರೆಸಿ ಹೋರಾಡಬೇಕಾಗಿದೆ. ●

ಚಿತ್ತವಾಡ್ಗಿಯಲ್ಲಿ ಕೋಮು ಗಲಭೆ ಖಂಡಿಸಿ ಸಿಪಿಐ(ಎಂ) ಪ್ರತಿಭಟನೆ

ಬಳ್ಳಾರಿ ಜಿಲ್ಲೆಯ ಹೊಸಪೇಟೆಯ ಚಿತ್ತವಾಡ್ಗಿಯಲ್ಲಿ ಡಿಸೆಂಬರ್ 12–13ರಂದು ಎರಡು ಕೋಮುಗಳ ನಡುವೆ ನಡೆದ ಸಂಘರ್ಷವು ಇನ್ನೂ ತಿಳಿಯಾಗಿಲ್ಲ. ಬ್ಯಾನರ್ ಮತ್ತು ಧ್ವಜ ಕಟ್ಟುವ ವಿಚಾರವಾಗಿ ನಡೆದ ಈ ಕೋಮ ಸಂಘರ್ಷದಲ್ಲಿ ಅಮಾಕರಿಗೆ ಪೆಟ್ಟಾಗಿದೆ. ಕೋಮುವಾದಿ ಧಾಳಿಯನ್ನು ಖಂಡಿಸಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಹೊಸಪೇಟೆ ತಾಲ್ಲೂಕು ಸಮಿತಿಯು ಡಿಸೆಂಬರ್ 19ರಂದು ತಹಶೀಲ್ದಾರ್ ರವರ ಕಛೇರಿ ಮುಂಭಾಗ ಪ್ರತಿಭಟನೆ ನಡೆಸಿದರು.

ಪರಿಸ್ಥಿತಿ ಉದ್ವಿಗ್ನತೆಯಲ್ಲಿ ಮುಂದುವರೆದಿದೆ. ಆದರೆ ಇನ್ನೂ ತಿಳಿಯಾಗಿಲ್ಲ. ಎರಡು ಕೋಮುಗಳ ನಡುವೆ ಸೌಹಾರ್ದದ ವಾತಾವರಣವನ್ನು ಪುನರ್ ಸ್ಥಾಪಿಸಬೇಕು ಮತ್ತು ಸರ್ಕಾರದಿಂದ ಯಾವುದೇ ರಾಜಕೀಯ ಕ್ರಮಗಳು ನಡೆಯದೇ ಇರುವ ವಿರುದ್ಧ ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.



ಕಾನೂನು ಪ್ರಕ್ರಿಯೆಯಿಂದ ಗಲಭೆಯನ್ನು ನಿಯಂತ್ರಿಸಬಹುದು, ಆದರೆ ಸೌಹಾರ್ದತೆಯನ್ನು ಮರು ಸ್ಥಾಪಿಸುವುದಕ್ಕೆ ಸಾಧ್ಯವಿಲ್ಲ. ನಿಜವಾದ ಆರೋಪಿಗಳನ್ನು ಬಂಧಿಸದೇ ಅಮಾಯಕರನ್ನು ಬಂಧಿಸಿ, ಅವರ ಮೇಲೆ ಹಾಕಿರುವ ಕ್ರಿಮಿನಲ್ ಪ್ರಕರಣವನ್ನು ಹಿಂಪಡೆದು ಬಿಡುಗಡೆಗೊಳಿಸಬೇಕು ಮತ್ತು ನಿಜವಾದ ಆರೋಪಿಗಳನ್ನು ಬಂಧಿಸಬೇಕೆಂದು ಆಗ್ರಹಿಸಿದರು.

ಇಲ್ಲಿಯವರೆಗೆ ಜಿಲ್ಲಾ ಉಸ್ತುವಾರಿ ಮಂತ್ರಿ, ಸ್ಥಳೀಯ ಶಾಸಕರು ಸ್ಥಳಕ್ಕೆ ಭೇಟಿ ನೀಡದೆ ಇರುವುದು ಖಂಡನೀಯ. ಕೋಮುಗಲಭೆಗೆ ಕೇಂದ್ರ ರಾಜ್ಯ ಸರ್ಕಾರದ ಆಡಳಿತದಲ್ಲಿರುವ ರಾಜಕೀಯ ಪಕ್ಷಗಳೇ ಹೊಣೆಗಾರಿಕೆ ಹೊರಬೇಕೆಂದು ಸಿಪಿಐ(ಎಂ) ಪಕ್ಷವು ಆಗ್ರಹಿಸಿತು.

ಇದೇ ಸಂದರ್ಭದಲ್ಲಿ ಧಾರ್ಮಿಕ ಕೇಂದ್ರಗಳು ಕೋಮು ಸಂಘರ್ಷದ ಸಂಚಿನ ತಾಣಗಳಾಗಿ ಪರಿವರ್ತನೆಯಾಗುತ್ತಿರುವ ಬಗ್ಗೆ ಗುಮಾನಿ ವ್ಯಕ್ತಪಡಿಸಿದ ಪ್ರತಿಭಟನಾಕಾರರು ಪೂರ್ವ ನಿಯೋಜಿತ ಸಂಚುಗಳನ್ನು ಬಯಲುಗೊಳಿಸಲು ಆಳವಾದ ತನಿಖೆಯನ್ನು ನಡೆಸಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಿಪಿಐ(ಎಂ) ತಾಲ್ಲೂಕು ಕಾರ್ಯದರ್ಶಿ ಆರ್.ಭಾಸ್ಕರ್ ರೆಡ್ಡಿ, ಮುಖಂಡರಾದ ಎಂ.ಜಂಯ್ಯ ನಾಯ್ಕ, ಎ.ಕರುಣಾನಿಧಿ, ಕೆ.ನಾಗರತ್ನ, ಎಂ.ಗೋಪಾಲ, ಯಲ್ಲಾಲಿಂಗ, ಬಿ.ಮಹೇಶ್, ಕಲ್ಯಾಣಯ್ಯ, ಸುಮಂಗಳ ಮತ್ತು ಸಿಐಟಿಯು, ಡಿವೈಎಫ್‌ಐ, ಎಸ್‌ಎಫ್‌ಐ ಮುಖಂಡರು ಭಾಗವಹಿಸಿದ್ದರು.

ಕಡೆಗಣಿಸುತ್ತಿರುವ ಸರ್ಕಾರ: ಆಶಾ ಕಾರ್ಯಕರ್ತರ ಪ್ರತಿಭಟನೆ



ಮಾಸಿಕ ವೇತನ ಹಾಗೂ 45ನೇ ಭಾರತೀಯ ಕಾರ್ಮಿಕ ಸಮ್ಮೇಳನದ ಶಿಫಾರಸ್ಸಿನಂತೆ ಕಾರ್ಮಿಕರಂತೆ ಪರಿಗಣಿಸಬೇಕೆಂದು ಒತ್ತಾಯಿಸಿ ಆಶಾ ಕಾರ್ಯಕರ್ತೆಯರು ರಾಜ್ಯದ ವಿವಿದೆಡೆ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಿದರು.

ಜನತೆಗೆ ಪೌಷ್ಟಿಕ ಆಹಾರ ಹಾಗೂ ಶಿಕ್ಷಣ ಎಷ್ಟು ಮುಖ್ಯವೋ ಆರೋಗ್ಯವು ಕೂಡಾ ಅಷ್ಟೇ ಮುಖ್ಯವಾದುದು. ಸರ್ಕಾರದ ಲೋಪದೋಷಗಳನ್ನು ಮುಚ್ಚಿ ಹಾಕುವಂತಹ ಯೋಜನೆ ಎನ್.ಆರ್.ಎಚ್.ಎಮ್.ಯಾಗಿದೆ. ಈ ಯೋಜನೆ ಪ್ರಾರಂಭವಾಗಿ ಇನ್ನೂ 7 ವರ್ಷ ವಾಗುವಷ್ಟರಲ್ಲಿಯೇ 2015–16 ರಲ್ಲಿ ಅನುದಾನ ಕಡಿತಗೊಂಡಿದೆ. ಇದನ್ನು ಖಂಡಿಸಿ ಡಿಸೆಂಬರ್ 19ರಂದು ಪ್ರತಿಭಟನೆಯ ಸಂದರ್ಭದಲ್ಲಿ ಆಗ್ರಹಿಸಿದರು.

ಆಶಾ ಕಾರ್ಯಕರ್ತರನ್ನು ಆಯ್ಕೆ ಮಾಡುವಾಗ ವಿದ್ಯಾರ್ಹತೆ ಆಧಾರದಲ್ಲಿ ಅರ್ಹತೆಯುಳ್ಳವರಿಗೆ ಆಯ್ಕೆ ಮಾಡಬೇಕು. ರೂ.5000 ಕನಿಷ್ಠ ವೇತನ ನೀಡಬೇಕು ಮತ್ತು ಇನ್ನಿತರೆ ಮೂಲಭೂತ ಸೌಲಭ್ಯಗಳನ್ನು ಜಾರಿಗೊಳಿಸಬೇಕೆಂದು ಆಗ್ರಹಿಸಿದರು.

ಆಶಾ ಕಾರ್ಯಕರ್ತರು ಹೋರಾಟ ಮಾಡಿದಾಗ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಯ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ನಡೆದಿದೆ. ಈಗಾಗಲೇ 2 ಭಾರಿ ಸಭೆಗಳಲ್ಲಿ ಬೇಡಿಕೆಗಳ ಬಗ್ಗೆ ಚರ್ಚಿಸಿ ಬಗೆಹರಿಸುವುದಾಗಿ ತಿಳಿಸಿದ್ದಾರೆ. ಆದರೆ ಅವು ಯಾವುವೂ ಲಿಖಿತ ರೂಪದ ಆದೇಶಗಳಾಗಿ ಬಂದಿಲ್ಲ ಎಂದು ಇದೇ ಸಂದರ್ಭದಲ್ಲಿ ಸರ್ಕಾರವನ್ನು ಎಚ್ಚರಿಸಿದರು.

ಸಿಐಟಿಯು ಸಂಯೋಜನೆಗೊಂಡಿರುವ 'ಅಖಿಲ ಭಾರತ ಆಶಾ ಕಾರ್ಯಕರ್ತೆಯರ ಸಮನ್ವಯ ಸಮಿತಿ'ಯು ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ ಧರಣಿ ನಡೆಸಿದರು. ಬೇಡಿಕೆಗಳು ಈಡೇರದಿದ್ದಲ್ಲಿ ಜನವರಿಯಲ್ಲಿ ರಾಜ್ಯ ಮಟ್ಟದಲ್ಲಿ ಹಾಗೂ ಮಾರ್ಚ್‌ನಲ್ಲಿ ಪಾರ್ಲಿಮೆಂಟ್ ಚಲೋ ನಡೆಸುವ ಮೂಲಕ ಸರ್ಕಾರವನ್ನು ಎಚ್ಚರಿಸುವುದಾಗಿ ಕರೆ ನೀಡಿದರು.

ಉತ್ತರ ಕನ್ನಡ, ಚಿಕ್ಕಬಳ್ಳಾಪುರ, ತುಮಕೂರು, ಹಾಸನ ಮತ್ತು ದೊಡ್ಡಬಳ್ಳಾಪುರದ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಪ್ರತಿಭಟನೆಗಳು ನಡೆದಿದೆ.

ತುಮಕೂರು ಜಿಲ್ಲೆಯ ಶಿಡ್ಲಘಟ್ಟ ತಾಲೂಕಿನ ಆಶಾ ಕಾರ್ಯಕರ್ತೆಯಾದ ವಿಜಯಲಕ್ಷ್ಮಿಯವರ ಮೇಲೆ ಎ.ಎನ್.ಎಮ್ ಕುಮ್ಮಕ್ಕಿನಿಂದ ಹಲ್ಲೆ ನಡೆದಿರುತ್ತದೆ. ಇವರಿಗೆ ನ್ಯಾಯ ಒದಗಿಸಬೇಕು ಅಧಿಕಾರಿಗಳ ಸಮ್ಮುಖದಲ್ಲಿ ಪ್ರತಿಭಟನಾಕಾರರು ಆಗ್ರಹಿಸಿದ ಸಂದರ್ಭದಲ್ಲಿ ತಪ್ಪಿತಸ್ಥರ ಮೇಲೆ ಕ್ರಮ ಜರುಗಿಸಲು ಆಗ್ರಹಿಸಿದ್ದರಿಂದ ಈ ವಿವಾದ ಇತ್ಯರ್ಥವಾಯಿತು.



ಇಎಸ್‌ಐ ಆಸ್ಪತ್ರೆ ಶೀಘ್ರ ನಿರ್ಮಾಣಕ್ಕೆ ಕಾರ್ಮಿಕರ ಒತ್ತಾಯ

ದೊಡ್ಡಬಳ್ಳಾಪುರದ ಬಾಶೆಟ್ಟಿಹಳ್ಳಿ ಕೈಗಾರಿಕಾ ಪ್ರದೇಶದ ನೂರಾರು ಕೈಗಾರಿಕೆಗಳಲ್ಲಿ 30 ಸಾವಿರಕ್ಕೂ ಹೆಚ್ಚಿ ಕಾರ್ಮಿಕರು ದುಡಿಯುತ್ತಿದ್ದು ಕಾರ್ಮಿಕರ ಆರೋಗ್ಯದ ರಕ್ಷಣೆಗಾಗಿ ಇಎಸ್‌ಐ ಆಸ್ಪತ್ರೆ ನಿರ್ಮಿಸಬೇಕೆಂದು ಡಿಸೆಂಬರ್ 19ರಂದು ಸಿಐಟಿಯು ನೇತೃತ್ವದಲ್ಲಿ ತಾಲ್ಲೂಕು ಕಛೇರಿ ಮುಂಭಾಗ ಪ್ರತಿಭಟನೆ ನಡೆಸಿದರು.

ಸುಮಾರು 1 ಲಕ್ಷ 50 ಸಾವಿರ ಜನ ಈ ಕಾರ್ಮಿಕರನ್ನು ಅವಲಂಬಿಸಿ ಜೀವನ ನಡೆಸುತ್ತಿದ್ದಾರೆ. ಸರ್ಕಾರಗಳು ಕಾರ್ಮಿಕರಿಗೆ ವೈದ್ಯಕೀಯ ಸೌಲಭ್ಯ ಒದಗಿಸಲು ಸಂಬಳದಿಂದ ಪ್ರತಿ ತಿಂಗಳು ಹಣ ಕಡಿತ ಮಾಡುತ್ತವೆ. ಆದ್ದರಿಂದ ಸುಸಜ್ಜಿತ ಆಸ್ಪತ್ರೆಗಳನ್ನು ಸ್ಥಾಪಿಸಿ ಕಾರ್ಮಿಕರಿಗೆ ವೈದ್ಯಕೀಯ ಸೌಲಭ್ಯ ಒದಗಿಸುವುದು ಸರ್ಕಾರದ ಮತ್ತು ನೌಕರರ ರಾಜ್ಯ ವಿಮಾ ನಿಗಮದ ಕಾನೂನು ಬದ್ಧ ಜವಾಬ್ದಾರಿಯಾಗಿರುತ್ತದೆ.

ದೊಡ್ಡಬಳ್ಳಾಪುರದ ಕೈಗಾರಿಕಾ ಪ್ರದೇಶದ ಅರಹಳ್ಳಿ ಗುಡ್ಡದಹಳ್ಳಿ, ಅಪೇರಲ್ ಪಾರ್ಕ್(ಕೆ.ಐ.ಡಿ.ಬಿ), ಎರಡನೇ ಹಂತದಲ್ಲಿ ಸುಸಜ್ಜಿತ ಇ.ಎಸ್.ಐ ಆಸ್ಪತ್ರೆ ನಿರ್ಮಾಣಕ್ಕೆ ಹಣ ಮಂಜೂರಾಗಿದ್ದು 3 ವರ್ಷಗಳ ಹಿಂದೆ ಆಗತಾನೆ ಮುಖ್ಯಮಂತ್ರಿಗಳಾಗಿದ್ದ ಸಿದ್ದರಾಮಯ್ಯನವರು ಸೇರಿದಂತೆ ಕೇಂದ್ರ–ರಾಜ್ಯ ಸರ್ಕಾರದ ವತಿಯಿಂದ ಆಸ್ಪತ್ರೆ ನಿರ್ಮಾಣಕ್ಕೆ ಶಂಕು ಸ್ಥಾಪನೆ ನೆರವೇರಿಸಿದರು. 2 ವರ್ಷಗಳಲ್ಲಿ ಆಸ್ಪತ್ರೆ ಪ್ರಾರಂಭಿಸುವುದಾಗಿ ಘೋಷಣೆ ಮಾಡಿದರು. ಆದರೆ ಇನ್ನೂ ನಿರ್ಮಾಣದ ಕಾಮಾಗಾರಿ ಪ್ರಾರಂಭಿಸಿಲ್ಲ.

ಸಂಬಂಧ ಪಟ್ಟ ಕಾರ್ಮಿಕ ಸಚಿವರಾಗಲೀ, ಕ್ಷೇತ್ರದ ಶಾಸಕರು ಆಸ್ಪತ್ರೆ ನಿರ್ಮಾಣದ ಬಗ್ಗೆ ಅಗತ್ಯ ಕಾಳಜಿ ವಹಿಸುತ್ತಿಲ್ಲ ಎಂದು ಕಾರ್ಮಿಕರು ದೂರಿದರು. ಅಲ್ಲದೇ ಅಸಂಘಟಿತ ಕಾರ್ಮಿಕರಿಗೂ ಇಎಸ್‌ಐ ಸೌಲಭ್ಯ ಜಾರಿಗೊಳಿಸಬೇಕೆಂದು ಆಗ್ರಹಿಸಲಾಯಿತು. ಪ್ರತಿಭಟನೆಯಲ್ಲಿ ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ಎನ್.ಪ್ರತಾಪ್‌ಸಿಂಹ, ತಾಲ್ಲೂಕು ಅಧ್ಯಕ್ಷರಾದ ರೇಣುಕಾರಾಧ್ಯ, ಪ್ರಧಾನ ಕಾರ್ಯದರ್ಶಿ ಪಿ.ಎ.ವೆಂಕಟೇಶ್, ಖಜಾಂಚಿ ಎಲ್.ಆರ್.ನಳೀನಾಕ್ಷಿ ಮತ್ತು ರೈತ ಮುಖಂಡರಾದ ಆರ್.ಚಂದ್ರತೇಜಸ್ವಿರವರು ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡಿದರು.



ಅಂಗವಿಕಲರ ಹೋರಾಟ: ಅಂಗೀಕಾರವಾಯಿತು ಕಾಯಿದೆ

ಸುಮಾರು ಒಂದು ದಶಕದಿಂದ ಅಂಗವಿಕಲರು ಮತ್ತು ಅಂಗವಿಕರಲ್ಲಿ ಕೆಲಸ ಮಾಡುವ ಸಂಘ ಸಂಸ್ಥೆಗಳ ಹೋರಾಟಗಳ ಪರಿಣಾಮವಾಗಿ ಈ ಬಾರಿಯ ಸಂಸತ್ ಅಧಿವೇಶನದಲ್ಲಿ ಎರಡು ಸದನಗಳಲ್ಲಿ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಕಾಯಿದೆ ಜಾರಿಗೆ ಬಂದಿದೆ.

ಅಂಗವಿಕಲರ ಸಂಘ ಸಂಸ್ಥೆಗಳ ಜಂಟಿ ಕ್ರಿಯಾ ಸಮಿತಿಯು ಕಾಯಿದೆ ಜಾರಿಗೆ ಬಂದ ಹಿನ್ನೆಲೆಯಲ್ಲಿ ಡಿಸೆಂಬರ್ 17ರಂದು ಬೆಂಗಳೂರಿನ ಮೈಸೂರು ಬ್ಯಾಂಕ್ ವೃತ್ತದಲ್ಲಿ ಸಂತಸ ಹಂಚುಕೊಳ್ಳುವ ಕಾರ್ಯಕ್ರಮವನ್ನು ಬಹಿರಂಗವಾಗಿ ಏರ್ಪಡಿಸಿದ್ದರು. ದೇಶದಲ್ಲಿ ರಾಜಕೀಯ ಪಕ್ಷಗಳು ತಮ್ಮ ವ್ಯತ್ಯಾಸಗಳನ್ನು ಪಕ್ಕಕ್ಕೆ ಇಟ್ಟು ಜೊತೆಯಾಗಿ ಈ ಕಾಯಿದೆಯನ್ನು ಮಂಜೂರು ಮಾಡಿದ್ದು ಇದೊಂದು ಐತಿಹಾಸಿಕ ಸಂದರ್ಭವಾಗಿದೆ ಎಂದು ತಿಳಿಸಿದರು.

ಕೇಂದ್ರ ಸರ್ಕಾರವು ಈ ಕಾಯಿದೆಯನ್ನು ಶೀಘ್ರದಲ್ಲೇ ರಾಷ್ಟ್ರಪತಿಗಳ ಅಂಕಿತಕ್ಕೆ ಕಳುಹಿಸಿ ಜಾರಿಗೊಳಿಸಬೇಕು ಮತ್ತು 2017ರ ಜನವರಿಯಿಂದಲೇ ಇದು ಜಾರಿಗೆ ತರಲು ಮುಂದಾಗಬೇಕೆಂದು ತಿಳಿಸಿದರು. ಈ ಸಂದರ್ಭದಲ್ಲಿ ಕ.ರಾ.ಅ.ಹಾ.ಪಾ.ಒ ಅಧ್ಯಕ್ಷರಾದ ಜಿ.ಎನ್.ನಾಗರಾಜ್, ಎಪಿಡಿಯ ವಿ.ಎಸ್.ಬಸವರಾಜ್, ಕಾರವೀರ್ಸ್‌ನ ಚಂದ್ರಶೇಖರ್ ಪುಟ್ಟಪ್ಪ, ಫೋರ್ತ್‌ವೇವ್ ಫೌಂಡೇಷನ್‌ನ ರವಿ ಜಿ., ಅಪ್ಸಾದ ರಾಮ್‌ಕುಮಾರ್ ಮತ್ತಿತರರು ಮಾತನಾಡಿದರು.

ದಿಡ್ಡಳ್ಳಿ ಆದಿವಾಸಿಗಳನ್ನು ಬೆಂಬಲಿಸಿ ಪ್ರತಿಭಟನೆ

ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿನ ದಿಡ್ಡಳ್ಳಿ ಗ್ರಾಮದ ಆದಿವಾಸಿಗಳನ್ನು ಒಕ್ಕಲೆಬ್ಬಿಸಿರುವ ಕ್ರಮ ಖಂಡಿಸಿ, ಪುನರ್ ವಸತಿಗೆ ಒತ್ತಾಯಿಸಿ ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿ ಡಿಸೆಂಬರ್ 20 ರಂದು ಜನವಾದಿ ಮಹಿಳಾ ಸಂಘಟನೆ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು. ಮುಖಂಡರಾದ ದೇವಿ, ಸುನೀತ, ಸುಶೀಲ, ಮಂಜುಳ, ಎನ್.ಎಲ್.ಭರತ್‌ರಾಜ್, ತಿಮ್ಮೇಗೌಡ, ಲಿಂಗರಾಜ್‌ಮೂರ್ತಿ ಉಪಸ್ಥಿತರಿದ್ದರು.

ವಸತಿ ರಹಿತ ಹಮಾಲರ ಪ್ರತಿಭಟನೆ

ರಾಜ್ಯದ ಗಡಿನಾಡು ತುಮಕೂರು ಜಿಲ್ಲೆಯ ತಾಲ್ಲೂಕು ಪಾವಗಡದ ಎಪಿಎಂಸಿ, ಗ್ರಾಮೀಣ, ಬಸ್ ಸ್ಟ್ಯಾಂಡ್‌ನಲ್ಲಿ ಶ್ರಮದಾಯಕ ಕೆಲಸ ನಿರ್ವಹಿಸುವ ಬಹುತೇಕ ದಲಿತರು, ಹಿಂದುಳಿದವರು ಮತ್ತು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ವಸತಿ ರಹಿತ ಹಮಾಲಿ ಕಾರ್ಮಿಕರು ಸಿಐಟಿಯು ನೇತೃತ್ವದಲ್ಲಿ ಸಮಾವೇಶ ಕೈಗೊಂಡರು.

ಡಿಸೆಂಬರ್ 16ರಂದು ನಡೆದ ಸಮಾವೇಶ ಉದ್ದೇಶಿಸಿ ಸಿಐಟಿಯು ರಾಜ್ಯ ಕಾರ್ಯದರ್ಶಿ ಮಹೇಶ್ ಪತ್ತಾರ್ ರವರು ಮಾತನಾಡಿದರು. ಸಮಾವೇಶದ ನಂತರದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿ ತಾಲ್ಲೂಕು ಆಡಳಿತಕ್ಕೆ ಮತ್ತು ಸ್ಥಳೀಯ ಶಾಸಕರಿಗೆ ಮನವಿ ಮತ್ತು ವಸತಿ ನಿವೇಶನಕ್ಕಾಗಿ ವಯುಕ್ತಿಕ ಅರ್ಜಿಗಳನ್ನು ಪ್ರತಿಭಟನಾಕಾರರು ಸಲ್ಲಿಸಿದರು.

ಶಾಸಕರು ವಸತಿ ಹಾಗೂ ನಿವೇಶನ ಕುರಿತು ಸಂಬಂಧಿಸಿದ ಅಧಿಕಾರಿಗಳ ಜೊತೆ ಶೀಘ್ರದಲ್ಲಿಲೇ ಸಭೆ ನಡೆಸಿ ಹಮಾಲರಿಗೆ ನಿವೇಶನ ವಸತಿ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಬೀದಿ ಬದಿ ವ್ಯಾಪಾರಸ್ಥರಿಗೆ ಪ್ರತ್ಯೇಕ ಮಾರುಕಟ್ಟೆ ಹೋರಾಟಕ್ಕೆ ಗೆಲುವು



ಕಳೆದ ನಾಲ್ಕು ವರ್ಷಗಳಿಂದ ಮಂಗಳೂರಿನ ಬೀದಿ ಬದಿ ವ್ಯಾಪಾರಸ್ಥರು ತಮ್ಮನ್ನು ಎತ್ತಂಗಡಿ ಮಾಡುವುದರ ವಿರುದ್ಧ, ಬೀದಿ ವ್ಯಾಪಾರಿಗಳಿಗೆ ಪ್ರತ್ಯೇಕ ಕಾನೂನಿಗಾಗಿ, ಅಂಥ ಕಾನೂನುಗಳ ಅಡಿಯಲ್ಲಿ ಬೀದಿ ವ್ಯಾಪಾರಿಗಳಿಗೆ ಗುರುತು ಚೀಟಿ, ಪ್ರತ್ಯೇಕ ಮಾರುಕಟ್ಟೆ ಹಾಗೂ ಇನ್ನಿತರ ಬೇಡಿಕೆಗಳನ್ನು ಮುಂದಿಟ್ಟು ಸಿಐಟಿಯು ಸಂಯೋಜಿತ ಬೀದಿ ಬದಿ ವ್ಯಾಪಾರಸ್ಥರ ಸಂಘದ ನೇತೃತ್ವದಲ್ಲಿ ನಡೆಸಿದ ಧೀರ ಹೋರಾಟಗಳಿಂದ ಒಂದೊಂದೆ ಗೆಲುವನ್ನು ಸಾಧಿಸುತ್ತಾ ಬಂದಿದ್ದು, ಮಂಗಳೂರಿನ ಹೃದಯ ಭಾಗವಾದ ಪುರಭವನದ ಪಕ್ಕದಲ್ಲಿ ಪ್ರತ್ಯೇಕ ವ್ಯವಸ್ಥಿತ ಮಾರುಕಟ್ಟೆಯನ್ನು ಮಹಾನಗರ ಪಾಲಿಕೆ ರಚಿಸಿ ಕೊಡುವುದರೊಂದಿಗೆ ಒಂದು ಶಿಖರಪ್ರಾಯವಾದ ಗೆಲುವನ್ನು ಸಾಧಿಸಿದೆ.

ತಮ್ಮ ಗೆಲವಿನ ಸಂಭ್ರಮಾಚರಣೆಯನ್ನು ಡಿಸೆಂಬರ್ 15 ರಂದು ಸಿದ್ಧಗೊಳ್ಳುತ್ತಿರುವ ನೂತನ ಮಾರುಕಟ್ಟೆ ಪ್ರಾಂಗಣದಲ್ಲಿ ಏರ್ಪಡಿಸಿದಾಗ, ಬೀದಿ ಬದಿ ವ್ಯಾಪಾರಿ ಸಂಘದ ಸದಸ್ಯರು, ಮುಖಂಡರು ಭಾಗವಹಿಸಿದ್ದರು.

ಹೋರಾಟದ ಮೊದಲ ಹಂತದಲ್ಲಿ ಮಂಗಳೂರು ನಗರ ಪಾಲಿಕೆಯ ಬೀದಿ ಬದಿ ವ್ಯಾಪಾರಿಗಳ ಎತ್ತಂಗಡಿ ಕಾರ್ಯಕ್ರಮವಾದ ಟೈಗರ್ ಕಾರ್ಯಾಚರಣೆಯನ್ನು ರಸ್ತೆಗಳಲ್ಲಿ ಅಡ್ಡ ಮಲಗಿ ಪ್ರಾರಂಭಿಸಲಾಯಿತು. ಹಲವು ಬಾರಿ ಈ ಟೈಗರ್ ಕಾರ್ಯಾಚರಣೆ ನಡೆಸಿದಾಗಲೂ ಅದನ್ನು ಪ್ರತಿಬಾರಿಯೂ ವಿಫಲಗೊಳಿಸಲಾಯಿತು. ಮಹಾನಗರಪಾಲಿಕೆ ಆಡಳಿತ ಅಧಿಕಾರಿಗಳು ಹಾಗೂ ಕಾಂಗ್ರೆಸ್ ಪಕ್ಷದ ನೇತೃತ್ವದಲ್ಲಿರುವ ಜನಪ್ರತಿನಿಧಿಗಳು ಮಾತುಕತೆಗೆ ಕರೆಸಬೇಕಾದ ವಾತಾವರಣ ನಿರ್ಮಾಣವಾಯಿತು. ಅದೇ ವೇಳೆಗೆ ನವದೆಹಲಿಯಲ್ಲಿ ಪಾರ್ಲಿಮೆಂಟಿನಲ್ಲಿ ಬೀದಿಬದಿ ವ್ಯಾಪಾರಿಗಳ ಭದ್ರತಾ ಮಸೂದೆಯೊಂದು ಅಂಗೀಕೃತವಾಗಿ ಶಾಸನವಾದುದು–ಪಾಲಿಕೆ ತನ್ನ ದಮನಕಾರಿ ನೀತಿಗಳನ್ನು ಕೈಬಿಡಲು ಕಾರಣವಾಯಿತು.

ಬೀದಿಬದಿ ವ್ಯಾಪಾರಿಗಳನ್ನು ಗುರುತಿಸಿ ಶಾಸನದಂತೆ ಗುರುತು ಚೀಟಿ ನೀಡಲು ಒತ್ತಾಯಿಸಿದ ಫಲವಾಗಿ, ಪಾಲಿಕೆಯವರು ಈಗಾಗಲೇ ಸರ್ವೆ ನಡೆಸಿದ್ದು 208 ಮಂದಿಗೆ ಪ್ರಥಮ ಹಂತದಲ್ಲಿ ಗುರುತಿನ ಚೀಟಿ ನೀಡಲಾಗಿದೆ. ಎರಡನೇ ಹಂತದಲ್ಲಿ 350 ಮಂದಿಗೆ ಗುರುತಿನ ಚೀಟಿ ನೀಡಲು ಬಾಕಿ ಇದೆ. ಇದೀಗ ಪುರಭವನದ ಹಿಂಭಾಗದಲ್ಲಿರುವ ಸುಮಾರು ಅರ್ಧ ಎಕ್ರೆಯಷ್ಟು ವಿಸ್ತಾರವಾದ ಆವರಣವನ್ನೊಳಗೊಂಡ ಅಂಗಣಕ್ಕೆ ಟೈಲ್ಸ್ ಅಳವಡಿಸಿ ಗುರುತು ಮಾಡಲಾದ ಆಯತಗಳನ್ನು ಗುರುತು ಚೀಟಿ ನೀಡಲಾದ ವ್ಯಾಪಾರಿಗಳಿಗೆ ನಿಗದಿ ಮಾಡಲಾಗಿದೆ. ಅದೇ ಮಾರುಕಟ್ಟೆ ಅಂಗಣದಲ್ಲಿ ಇನ್ನೂ ಕೆಲವು ಮಂದಿಗೆ ಅವಕಾಶವಿದೆ. ಬೀದಿ ಬದಿ ವ್ಯಾಪಾರಿಗಳು ಇದನ್ನು ಸ್ವಾಗತಿಸಿದ್ದಾರೆ.

ಸಂಭ್ರಮಾಚರಣೆಯ ಬಹಿರಂಗ ಸಭೆಯನ್ನುದ್ದೇಶಿಸಿ ಸಿಐಟಿಯು ರಾಜ್ಯ ಸಮಿತಿ ಉಪಾಧ್ಯಕ್ಷ ವಸಂತ ಆಚಾರಿ, ಸಿಐಟಿಯು ದ.ಕ.ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ಹಾಗೂ ಬೀದಿ ಬದಿ ವ್ಯಾಪಾರಿಗಳ ಜಿಲ್ಲಾ ಸಂಘದ ಗೌರವಾಧ್ಯಕ್ಷರಾದ ಸುನಿಲ್ ಕುಮಾರ್ ಬಜಾಲ್ ಮಾತನಾಡಿದರು. ಇವರಿಬ್ಬರ ನೇತೃತ್ವದಲ್ಲಿ ಸಂಘವು ಸಮರಶೀಲವಾದ ಹೋರಾಟಗಳನ್ನು ನಡೆಸಿವೆ.

ಸಂಭ್ರಮಾಚರಣೆಯ ಸಭೆಯಲ್ಲಿ ನಿವೃತ್ತ ಪ್ರಾಧ್ಯಾಪಕಿ ಪ್ರೊ| ರೀಟಾ ನೊರೊನ್ಹಾ, ಪಾಲಿಕೆ ಸದಸ್ಯ ಹಾಗೂ ಡಿವೈಎಫ್ಐ ಜಿಲ್ಲಾಧ್ಯಕ್ಷ ದಯಾನಂದ ಶೆಟ್ಟಿ, ಜಿಲ್ಲಾ ಉಪಾಧ್ಯಕ್ಷ ಬಿ.ಕೆ.ಇಮ್ತಿಯಾಜ್, ಪಾಲಿಕೆ ಮಾಜಿ ಸದಸ್ಯೆ ಜಯಂತಿ ಬಿ.ಶೆಟ್ಟಿ, ದಲಿತ ಹಕ್ಕುಗಳ ಸಮಿತಿ ಸಂಚಾಲಕ ಲಿಂಗಪ್ಪ ನಂತೂರು ಮಾತನಾಡಿದರು. ಸಂಘದ ಪ್ರಧಾನ ಕಾರ್ಯದರ್ಶಿ ಸಂತೋಷ್ ಕುಮಾರ್ ಆರ್ ಸ್ವಾಗತಿಸಿದರು. ಸಿಐಟಿಯು ಮುಖಂಡ ಸಂತೋಷ್ ಶಕ್ತಿನಗರ, ಬೀದಿ ಬದಿ ವ್ಯಾಪಾರಿ ಸಂಘದ ಮುಖಂಡರು ಭಾಗವಹಿಸಿದ್ದರು.

ವರದಿ: **ವಾ.ಉಚ್ಚಿಲ್**

ಪ್ರೊ|ಅಡ್ಯನಡ್ಕ ಕೃಷ್ಣಭಟ್ಟರಿಗೆ ಜನವಿಜ್ಞಾನ ಚಳುವಳಿಯಿಂದ ಶ್ರದ್ಧಾಂಜಲಿ

ಡಿಸೆಂಬರ್ 21 ರಂದು ಕ.ರಾ.ವಿ.ಪ., ಸಮುದಾಯ ಮತ್ತು ಭಾರತ ಜ್ಞಾನವಿಜ್ಞಾನ ಸಮಿತಿಯ 'ವಿಕಾಸ ಘಟಕ'ದ ಸಹಭಾಗಿತ್ವದಲ್ಲಿ ಪ್ರೊ. ಅಡ್ಯನಡ್ಕ ಕೃಷ್ಣ ಭಟ್ಟರಿಗೆ ಶ್ರದ್ಧಾಂಜಲಿ ಸಭೆಯನ್ನು ಏರ್ಪಡಿಸಲಾಗಿತ್ತು.

ಡಿಸೆಂಬರ್ 18ರಂದು ನಿಧನರಾದ ಪ್ರೊ.ಅಡ್ಯನಡ್ಕ ಕೃಷ್ಣ ಭಟ್ ದ.ಕ.ಜಿಲ್ಲೆಯಲ್ಲಿ ಹಾಗೂ ಕರ್ನಾಟಕದಲ್ಲಿ ಜನವಿಜ್ಞಾನ ಚಳುವಳಿಯನ್ನು ಕಟ್ಟಿದ ಪ್ರಮುಖ ವಿಜ್ಞಾನ ಶಿಕ್ಷಕರಾಗಿದ್ದರು. 'ವಿಜ್ಞಾನ ಲೋಕ' ಎಂಬ ಮಾಸಿಕ ಪತ್ರಿಕೆ ಅವರು ಆರಂಭಿಸಿದ್ದು, ಅದು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು 'ಬಾಲವಿಜ್ಞಾನ' ಮಾಸಪತ್ರಿಕೆ ಆರಂಭಿಸುವುದಕ್ಕೆ ಕಾರಣವಾಯಿತು. ಬಾಲವಿಜ್ಞಾನದ ಸಂಪಾದಕರಲ್ಲೊಬ್ಬರಾಗಿ 30 ವರ್ಷಗಳಿಗೂ ಮೀರಿ ಕೆಲಸ ಮಾಡಿದ್ದಲ್ಲದೆ, ದೀರ್ಘಕಾಲ ಕ.ರಾ.ವಿ.ಪ.ದ ಸಮಿತಿ ಸದಸ್ಯರಾಗಿದ್ದರು. ಸಾಹಿತಿ ನಿರಂಜನರ ಸಂಪಾದಕತ್ವದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಹೊರತಂದ 'ಜ್ಞಾನಗಂಗೋತ್ರಿ' ವಿಶ್ವಕೋಶಕ್ಕೆ ಅವರೇ ಪ್ರಧಾನ ಕಾರ್ಯನಿರತ ಸಂಪಾದಕರಾಗಿದ್ದರು. ಕನ್ನಡದಲ್ಲಿ ವೈಜ್ಞಾನಿಕ ಬರಹಗಳನ್ನು ವ್ಯಾಪಕವಾಗಿ ಬರೆದವರಲ್ಲಿ ಪ್ರೊ|ಕೃಷ್ಣ ಭಟ್ಟರು ಅಗ್ರಗಣ್ಯರಾಗಿದ್ದು, ಕ.ರಾ.ವಿ.ಪ. ನಡೆಸುವ ಕನ್ನಡ ವೈಜ್ಞಾನಿಕ ಬರವಣಿಗೆ ಕಾರ್ಯಗಾರಗಳಲ್ಲೂ ಹಲವಾರು ವರ್ಷ ತರಬೇತಿ ನೀಡಿದ್ದಾರೆ.

ಕನ್ನಡ–ಇಂಗ್ಲಿಷ್ ವಿಜ್ಞಾನ ಪದಕೋಶದ ಸಹಸಂಪಾದಕರಾಗಿದ್ದ ಪ್ರೊ.ಕೃಷ್ಣಭಟ್ಟರು ಕನ್ನಡದಲ್ಲಿ 5 ವಿಜ್ಞಾನ ಪುಸ್ತಕಗಳನ್ನು ರಚಿಸಿದ್ದಾರಲ್ಲದೆ, ನೂರಾರು ಪ್ರಬಂಧಗಳನ್ನು ಬರೆದಿದ್ದಾರೆ. ದ.ಕ. ಜಿಲ್ಲೆಯಲ್ಲಿ ಕ.ರಾ.ವಿ.ಪರಿಷತ್ತಿನ ಘಟಕಗಳ ಒಕ್ಕೂಟ ರಚಿಸಿ ಜನವಿಜ್ಞಾನ ಚಳುವಳಿಯನ್ನು ಮುನ್ನಡೆಸಿದ್ದಾರೆ. ಪರಿಸರ ಶಿಬಿರಗಳು, ಸೌರ ಶಿಬಿರಗಳು, ಶಿಕ್ಷಕರ ಕಾರ್ಯಾಗಾರ, ಆಕಾಶ ವೀಕ್ಷಣೆ, ವೈಜ್ಞಾನಿಕ ಮನೋಭಾವ ವಿಸ್ತರಣಾ ಶಿಬಿರಗಳು ಇತ್ಯಾದಿಯನ್ನು ರೂಪಿಸಿದ್ದಲ್ಲದೆ ಭಾರತ ಜ್ಞಾನ ವಿಜ್ಞಾನ ಸಮಿತಿ ರಚಿಸಲು ದ.ಕ.ಜಿಲ್ಲೆಯಲ್ಲಿ ಪ್ರೇರಣೆ ನೀಡಿ ಮಾರ್ಗದರ್ಶನ ನೀಡಿದ್ದಾರೆ.

ದ.ಕ.ಜಿಲ್ಲೆಯ ಮುಲ್ಕಿಯಾ ವಿಜಯಾ ಕಾಲೇಜಿನಲ್ಲಿ 36 ವರ್ಷ ಪ್ರಾಧ್ಯಾಪಕರಾಗಿದ್ದರು.

ಶ್ರದ್ಧಾಂಜಲಿ ಸಭೆಯಲ್ಲಿ ಸಮುದಾಯ ಸಂಘಟನೆಯ ವಾಸುದೇವ ಉಚ್ಚಿಲ, ಸಾಮಾಜಿಕ ಚಿಂತಕರಾದ ಕೃಷ್ಣಪ್ಪ ಕೊಂಚಾಡಿ ಮತ್ತು ಉಮೇಶ್ ಉಚ್ಚಿಲ ಅವರು ಅವರ ಕೊಡುಗೆಯನ್ನು ವಿವರಿಸಿ ಮಾತನಾಡಿದರು.

ಆದಿವಾಸಿಗಳ ಎತ್ತಂಗಡಿ: ಮಂಗಳೂರಿನಲ್ಲಿ ಡಿವೈಎಫ್ಐ ಪ್ರತಿಭಟನೆ



ಕೊಡಗು ಜಿಲ್ಲೆಯ ದಿಡ್ಡಳ್ಳಿಯಲ್ಲಿ ಅರಣ್ಯ ಪ್ರದೇಶದಲ್ಲಿ 577 ಆದಿವಾಸಿ ಕುಟುಂಬಗಳನ್ನು ಒಕ್ಕಲೆಬ್ಬಿಸಿದುದರ ವಿರುದ್ಧ ಡಿವೈಎಫ್ಐ ದ.ಕ. ಜಿಲ್ಲಾ ಸಮಿತಿ ನೇತೃತ್ವದಲ್ಲಿ ಡಿಸೆಂಬರ್ 19ರಂದು ಮಂಗಳೂರಿನಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರಿನಲ್ಲಿ ಪ್ರತಿಭಟನೆ ನಡೆಯಿತು.

ದೀರ್ಘ ಕಾಲದಿಂದ ಅರಣ್ಯದಲ್ಲೇ ವಾಸಿಸುತ್ತಿದ್ದ ಆದಿವಾಸಿಗಳನ್ನು ಅರಣ್ಯ ಹಕ್ಕು ಕಾಯಿದೆಯನ್ನು ಉಲ್ಲಂಘಿಸಿ – ಅರಣ್ಯ ಇಲಾಖೆ ಅಧಿಕಾರಿಗಳು ಎತ್ತಂಗಡಿ ಮಾಡಿದ್ದಾರೆ. ಬೀದಿಗೆ ಬಿದ್ದಿರುವ ಆದಿವಾಸಿಗಳ ರಕ್ಷಣೆಗೆ ರಾಜ್ಯ ಸರಕಾರ ಪುನರ್ವಸತಿ ಕ್ರಮ ಕೈಗೊಂಡಿಲ್ಲ. ಅತಿ ಶೀಘ್ರ ನಿರ್ವಸಿತರಿಗೆ ಪುನರ್ವಸತಿ ಮಾಡುವುದರೊಂದಿಗೆ, ತಾತ್ಕಾಲಿಕವಾಗಿ ನಿರಾಶ್ರಿತರ ಶಿಬಿರಗಳನ್ನು ತೆರೆಯಬೇಕೆಂದು ಪ್ರತಿಭಟನೆಯಲ್ಲಿ ಆಗ್ರಹಿಸಲಾಯಿತು.

ಪ್ರತಿಭಟನೆಯನ್ನುದ್ದೇಶಿಸಿ ಡಿವೈಎಫ್ಐ ರಾಜ್ಯ ಅಧ್ಯಕ್ಷ ಮುನೀರ್ ಕಾಟಿಪಳ್ಳ, ಜಿಲ್ಲಾ ಸಮಿತಿ ಅಧ್ಯಕ್ಷ ದಯಾನಂದ ಶೆಟ್ಟಿ, ಸಮುದಾಯ ಸಂಘಟನೆಯ ವಾಸುದೇವ ಉಚ್ಚಿಲ್ ಮಾತನಾಡಿದರು. ಜಿಲ್ಲಾ ಸಮಿತಿಯ ಸಂತೋಷ್ ಬಜಾಲ್, ಬಿ.ಕೆ.ಇಮ್ತಿಯಾಜ್ ಮೊದಲಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಸಾಗುವಳಿ ರೈತರಿಂದ ಮುಖ್ಯಮಂತ್ರಿಗಳಿಗೆ ಅಂಚೆ ರವಾನೆ

ಬಗರ್‌ಹುಕುಂ ಸಾಗುವಳಿ ರೈತರಿಗೆ ಹಕ್ಕು ಪತ್ರಕ್ಕೆ ಆಗ್ರಹಿಸಿ, ಸಾಗುವಳಿ ನೀಡಲು ತೊಡಕ್ಕಾಗಿರುವ ಕಾನೂನನ್ನು ತಿದ್ದುಪಡಿ ಮಾಡಬೇಕೆಂದು ಒತ್ತಾಯಿಸಿ ಡಿಸೆಂಬರ್ 15ರಂದು ಕರ್ನಾಟಕ ಪ್ರಾಂತ ರೈತ ಸಂಘ(ಕೆಪಿಆರ್‌ಎಸ್)ದ ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಕಾಮಗೌಡನ ಹಳ್ಳಿ, ಹನಗೂಡು ಪಂಚಾಯ್ತಿ ಘಟಕದಿಂದ ರಾಜ್ಯದ ಮುಖ್ಯಮಂತ್ರಿಗಳು ಹಾಗೂ ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರಿಗೆ ಪತ್ರ ರವಾನಿಸುವ ಮೂಲಕ ಅಂಚೆ ಚಳುವಳಿ ನಡೆಸಿದರು.





ಎಸ್‌ಎಫ್‌ಐ ಪ್ರತಿಭಟನೆ

ಕೋಲಾರ ನಗರದ ಸರ್ಕಾರಿ ಬಾಲಕಿಯರ ಪಿ.ಯು. ಕಾಲೇಜಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಒತ್ತಾಯಿಸಿ ಜಿಲ್ಲಾಧಿಕಾರಿಗಳ ಕಛೇರಿ ಎದುರು ಡಿಸೆಂಬರ್ 16, 2016ರಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಸಂಘಟನೆಯು ಪ್ರತಿಭಟನೆ ನಡೆಸಿತು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ವಾಸುದೇವರೆಡ್ಡಿ ಕೆ., ತಾಲ್ಲೂಕು ಅಧ್ಯಕ್ಷರಾದ ಗಾಯತ್ರಿ ಆರ್‌ಎನ್, ಕಾರ್ಯದರ್ಶಿ ಜೆ.ಶ್ರೀಕಾಂತ್, ಸದಸ್ಯರಾದ ಅನುಷಾ, ಚಂದನ, ವಿ.ಅನುಷಾ, ಕಾಲೇಜು ಮತ್ತು ಪ್ರೌಢಶಾಲೆಯ ಸಮಿತಿ ಸದಸ್ಯರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

‘ಸ್ಟೂಡೆಂಟ್’ ಸಾಮಾಜಿಕ ಉದ್ದೇಶದ ರಾಜಕೀಯ ಸಿನೆಮಾದ ಮಾದರಿ



ಪ್ರೊ. ವಿ.ಎನ್.ಲಕ್ಷ್ಮೀನಾರಾಯಣ

‘ಸ್ಟೂಡೆಂಟ್’ ಕಝುಕಸ್ತಾನದ ಪ್ರಮುಖ ಚಿತ್ರ ನಿರ್ದೇಶಕನಾದ ದರಷಾನ್ ಒಮಿರ್ಬಾಯೇವ್ ದಾಸ್ತೋವೆಸ್ಕಿಯ ‘ಅಪರಾಧ ಮತ್ತು ಶಿಕ್ಷೆ’ ಕಾದಂಬರಿಯ ಚೌಕಟ್ಟನ್ನು ಬಳಸಿಕೊಂಡು ನಿರ್ಮಿಸಿದ ಗಂಭೀರ ಚಿತ್ರ. 2006 ರ ತನ್ನ ಕಿರುಚಿತ್ರ ‘ಅಬೌಟ್ ಲೌವ್’ ಗಾಗಿ ಚೆಕಾಫ್‌ನ ಕತೆ, ಮತ್ತು ‘ಶೂಗ’ ಚಿತ್ರಕ್ಕಾಗಿ ತಾಲ್ಸ್ಟಾಯ್‌ನ ಪ್ರಸಿದ್ಧ ಕೃತಿ ‘ಅನ್ನ ಕರೆನಿನ, ಕಾದಂಬರಿ ಗಳನ್ನು ಆಧರಿಸಿದ ದರಷಾನ್ ಆಧುನಿಕ ರಷ್ಯಾದ ಸಮಕಾಲೀನ ಸಮಾಜವನ್ನು ತನ್ನ ಕಥಾವಸ್ತುವಾಗಿ ಆರಿಸಿಕೊಳ್ಳುತ್ತಾನೆ. ರಷ್ಯನ್ ಸಾಹಿತ್ಯದ ಮೇರು ಲೇಖಕರ ಸಾಹಿತ್ಯದ ಮರುಸೃಷ್ಟಿ ಅಥವಾ ಚರ್ಚೆ ಅವನ ಉದ್ದೇಶವಲ್ಲ. ಪ್ರಸ್ತುತ ಸಮಾಜದ ವಿಷಮತೆಗಳನ್ನು ಆ ಕೃತಿಗಳ ಮುಖೇನ ಅನ್ವೇಷಿಸಬಹುದಾದ ರಾಜಕೀಯ ದೃಷ್ಟಿಕೋನ ಅವನ ಚಿತ್ರಗಳ ಕೇಂದ್ರಬಿಂದು.

ತಾಲ್ಸ್ಟಾಯ್ ಮತ್ತು ದಾಸ್ತೋವೆಸ್ಕಿ ರಾಜಶಾಹಿ ಮತ್ತು ಬಂಡವಾಳಶಾಹಿಯ ಸಾಮಾಜಿಕ ಕ್ರೌರ್ಯ ಮತ್ತು ಸಿರಿವಂತಿಕೆಯ ಅನೈತಿಕ ನೆಲೆಗಟ್ಟನ್ನು ಪ್ರಶ್ನಿಸುವ ಮೂಲಕ ಧಾರ್ಮಿಕ ಮತ್ತು ನೈತಿಕ ನೆಲೆಯ ಮಾನವೀಯ ಸಮಾಜದ ನಿರ್ಮಾಣಕ್ಕಾಗಿ ಹಂಬಲಿಸುತ್ತಾರೆ. ಆದರೆ ವರ್ಗಹಿತಾಸಕ್ತಿಗಳ ನಿರಂತರ ಘರ್ಷಣೆಗೆ ಕಾರಣವಾದ ತಾರತಮ್ಯಯುಕ್ತ ರಾಜಕೀಯ, ಇಡೀ ಸಮಾಜವನ್ನು, ಅದರ ಧಾರ್ಮಿಕ ಮತ್ತು ನೈತಿಕ ಮೌಲ್ಯಗಳ ನೆಲೆಗಟ್ಟನ್ನೇ ನಿಯಂತ್ರಿಸುತ್ತದೆ ಎಂಬುದನ್ನು ಅವರು ಲಕ್ಷಿಸುವುದಿಲ್ಲ. ಮಾತ್ರವಲ್ಲ ಬಡತನ–ಸಿರಿತನಗಳ ಸಾಮಾಜಿಕತೆಯನ್ನು ಬದಲಿಸಲು ವೈಜ್ಞಾನಿಕ ಸಮಾಜವಾದೀ ರಾಜಕೀಯ ಅನಿವಾರ್ಯವೆಂಬುದನ್ನೂ ಬಂಡವಾಳಶಾಹಿಗೆ ಸಮಾಜವಾದವೇ ಏಕೈಕ ಪರ್ಯಾಯವೆಂಬುದನ್ನೂ ಈ ಇಬ್ಬರು ಮಹಾನ್ ಲೇಖಕರು ಅವರ ಕಾಲಘಟ್ಟದಲ್ಲಿ ಕಾಣಲಾರದವರಾಗಿದ್ದರು.

‘ಅಪರಾಧ ಮತ್ತು ಶಿಕ್ಷೆ’

‘ಅಪರಾಧ ಮತ್ತು ಶಿಕ್ಷೆ’ ಕಾದಂಬರಿಯ ಪ್ರಧಾನ ಪಾತ್ರ, ಬಡ ವಿದ್ಯಾರ್ಥಿ, ರಾಸ್ಕೋಲ್ನಿಕೋವ್, ಬಡವರನ್ನು ಸಿರಿವಂತರ ಕ್ರೌರ್ಯದಿಂದ ಬಿಡುಗಡೆಗೊಳಿಸುವ ತನ್ನ ಕನಸನ್ನು, ತನ್ನ ತೀವ್ರಗಾಮಿ ಆಲೋಚನೆಗಳನ್ನು ಸಾಕಾರಗೊಳಿಸುವ ಮೊದಲ ಪರೀಕ್ಷಾರ್ಥ ಕ್ರಿಯೆಯಾಗಿ ಲೇವಾದೇವಿಗಾರ್ತಿಯಾದ ವೃದ್ಧೆಯನ್ನು ಕೊಲೆಮಾಡುತ್ತಾನೆ. ಅಲ್ಲಿಗೆ ಅನಿರೀಕ್ಷಿತವಾಗಿ ಪ್ರವೇಶಿಸುವ ಮತ್ತೊಬ್ಬ ಹೆಂಗಸು–ವೃದ್ಧೆಯ ತಂಗಿಯನ್ನು, ಅಕಾರಣವಾಗಿ, ಅನಿವಾರ್ಯವಾಗಿ ಸಾಯಿಸುತ್ತಾನೆ. ಪೋಲೀಸರಿಗೆ ಪತ್ತೆಯಾಗದಂತೆ ತನ್ನನ್ನೇ ಕಾಪಾಡಿಕೊಳ್ಳಬೇಕಾದ ಆ ಕ್ರಿಯೆಯಿಂದಾಗಿ ಅವನು ನಿರಂತರವಾಗಿ ಅನುಭವಿಸುವ ತೀವ್ರ ತಳಮಳ, ನೈತಿಕ ಸರಿ–ತಪ್ಪುಗಳ ತಾಕಲಾಟ, ಪಾಪಪ್ರಜ್ಞೆಗಳಿಂದಾಗಿ ಅವನ ಕ್ರಾಂತಿಕಾರಕತೆ ಅಪರಾಧ ಪ್ರಜ್ಞೆಯಾಗಿ ಪರಿವರ್ತಿತನೆಗೊಂಡು ಅವನು ಸುಪ್ತ ರೀತಿಗಳಲ್ಲಿ ಶಿಕ್ಷೆಗಾಗಿ ಹಂಬಲಿಸುವಂತೆ ಮಾಡುತ್ತವೆ. ದೂರದ ಊರಿನಲ್ಲಿ ತನ್ನನ್ನೇ ನಂಬಿಕೊಂಡಿರುವ ತಾಯಿ ಮತ್ತು ತಂಗಿಗೆ ಅವನ ಬಗೆಗಿರುವ ಗಾಢ ಮಮತೆ ಅವನ ನೈತಿಕ ಪ್ರಜ್ಞೆಯನ್ನು ಗಾಢಗೊಳಿಸುತ್ತವೆ. ತಾನು ಪ್ರೀತಿಸುವ ಹುಡುಗಿಯ ಒತ್ತಾಸೆ, ಅಪರಾಧವನ್ನು ಬಯಲಿಗೆಳೆಯಲು ನಿಯೋಜಿತನಾದ ಪತ್ತೆದಾರ ಮಾನಸಿಕವಾಗಿ ಹಾಕುವ ಒತ್ತಡಗಳು ರಾಸ್ಕೋಲ್ನಿಕೋವ್ ಕೊನೆಗೂ ತಪ್ಪೊಪ್ಪಿಕೊಂಡು ಜೈಲಿಗೆ ಹೋಗುವಂತಾಗುತ್ತದೆ. ಬಡವರ ಪ್ರತಿನಿಧಿಯಾಗಿ ಸಿರಿವಂತರ ವಿರುದ್ಧದ ಅವನ ಹೋರಾಟ ಸಿರಿತನದ ಕ್ರೌರ್ಯದಿಂದ ಬಡತನವನ್ನು ಪಾರುಮಾಡುವ ಬದಲು ತನ್ನ ಪಾಪಪ್ರಜ್ಞೆಯಿಂದ ತಾನೇ ಬಿಡುಗಡೆ ಪಡೆಯಲು ನಡೆಸುವ ವ್ಯಕ್ತಿಗತ ಸಂಘರ್ಷವಾಗಿ ಮುಗಿಯುತ್ತದೆ. ಅತ್ಯಂತ ಸಂವೇದನಾಶೀಲನಾದ ರಾಸ್ಕೋಲ್ನಿಕೋವ್, ಮಾನವೀಯ ಸಂವೇದನೆಯ ಎಲ್ಲ ಮನುಷ್ಯರ ಪ್ರತಿನಿಧಿಯೆಂಬಂತೆ, ಅವನ ವ್ಯಕ್ತಿಗತ ನೈತಿಕ ಹೋರಾಟವೇ ಮನುಕುಲದ ಬಿಡುಗಡೆಯ ಹೋರಾಟವೆಂಬಂತೆ ದಾಸ್ತೋವೆಸ್ಕಿ ಕಾದಂಬರಿಯನ್ನು ಹೆಣೆದಿದ್ದಾರೆ. ಎಲ್ಲ ದೇಶ–ಕಾಲಗಳ ಮಧ್ಯಮವರ್ಗಗಳ ಸಂವೇದನಾಶೀಲ ಜನರ ಅಮೂರ್ತ ಮಾನವೀಯತೆಯ ಕನಸಿಗೆ ಅತ್ಯಂತ ಹತ್ತಿರವಾದ ಈ ಕಾದಂಬರಿಯ ‘ಧಾರ್ಮಿಕ ಸಮಾಜವಾದೀ’ ಕನಸು ಸಹಜವಾಗೇ ಸಾಹಿತ್ಯಪ್ರಿಯರನ್ನು ಆಕರ್ಷಿಸುತ್ತದೆ.

ಸಾಹಿತ್ಯ, ಸಿನೆಮಾ ಮುಂತಾದ ಕಲಾಪ್ರಕಾರಗಳಲ್ಲಿ ಬಡತನ ಮತ್ತು ತತ್ಸಂಬಂಧಿತ ನರಳಿಕೆಗಳ ಚಿತ್ರಣ–ಕ್ಕೆ ಮಹತ್ವದ ಸ್ಥಾನವಿದೆ. ಇದನ್ನು ಬಡತನ–ನರಳಿಕೆಗಳ ಕಲಾತ್ಮಕತೆ ಎನ್ನಬಹುದು. ಹಾಗೆಯೇ ಬೌದ್ಧಿಕ ಮತ್ತು ತಾತ್ವಿಕ ಚರ್ಚೆ, ವಿವಾದ, ವಾಗ್ವಾದ ಮತ್ತು ಚಿಂತನೆಗಳಲ್ಲೂ ಬಡತನ–ಸಿರಿತನಗಳ ವಿಷಮತೆ ಮತ್ತು ಕ್ರೌರ್ಯಗಳ ಮೂಲದ ಬಗ್ಗೆ, ಪರಿಹಾರ, ಬಿಡುಗಡೆಗಳ ಬಗ್ಗೆ ವ್ಯಾಪಕ ಅವಕಾಶವಿದೆ. ಇವೆಲ್ಲವೂ ಸಾಹಿತ್ಯ, ಸಿನೆಮಾ ಮತ್ತು ಇತರ ಕಲಾಪ್ರಕಾರಗಳ ಒಳಗೆ ಮತ್ತು ಆಚೆ–ಯೂ ರೋಚಕವಾದ, ಮಹತ್ವದ ಸ್ಥಾನವನ್ನು ಪಡೆದುಕೊಂಡಿವೆ. ಇದನ್ನು ಬಡತನ–ನರಳಿಕೆಗಳ ಬೌದ್ಧಿಕ–ತಾತ್ವಿಕ ಸೌಂದರ್ಯವೆನ್ನಬಹುದು. ಭೂಪ್ರದೇಶದ ಸ್ವಾಮ್ಯಕ್ಕಾಗಿ ನಡೆಯುವ ಆಕ್ರಮಣ, ಸಾಹಸಯಾನಗಳು, ವ್ಯಾಪಾರ, ಯುದ್ಧಗಳು ಮತ್ತು ಅವನ್ನು ಪ್ರತಿರೋಧಿಸುವ ದಂಗೆ, ಹೋರಾಟ ಮತ್ತು ಕ್ರಾಂತಿಗಳು ಸಹ ಕಥಾನಕಗಳಾಗಿ ಆಕರ್ಷಕವಾಗಿ, ಸೌಂದರ್ಯಾತ್ಮಕವಾಗಿ ಕಾಣಿಸುತ್ತವೆ. ಆದರೆ ನೈಜ, ಭೌತಿಕ ನೆಲೆಗಳಲ್ಲಿ ಹಿಂಸಾತ್ಮಕವಾಗಿಯೂ, ಅಮಾನವೀಯವಾಗಿಯೂ, ಮನುಷ್ಯರ ಕೊಳಕು ಮುಖಗಳಾಗಿಯೂ ಕಾಣಿಸುತ್ತವೆ. ಆದರೆ ಮೇಲುವರ್ಗದ ಹಿತಾಸಕ್ತಿಗಳನ್ನು ಸಮರ್ಥಿಸುವಾಗ ಆಕ್ರಮಣ, ಯುದ್ಧ, ವ್ಯಾಪಾರಗಳ ಕಥಾನಕಗಳು ಸೌಂದರ್ಯಾತ್ಮಕವಾಗಿಯೂ, ಅವುಗಳನ್ನು ಪ್ರತಿರೋಧಿಸುವ ಕೆಳವರ್ಗಗಳ ದಂಗೆ, ಹೋರಾಟ ಮತ್ತು ಕ್ರಾಂತಿಗಳ ಕಥಾನಕಗಳು ಭೀಭತ್ಸವಾಗಿಯೂ ಕಾಣಿಸುತ್ತವೆ. ಹೀಗಾಗಿ ಸಾಹಿತ್ಯ–ಸಿನೆಮಾ ಮುಂತಾದ ಕಲಾಪ್ರಕಾರಗಳು ಮಧ್ಯಮವರ್ಗಗಳು ಬಹುವಾಗಿ ಇಷ್ಟಪಡುವ ಬಡತನ–ನರಳಿಕೆಗಳ ಬೌದ್ಧಿಕತೆ–ತಾತ್ವಿಕತೆಗಳನ್ನು, ಭಾವನಾತ್ಮಕತೆಗೆ ಒತ್ತುಕೊಡುವ ರೀತಿಯಲ್ಲಿ ಸೌಂದರ್ಯಾತ್ಮವಾಗಿ ಚಿತ್ರಿಸುತ್ತವೆಯೇ ಹೊರತು ಅಪ್ರಿಯವಾದ ಅವುಗಳ ರಾಜಕೀಯ ಮುಖಗಳನ್ನು ಚಿತ್ರಿಸಲು ಬಯಸುವುದಿಲ್ಲ. ದಾಸ್ತೋವೆಸ್ಕಿಯ ಅತ್ಯಂತ ಪರಿಣಾಮಕಾರೀ ಕಾದಂಬರಿ ‘ಅಪರಾಧ ಮತ್ತು ಶಿಕ್ಷೆ’ ಗಿರುವ ಮಿತಿಯೂ ಇಂಥದ್ದೆ.

ಸೋವಿಯತ್ ಒಕ್ಕೂಟದ ಪತನವಾದಮೇಲೆ ಜಾಗತಿಕವಾಗಿ ಮೇಲುಗೈ ಪಡೆದ ಬಂಡವಾಳಶಾಹಿ–ಸಾಮ್ರಾಜ್ಯಶಾಹಿಗಳು ವಿಶ್ವದೆಲ್ಲೆಡೆ ಜಾರಿಗೆ ತಂದ ನವ ಉದಾರವಾದೀ ಆರ್ಥಿಕತೆ ಮತ್ತು ರಾಜಕೀಯಗಳು ವಿಶ್ವದ ಉಳಿದ ದೇಶಗಳಂತೆ ಕಝುಕಸ್ತಾನದ ಸಮಾಜವನ್ನೂ ಧ್ರುವೀಕರಣಗೊಳಿಸಿದವು. ಸದಾ ಬಡತನ, ಜೀವನಾಗತ್ಯ ಸೌಲಭ್ಯಗಳ ಅಭಾವದಲ್ಲಿ ನರಳುವ ಜನಸಾಮಾನ್ಯರು ಒಂದುಕಡೆ, ಸಹಜೀವಿಗಳ ನರಳಿಕೆಗಳಿಗೆ ಕುರುಡಾಗಿ ಐಷಾರಾಮ ಜೀವನದಲ್ಲಿ ಮುಳುಗಿದ ಮೇಲುವರ್ಗದ ಜನ ಮತ್ತೊಂದು ಕಡೆ. ಈ ಪ್ರಾದೇಶಿಕ ಹಿನ್ನೆಲೆಯಲ್ಲಿ ದರಷಾನ್ ಒಮಿರ್ಬಾಯೇವ್ ಚಿತ್ರಿಸಿರುವ ‘ಸ್ಟೂಡೆಂಟ್’ ‘ದಾಸ್ತೋವೆಸ್ಕಿಯ ಕಾದಂಬರಿಯ ಕಥಾಚೌಕಟ್ಟನ್ನು ಮಾತ್ರ ಬಳಸಿಕೊಂಡು ಸಮಕಾಲೀನ ಜಗತ್ತಿನ ಬಡತನ–ನರಳಿಕೆಗಳ ರಾಜಕೀಯದತ್ತ ನೋಡುಗರ ಗಮನ ಹರಿಯುವಂತೆ ಮಾಡುತ್ತದೆ. ಮೇಲು ನೋಟಕ್ಕೆ ‘ಸ್ಟೂಡೆಂಟ್’ ಕಝುಕಸ್ತಾನದ ಸಮಾಜಕ್ಕೆ ಮಾತ್ರ ನಿರ್ದಿಷ್ಟವಾಗಿ, ದಾಸ್ತೋವೆಸ್ಕಿಯ ಕಾದಂಬರಿಯ ಮೂಲಕ ರಷ್ಯನ್ ಸಮಾಜದ ಚಿತ್ರಣಕ್ಕೆ ಸೀಮಿತವಾಗಿರುವಂತೆ ಕಂಡರೂ ಸಿನಿಮಾ ಭಾಷೆಗಿರುವ ಸಾರ್ವಕಾಲಿಕತೆ ಮತ್ತು ಸಾರ್ವದೇಶೀಯತೆ, ಜಾಗತೀಕರಣಗೊಂಡಿರುವ ಬಂಡವಾಳಶಾಹೀ ರಾಜಕೀಯವನ್ನು ಅದರ ಎಲ್ಲ ಆಧುನಿಕ ರೂಕ್ಷತೆಯೊಂದಿಗೆ ಜಗತ್ತಿನ ಎಲ್ಲ ದೇಶ–ಭಾಷೆಗಳ ನೋಡುಗರಿಗೆ ಮುಟ್ಟುವಲ್ಲಿ ಮಹತ್ವದ ಪಾತ್ರ ವಹಿಸಿವೆ.

‘ಸ್ಟೂಡೆಂಟ್’ ಕಥಾಹಂದರ

ಸದಾ ಮಂಕುಹಿಡಿದ ಆವರಣಗಳಲ್ಲಿ, ಅಂತರ್ಮುಖಿಯಾಗಿ, ಸಂತೋಷರಹಿತ ಮುಖ ಹೊತ್ತು, ಬಹುತೇಕವಾಗಿ ಒಂಟಿಯಾಗಿ ಓಡಾಡುವ, ವ್ಯವಹರಿಸುವ ತತ್ವಶಾಸ್ತ್ರದ ಅನಾಮಧೇಯ ವಿದ್ಯಾರ್ಥಿಯ ದೃಷ್ಟಿಗೆ ಬೀಳುವ ಬಿಡಿ ಬಿಡಿ ಘಟನೆಗಳಾಗಿ ಇಡೀ ಸಿನಿಮಾ ಚಿತ್ರಿತವಾಗಿದೆ.

ಸಿನಿಮಾ ಷೂಟಿಂಗ್ ಸಂದರ್ಭದಲ್ಲಿ ಒಬ್ಬ ಬಡ ಮನುಷ್ಯನೊಬ್ಬ ಶ್ರೀಮಂತ ಮಹಿಳೆಯ ಬಟ್ಟೆಯ ಮೇಲೆ ಪಾನೀಯ ಚೆಲ್ಲಿದನೆಂಬ ಕಾರಣ–ಕ್ಕಾಗಿ ಆಕೆಯ ಅಂಗರಕ್ಷಕ ಗೂಂಡಾಗಳು ಹಿಡಿದು ಬಡಿಯುವುದನ್ನು ಅನಾಮಧೇಯನಾದ ವಿದ್ಯಾರ್ಥಿ ಮೂಕನಾಗಿ ನೋಡುತ್ತಾನೆ.

ಸುಖವನ್ನು ಗುಂಪಿನಲ್ಲಿ ಪಡೆಯಲಾಗುವುದಿಲ್ಲ, ಅದನ್ನು ವ್ಯಕ್ತಿಗತವಾಗೇ ಪಡೆದುಕೊಳ್ಳಬೇಕು. ಪ್ರಾಣಿ ಪ್ರಪಂಚಕ್ಕೆ ಅನ್ವಯವಾಗುವ ಡಾರ್ವಿನ್ನನ ಬಲಿಷ್ಠರಿಗೆ ಮಾತ್ರ ಬದುಕುವ ಹಕ್ಕು ಎಂಬ ವಿವರಣೆಯನ್ನು ಮನುಷ್ಯ ಸಮಾಜಕ್ಕೆ ಅನ್ವಯಿಸುವ ಬಂಡವಾಳವಾದದಲ್ಲಿ ಬಲಿಷ್ಠರೇ ಸಾಮಾಜಿಕ ನ್ಯಾಯವನ್ನು ನಿರ್ಧರಿಸುತ್ತಾರೆ ಎಂದು ತರಗತಿಯಲ್ಲಿ ಪಾಠ ಮಾಡುವ ಶಿಕ್ಷಕನನ್ನು, ಹಾಗಿದ್ದರೆ ಬಲಿಷ್ಠರಾದ ಬಲ್ಲಿದರನ್ನು ಕೊಲ್ಲುವುದೂ ಸಹ ತಪ್ಪಲ್ಲ ಅಲ್ಲವೇ ಎಂದು ವಿದ್ಯಾರ್ಥಿಯೊಬ್ಬ ಪ್ರಶ್ನಿಸುತ್ತಾನೆ. ವಿದ್ಯಾರ್ಥಿಯು ಈ ಆಲೋಚನೆಯನ್ನು ಕೃತಿಗಿಳಿಸಲು ನಿರ್ಧರಿಸುತ್ತಾನೆ. ತನ್ನ ಸಾಮರ್ಥ್ಯವನ್ನು ಪರೀಕ್ಷಿಸಲು ಮುಂದಾಗುತ್ತಾನೆ.

ಅಂಗಡಿಯವನಿಗೆ ಕೊಡಲು ಹಣವಿಲ್ಲದೆ ಪಿಂಚಿಣಿದಾರ ಹೆಂಗಸು ಅಸಹಾಯಕಳಾಗಿದ್ದಾಳೆ.

ಬಡತನದಿಂದ ನರಳುವ ಕವಿಯೊಬ್ಬನ ಪರಿಚಯವಾಗಿ ಅವನು ಸ್ಟೂಡೆಂಟನ್ನು ತನ್ನ ಮನೆಗೆ ಕರೆದೊಯ್ಯುತ್ತಾನೆ.

ಈಗ ವಿಶ್ವದಾದ್ಯಂತ ಪರಿಚಿತವಾಗಿರುವ, ಆಬಾಲವೃದ್ಧರಾದಿಯಾಗಿ ಎಲ್ಲರಿಗೂ ಪ್ರಿಯ ಮನರಂಜನೆಯಾಗಿರುವ ಟಿವಿ ಕಾರ್ಯಕ್ರಮಗಳಾದ ಪ್ರಾಣಿಪ್ರಪಂಚದಲ್ಲಿ ಬಲಿಷ್ಠ ಪ್ರಾಣಿಗಳು ದುರ್ಬಲ ಪ್ರಾಣಿಗಳನ್ನು ಅಟ್ಟಿಸಿಕೊಂಡು ಹೋಗಿ ಕೊಲ್ಲುವ ದೃಶ್ಯಾವಳಿಗಳು ಎದುರಿನ ಟಿವಿಯಲ್ಲಿ ಕಾಣಿಸುತ್ತವೆ.

ಸ್ವತಹ ಬಾಡಿಗೆ ಕೊಡಲು ಹಣವಿಲ್ಲದ ವಿದ್ಯಾರ್ಥಿ ತನ್ನ ಜೇಬಿನಲ್ಲಿದ್ದ ಹಣವನ್ನು ಕಡುಬಡವನಾದ ಕವಿಯ ಮನೆಯ ಮೇಜಿನ ಮೇಲಿಟ್ಟು ಹೊರಬರುತ್ತಾನೆ.

ಗತಿಸಿದ ತನ್ನ ತಂದೆಯ ಹಳೆಯ ವಾಚನ್ನು ಮಾರಿ ಒಂದು ಪಿಸ್ತೂಲನ್ನು ಕೊಳ್ಳುತ್ತಾನೆ.

ಅಂಗಡಿಯಲ್ಲಿ ಒಂಟಿಯಾಗಿ ಕುಳಿತ ಮಾಲೀಕನನ್ನು ಬ್ರೆಡ್ ಕೊಳ್ಳುವ ನೆಪದಲ್ಲಿ ಸಮೀಪಿಸುವ ವಿದ್ಯಾರ್ಥಿಯು ಪಿಸ್ತೂಲಿನಿಂದ ಹೊಡೆದು ಸಾಯಿಸಿ, ಗಲ್ಲಾಪೆಟ್ಟಿಗೆಯಿಂದ ಹಣವನ್ನು ತೆಗೆದುಕೊಳ್ಳುತ್ತಾನೆ. ಅವನ ಉದ್ದೇಶ ದರೋಡೆ ಮಾಡುವುದಲ್ಲ. ಹೇಡಿಯಂತೆ ಮೂಕವಾಗಿ ಯೋಚಿಸುವ ಬದಲು ತನ್ನ ಯೋಚನೆಯನ್ನು ಕಾರ್ಯಗತಗೊಳಿಸುವ ಸಾಮರ್ಥ್ಯ ತನಗಿದೆಯೆ ಎಂದು ಪರೀಕ್ಷಿಸುವುದು. ಹೊರಬರುವಾಗ ಅಕಸ್ಮಾತ್ ಎದುರಾಗುವ ಯುವತಿ–ಗಿರಾಕಿಯನ್ನೂ ತನ್ನ ಕೃತ್ಯಕ್ಕೆ ಸಾಕ್ಷಿಯಾಬಾರದೆನ್ನುವ ಕಾರಣಕ್ಕಾಗಿ ಗುಂಡಿಕ್ಕಿ ಸಾಯಿಸಿ, ಅವಳ ಕಾರಿನ ಮೇಲೆ ಬ್ರೆಡ್ಡಿನ ಪೊಟ್ಟಣವನ್ನು ಬಿಟ್ಟು ಹೋಗುತ್ತಾನೆ.

ಸಾಮಾಜಿಕ ಅಸಮಾನತೆಯ ಬಗ್ಗೆ ಮಾತನಾಡುವ ಸಹಪಾಠಿಗೆ ಮಾತನಾಡುವುದಷ್ಟೆ ಅಲ್ಲ ಎಂದು ಹೇಳಿ ಹೊರಬರುತ್ತಾನೆ.

ಸೇತುವೆಯ ಕೆಳಗೆ ಕಾರನ್ನು ನೀರಿನಿಂದಾಚೆಗೆ ಎಳೆಯಲಾರದೆ ಕಷ್ಟ ಪಡುವ ಬಡಕಲು ಕತ್ತೆಯನ್ನು ಕಾರಿನ ಮಾಲೀಕ ಗಾಲ್ಫ್ ದಾಂಡಿನಿಂದ ಹೊಡೆದು ಸಾಯಿಸುವುದನ್ನು ಸೇತುವೆಯ ಮೇಲೆ ನಿಂತು ನೋಡುತ್ತಾನೆ.

ಯುವತಿಯ ಚೀಲವನ್ನು ಆಕೆಯ ಕೈಯಿಂದ ಕಿತ್ತುಕೊಂಡು ಓಡುವ ಯುವಕರನ್ನು ಬೆನ್ನಟ್ಟಿ ಅವರಿಂದ ಹೊಡೆತ ತಿಂದರೂ ಬಿಡದೆ ಚೀಲವನ್ನು ಮರಳಿ ಪಡೆದು ಯುವತಿಗೆ ಒಪ್ಪಿಸುತ್ತಾನೆ.

ಸಿನಿಮಾ ಷೂಟಿಂಗ್ ಒಂದರ ಸಿಬ್ಬಂದಿಯಲ್ಲಿ ವಿದ್ಯಾರ್ಥಿಯೂ ಸೇರಿದ್ದಾನೆ. ಸ್ಥಳದಲ್ಲಿ ನಿರ್ದೇಶಕನನ್ನು ಒಬ್ಬ ಯುವ ಪತ್ರಕರ್ತೆ ದು ಯುವಜನರ ಪತ್ರಿಕೆಗಾಗಿ ಸಂದರ್ಶಿಸುತ್ತಾಳೆ. ಚಿತ್ರ ನಿರ್ದೇಶಕ ದರಷಾ?ನ್ ಒಮಿರ್ಬಾಯೇವ್. ನಿಮ್ಮ ಇತ್ತೀಚಿನ ಚಿತ್ರದ ಚಿತ್ರಕತೆ ಯಾಕೆ ಬರಡಾಗಿದೆ? ಎಂದು ಆಕೆ ಕೇಳುತ್ತಾಳೆ. ಚಿತ್ರ ಇರುವುದು ಬೇಜಾರು ಕಳೆಯಲು ಎಂದು ನಿರ್ದೇಶಕ ಉತ್ತರಿಸುತ್ತಾನೆ.

ತಾನು ಕೊಲೆಮಾಡಿದ ವ್ಯಕ್ತಿಗಳ ಸ್ಥಳಕ್ಕೆ ಭೇಟಿಕೊಟ್ಟಾಗ ಅದೇ ಸ್ಥಳದಲ್ಲಿ ಅಂಗಡಿಯನ್ನು ಪ್ರಾರಂಭಿಸಲು ತಯಾರಿ ನಡೆಸುವ ವ್ಯಕ್ತಿಗಳಿಗೆ ಕೊಲೆಯಾದ ಅಂಗಡಿಯವನ ಬಗ್ಗೆ ಯಾವ ಮಾಹಿತಿಯಾಗಲಿ, ಆಸಕ್ತಿಯಾಗಲಿ, ಭಾವನೆಗಳಾಗಲಿ ಇಲ್ಲದಿರುವುದನ್ನು ವಿದ್ಯಾರ್ಥಿಯು ಗಮನಿಸುತ್ತಾನೆ

ಕನಸಿನಲ್ಲಿ ತನ್ನ ತಾಯಿ–ತಂಗಿಯನ್ನು ನೋಡುವ ವಿದ್ಯಾರ್ಥಿ, ತನ್ನನ್ನು ನೋಡಲೆಂದು ಊರಿನಿಂದ ಬಂದ ತನ್ನ ಪ್ರೀತಿಪಾತ್ರ ತಾಯಿ–ತಂಗಿ ತನ್ನ ರೂಮಿನಲ್ಲಿ ಕುಳಿತು ಮಾತನಾಡುತ್ತಿದ್ದರೆ ವಿದ್ಯಾರ್ಥಿಯು ಹಾಸಿಗೆಯ ಮೇಲೆ ಮಂಕಾಗಿ ಮಲಗಿರುತ್ತಾನೆ.

ಯುವತಿಯೊಂದಿಗೆ ತಾನು ಕೊಲೆ ಮಾಡಿದ ಸಂಗತಿಯನ್ನು ಹೇಳುತ್ತಾನೆ. ಮುಚ್ಚಿದ ಬಾಗಿಲಿನ ಹಿಂದೆ ನಿಂತ ಪುಟ್ಟ ಹುಡುಗಿ ಬಾಗಿಲಿಗೆ ಕಿವಿಕೊಟ್ಟು

ಪುಟ 13 ಕ್ಕೆ



ನೇಮಕಗಳ ಬಿಜೆಪಿ ಶೈಲಿ

ಭೂಸೇನಾ ಮುಖ್ಯಸ್ಥರ ನೇಮಕವೂ ವಿವಾದದ ಗೂಡು



ಆಯಕಟ್ಟಿನ ಸ್ಥಳಗಳಲ್ಲಿ ತಮ್ಮ ಆಯ್ಕೆಯ ವ್ಯಕ್ತಿಗಳನ್ನು ನೇಮಕ ಮಾಡುವ ವಿಚಾರದಲ್ಲಿ ಸ್ಥಾಪಿತ ನಿಯಮಾವಳಿಗಳನ್ನು ಬದಿಗೊತ್ತುವ ತಮ್ಮದೇ ಒಂದು ವಿಧಾನವನ್ನು ಬಿಜೆಪಿ ಸರಕಾರ ಪ್ರದರ್ಶಿಸಿದೆ. ಈ ಎಲ್ಲವೂ ಭಾರತೀಯ ಪ್ರಭುತ್ವವನ್ನು ಸರ್ವಾಧಿಕಾರಶಾಹಿ-ಹಿಂದುತ್ವವಾದಿ ಶಕ್ತಿಗಳ ನಿಯಂತ್ರಣಕ್ಕೆ ಪಡೆಯುವ ಪ್ರಯತ್ನಗಳು ಎಂಬುದನ್ನು ಗಮನಿಸಬೇಕಾಗಿದೆ.

* ಪ್ರಕಾಶ್ ಕಾರಟ್

ಸರಕಾರ ಮತ್ತು ಪ್ರಭುತ್ವದ ಅತಿ ಆಯಕಟ್ಟಿನ ಹುದ್ದೆಗಳಿಗೆ ಮೋದಿ ಸರಕಾರ ಮಾಡುತ್ತಿರುವ ನೇಮಕಗಳು ವಿವಾದಾಸ್ಪದವಾಗಿವೆ ಹಾಗೂ ಸಂಬಂಧಪಟ್ಟ ಸಂಸ್ಥೆಗಳಿಗೆ ಹಾನಿಯುಂಟು ಮಾಡುವಂಥದ್ದಾಗಿವೆ. ಲೆಫ್ಟಿನೆಂಟ್ ಜನರಲ್ ಬಿಪಿನ್ ರಾವತ್‌ರನ್ನು ಭೂಸೇನೆಯ ಮುಖ್ಯಸ್ತರನ್ನಾಗಿ ನೇಮಕ ಮಾಡಲಾಗಿದೆ. ಅತ್ಯಂತ ಹಿರಿಯ ಜನರಲ್ ಲೆಫ್ಟಿನೆಂಟ್ ಜನರಲ್ ಪ್ರವೀಣ್ ಬಕ್ಷಿ ಅವರನ್ನು ಕಡೆಗಣಿಸಿ ರಾವತ್‌ರನ್ನು ಆಯ್ಕೆ ಮಾಡಲಾಗಿದೆ. ಹಿರಿತನದಲ್ಲಿ ಬಕ್ಷಿ ನಂತರದ ಸ್ಥಾನದಲ್ಲಿರುವವರು ಲೆಫ್ಟಿನೆಂಟ್ ಜನರಲ್ ಪಿ.ಎಂ. ಹರಿಝ್.

ಹಾಲಿ ಮುಖ್ಯಸ್ಥರ ನಿರ್ಗಮನದ ಕನಿಷ್ಠ 60 ದಿನಗಳ ಮೊದಲು ಹೊಸ ಮುಖ್ಯಸ್ಥರನ್ನು ಘೋಷಿಸುವುದು ಸಾಮಾನ್ಯ ವಾಡಿಕೆ. ಆದರೆ ಈ ಬಾರಿ ಜನರಲ್ ದಲ್ಬೀರ್ ಸಿಂಗ್ ಸುಹಾಗ್ ಅವರು ನಿವೃತ್ತರಾಗಲು ಕೇವಲ ಎರಡು ವಾರಗಳಿರುವಾಗ ಹೊಸ ಭೂಸೇನಾ ಮುಖ್ಯಸ್ಥರ ಹೆಸರನ್ನು ಘೋಷಿಸಲಾಗಿದೆ. ಪೂರ್ವ ಕಮಾಂಡ್‌ನ ಮುಖ್ಯಸ್ಥರಾಗಿರುವ ಮತ್ತು ಅತ್ಯುತ್ತಮ ಸೇವಾ ದಾಖಲೆ ಹೊಂದಿರುವ ಲೆಫ್ಟಿನೆಂಟ್ ಜನರಲ್ ಬಕ್ಷಿ ಹಿರಿತನದ ಆಧಾರದ ಮೇಲೆ ಹೊಸ ಭೂಸೇನಾ ಮುಖ್ಯಸ್ಥರಾಗಿ ನೇಮಕಗೊಳ್ಳುವರೆಂದು ವ್ಯಾಪಕವಾಗಿ ನಿರೀಕ್ಷಿಸಲಾಗಿತ್ತು. ಆದರೆ, ಅವರ ಬದಲು ಹಿರಿತನದ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದ್ದ ಬಿಪಿನ್ ರಾವತ್‌ರನ್ನು ಸರಕಾರ ನೇಮಿಸಿದೆ. ಇದರಿಂದ ಸೇನಾ ವಲಯದ ಒಳಗೂ ಹೊರಗೂ ತಪ್ಪು ಅಭಿಪ್ರಾಯಗಳು ಉಂಟಾಗಿವೆ.

ಸೇನಾ ಮುಖ್ಯಸ್ಥರ ನೇಮಕ ಸರಕಾರದ ವಿವೇಚನೆಗೆ ಸೇರಿದ್ದು ಹೌದು. ಆದರೆ ಹಿಂದಿನ ಉತ್ತಮ ಪರಂಪರೆಯನ್ನು ಬದಿಗೊತ್ತಿ ನೇಮಕ ಮಾಡಿದ ವಿಧಾನ ಇದರ ಹಿಂದಿನ ಉದ್ದೇಶದ ಕುರಿತು ಪ್ರಶ್ನೆಗಳು ಏಳುವಂತೆ ಮಾಡಿದೆ.

ಇದಕ್ಕೆ ಕಾರಣವೂ ಇದೆ. ಆಯಕಟ್ಟಿನ ಸ್ಥಳಗಳಲ್ಲಿ ತಮ್ಮ ಆಯ್ಕೆಯ ವ್ಯಕ್ತಿಗಳನ್ನು ನೇಮಕ ಮಾಡುವ ವಿಚಾರದಲ್ಲಿ ಸ್ಥಾಪಿತ ನಿಯಮಾವಳಿಗಳನ್ನು ಬದಿಗೊತ್ತುವ ತಮ್ಮದೇ ಒಂದು ವಿಧಾನವನ್ನು ಪ್ರಧಾನ ಮಂತ್ರಿಗಳು ಮತ್ತು ಬಿಜೆಪಿ ಸರಕಾರ ಪ್ರದರ್ಶಿಸಿದ್ದಾರೆ. ಸಿಬಿಐ ನಿರ್ದೇಶಕ ಅನಿಲ್ ಸಿನ್ಹಾ ಅವರ ನಿವೃತ್ತಿಯ ನಂತರ ಹೊಸ ನಿರ್ದೇಶಕರನ್ನು ನೇಮಿಸಬೇಕಿತ್ತು. ಆದರೆ ಸಿನ್ಹಾ ನಿವೃತ್ತರಾಗುವ ಎರಡು ದಿನಗಳ ಮೊದಲು ಸಿಬಿಐನ ಅತ್ಯಂತ ಹಿರಿಯ ಅಧಿಕಾರಿ ಆರ್.ಕೆ. ದತ್ತಾ ಅವರನ್ನು ಸಿಬಿಐನಿಂದ ಬದಲಾಯಿಸಲಾಯಿತು. ಅದಾದ ಕೆಲವು ದಿನಗಳ ನಂತರ, ಗುಜರಾತ್ ಕೇಡರ್‌ನ ಐಪಿಎಸ್ ಅಧಿಕಾರಿ ರಾಕೇಶ್ ಅಸ್ಥಾನಾ ಅವರನ್ನು ಸಿಬಿಐನ ಹಂಗಾಮಿ ನಿರ್ದೇಶಕರನ್ನಾಗಿ ನೇಮಕ ಮಾಡಲಾಯಿತು.

ಪ್ರಧಾನಿ, ಭಾರತದ ಮುಖ್ಯ ನ್ಯಾಯಾಧೀಶ ಹಾಗೂ ಲೋಕಸಭೆಯಲ್ಲಿನ ಅತ್ಯಂತ ದೊಡ್ಡ ಪ್ರತಿಪಕ್ಷದ ನಾಯಕರನ್ನೊಳಗೊಂಡ ಆಯ್ಕೆ ಸಮಿತಿಯೊಂದು ಸಿಬಿಐ ನಿರ್ದೇಶಕರನ್ನು ನೇಮಿಸುತ್ತದೆ. ಸ್ಥಾನ ತೆರವಾದ ನಂತರವೂ ಡಿಸೆಂಬರ್‌ನಲ್ಲಿ ಆ ಸಮಿತಿಯ ಸಭೆಯನ್ನು ನಡೆಸಲಾಗಿಲ್ಲ. ಪ್ರಸಕ್ತ ಮುಖ್ಯ ನ್ಯಾಯಾಧೀಶರು ಜನವರಿ ಮೊದಲ ವಾರದಲ್ಲಿ ನಿವೃತ್ತರಾದ ನಂತರವಷ್ಟೇ ಆ ಸಭೆಯನ್ನು ನಡೆಸಬಹುದೆನ್ನುವ ಅನುಮಾನವಿದೆ. ಪ್ರಧಾನಿ ಆಯ್ಕೆಯ ವ್ಯಕ್ತಿಯನ್ನೇ ಸಿಬಿಐ ನಿರ್ದೇಶಕರನ್ನಾಗಿ ಮಾಡುವ ಸಲುವಾಗಿ ಈ ಎಲ್ಲಾ ಕಸರತ್ತುಗಳನ್ನು ನಡೆಸಲಾಗುತ್ತಿದೆ ಎಂದು ಕಾಣುತ್ತದೆ.

ಇದಕ್ಕೂ ಹಿಂದೆ, ಮುಖ್ಯ ಜಾಗೃತಾ ಆಯುಕ್ತ (ಚೀಫ್ ವಿಜಿಲೆನ್ಸ್ ಕಮಿಷನರ್) ನೇಮಕವೂ ವಿವಾದಕ್ಕೆ ಕಾರಣವಾಗಿ ಸುಪ್ರೀಂ ಕೋರ್ಟ್ ಮೆಟ್ಟಿಲನ್ನು ಕೂಡ ಏರಿತ್ತು.

ತಮ್ಮ ಆಯ್ಕೆಯ ವ್ಯಕ್ತಿಗಳನ್ನು ನೇಮಿಸುವ ಪ್ರಕ್ರಿಯೆ ಉನ್ನತ ಶಿಕ್ಷಣ ಸಂಸ್ಥೆಗಳು ಮತ್ತು ಸಾಂಸ್ಕೃತಿಕ ಸಂಸ್ಥೆಗಳಲ್ಲಿ ಆರಂಭವಾಗಿತ್ತು. ಹಿಂದುತ್ವ ಬುದ್ಧಿಯ ವ್ಯಕ್ತಿಗಳು ಸಂಶೋಧನೆ ಮತ್ತು ಕೇಂದ್ರೀಯ ವಿಶ್ವ ವಿದ್ಯಾನಿಲಯಗಳು ಸೇರಿದಂತೆ ನಾನಾ ಉನ್ನತ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರಾಗಿದ್ದಾರೆ. ಅದಾದ ಮೇಲೆ, ಸಾಂವಿಧಾನಿಕ ಮತ್ತು ಕಾನೂನು ಸಂಸ್ಥೆಗಳಿಗೆ ಕೂಡ ಇದೇ ರೀತಿಯ ನೇಮಕಗಳನ್ನು ಮಾಡಲಾಗಿದೆ. ಆರ್‌ಎಸ್‌ಎಸ್ ಸಂಪರ್ಕವಿರುವ ಇಬ್ಬರನ್ನು ಕಾನೂನು ಆಯೋಗಕ್ಕೆ ನೇಮಿಸಿರುವುದು ಇದಕ್ಕೊಂದು ಉದಾಹರಣೆಯಾಗಿದೆ.

ರಾಜ್ಯಗಳ ಹೈಕೋರ್ಟ್‌ಗಳಿಗೆ ನ್ಯಾಯಾಧೀಶರನ್ನು ನೇಮಿಸುವ ವಿಚಾರವಾಗಿ ಸರಕಾರ ಮತ್ತು ಸುಪ್ರೀಂ ಕೋರ್ಟ್ ಕೊಲೇಜಿಯಂ ನಡುವಿನ ತಿಕ್ಕಾಟ ಕೂಡ ಯಾರು ನ್ಯಾಯಾಧೀಶರಾಗಬೇಕೆಂಬ ವಿಚಾರದಲ್ಲಿ ತನ್ನದೇ ಮಾತು ನಡೆಯಬೇಕೆಂಬ ಮೋದಿ ಸರಕಾರದ ಹಟಮಾರಿತನವೇ ಕಾರಣ ಎಂಬುದು ಸ್ಪಷ್ಟವಾಗಿದೆ. ನ್ಯಾಯಾಧೀಶರ ನೇಮಕದಲ್ಲಿ ರಾಷ್ಟ್ರೀಯ ಭದ್ರತೆಯ ಕಾರಣದ ಮೇಲೆ ವಿಟೋ ಚಲಾಯಿಸುವ ಅಧಿಕಾರವೂ ತನಗಿರಬೇಕೆಂಬುದು ಕೂಡ ಸರಕಾರದ ಹಟವಾಗಿದೆ. ತನ್ನ ಆಯ್ಕೆಯ ನ್ಯಾಯಾಧೀಶರನ್ನು ಹೊಂದುವುದು ಮೋದಿ ಸರಕಾರದ ಉದ್ದೇಶವಾಗಿದೆ.

ಈ ಎಲ್ಲವೂ ಪ್ರಭುತ್ವದ ಆಯಕಟ್ಟಿನ ಹಾಗೂ ಪ್ರಮುಖ ಸಂಸ್ಥೆಗಳ- ಅವು ನ್ಯಾಯಾಂಗವೇ ಇರಬಹುದು, ಅಧಿಕಾರಶಾಹಿಯೇ ಇರಬಹುದು ಅಥವಾ ಸಶಸ್ತ್ರ ಪಡೆಗಳೇ ಇರಬಹುದು – ಸಮಗ್ರತೆಗೆ ಅಪಾಯ ಉಂಟು ಮಾಡುತ್ತವೆ. ಭಾರತೀಯ ಪ್ರಭುತ್ವವನ್ನು ಸರ್ವಾಧಿಕಾರಶಾಹಿ-ಹಿಂದುತ್ವವಾದಿ ಶಕ್ತಿಗಳ ನಿಯಂತ್ರಣಕ್ಕೆ ಪಡೆಯುವ ಪ್ರಯತ್ನಗಳಿವು ಎಂಬುದನ್ನು ಗಮನಿಸಬೇಕಾಗಿದೆ.

ಅನು:ವಿಶ್ವ

ಕನಿಷ್ಟ ಕೂಲಿ ಮತ್ತು ಜೇಷ್ಠತಾ ಆಧಾರದಲ್ಲಿ ನೇಮಕಾತಿಗಾಗಿ ಅಂಗನವಾಡಿ ನೌಕರರ ಪ್ರತಿಭಟನೆ



ಕಳೆದ 41 ವರ್ಷಗಳಿಂದ ಅಂಗನವಾಡಿ ನೌಕರರು ಗೌರವ ಧನದ ಆಧಾರದಲ್ಲಿ ದುಡಿಯುತ್ತಿದ್ದಾರೆ. ಇವರನ್ನು ಸ್ವ-ಯಂ ಸೇವಕರೆಂದೂ ಸರಕಾರ 4 ಗಂಟೆಯಿಂದ 6 ಗಂಟೆಗೆ ಕೆಲಸದ ಅವಧಿಯನ್ನು ಹೆಚ್ಚಿಸಿದೆ. ಆದರೆ ಇವರಿಗೆ ವೇತನ ಮಾತ್ರ ರೂ.3000–6000 ಮಾತ್ರವಾಗಿದೆ. ಕರ್ನಾಟಕ ಬಿಟ್ಟು ಉಳಿದ ಹಲವು ರಾಜ್ಯಗಳಲ್ಲಿ ಅಂಗನವಾಡಿ ನೌಕರರು ಹಾಗೂ ಸಹಾಯಕರಿಗೆ ರಾಜ್ಯಕ್ಕಿಂತ 2–3 ಪಟ್ಟು ಹೆಚ್ಚಿನ ವೇತನವನ್ನು ನೀಡಲಾಗುತ್ತಿದೆ. ಆದರೆ ಕರ್ನಾಟಕ ರಾಜ್ಯದಲ್ಲಿ ಮಾತ್ರ ಕಡಿಮೆ ವೇತನದಲ್ಲಿ ದುಡಿಮೆ ಮಾಡುವ ಪರಿಸ್ಥಿತಿ ಅಂಗನವಾಡಿ ನೌಕರರಾಗಿದ್ದಾಗಿದೆ.

ಕನಿಷ್ಠ ಕೂಲಿ ವ್ಯಾಪ್ತಿಗೆ ಅಂಗನವಾಡಿ ನೌಕರರನ್ನು ಪರಿಗಣಿಸಬೇಕು ಮತ್ತು ಸೇವಾ ಜೇಷ್ಠತೆ ಆಧಾರದಲ್ಲಿ ಮೇಲ್ವಿಚಾರಕಿಯರ ಹುದ್ದೆಗಳಿಗೆ ನೇಮಕಾತಿ ಮತ್ತು ಸೇವಾ ನಿಯಾಮವಳಿಗೆ ಒತ್ತಾಯಿಸಿ ದೇಶದ ಎಲ್ಲಡೆ ಪ್ರತಿಭಟನೆ ನಡೆಸಬೇಕೆಂದು ಸಿಐಟಿಯು ಸಂಯೋಜಿತ ಅಖಿಲ ಭಾರತ ಅಂಗನವಾಡಿ ನೌಕರರ ಸಂಘಟನೆಯು ಕರೆ ನೀಡಿದ ಭಾಗವಾಗಿ ರಾಜ್ಯದಲ್ಲಿಯೂ ಡಿಸೆಂಬರ್ 20ರಂದು ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘಟನೆಯು ಸಿಐಟಿಯು ನೇತೃತ್ವದಲ್ಲಿ ಪ್ರತಿಭಟನೆಗಳನ್ನು ಹಮ್ಮಿಕೊಂಡಿತು.

1957ರಲ್ಲಿಯೇ ಐಎಲ್‌ಓ ಬದುಕುಳಿಯುವ ಕೂಲಿಯನ್ನು ನೀಡಬೇಕೆಂದು ನಿರ್ದೇಶಿಸಿದೆ. ಭಾರತದ ಸಂವಿಧಾನವು 'ಪ್ರತಿಯೊಬ್ಬ ಮನುಷ್ಯನಿಗೆ ಘನತೆಯ ಬದುಕನ್ನು ನಿರ್ದೇಶಿಸಿದೆ' 2012ರಲ್ಲಿ ಸ್ಕೀಂ ವರ್ಕರ್ಸ್‌ರನ್ನು ಕೆಲಸಗಾರರೆಂದು ಗುರುತಿಸಿ ಅವರಿಗೆ ಕನಿಷ್ಠ ಕೂಲಿಯನ್ನು ಕೊಡಬೇಕೆಂದು ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡಿದೆ. ಇತ್ತೀಚೆಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಗುತ್ತಿಗೆ ನೌಕರರಿಗೆ ಸಂಬಂಧಿಸಿದಂತೆ "ಸಮಾನ ಕೆಲಸಕ್ಕೆ ಸಮಾನ ವೇತನ" ಕೊಡಬೇಕೆಂದು ಐತಿಹಾಸಿಕ ಮತ್ತು ಮಹತ್ವದ ತೀರ್ಪು ಕೊಟ್ಟಿದೆ.

ಇವೆಲ್ಲವೂ ದುಡಿಮೆಗೆ ತಕ್ಕ ಕೂಲಿಯ ಆದೇಶವೇ ಆಗಿದೆ. ಅಂಗನವಾಡಿ ನೌಕರರು ಯೋಜನೇತರ ಮತ್ತು ಇಲಾಖೆಯೇತರ ಕೆಲಸಗಳನ್ನು ಮಾಡಿಸಲಾಗುತ್ತಿದೆ. ಇವೆಲ್ಲದರ ಬಗ್ಗೆ ತಮ್ಮ ಪ್ರಮುಖ ಬೇಡಿಕೆಗಳನ್ನು ಈಡೇರಿಸಬೇಕೆಂದು ಅಂಗನವಾಡಿ ನೌಕರರು ಪ್ರತಿಭಟನೆಗೆ ಮುಂದಾದರು.

ಈಗಾಗಲೇ ಗುಲ್ಬರ್ಗಾ, ರಾಯಚೂರು, ಗದಗ, ಉತ್ತರಕನ್ನಡ ಮತ್ತು ಕೋಲಾರ ಜಿಲ್ಲೆಗಳಲ್ಲಿ ಸುಮಾರು ಐವತ್ತಕ್ಕೂ ಹೆಚ್ಚು ಅಂಗನವಾಡಿ ನೌಕರರನ್ನು ಕೆಲಸದಿಂದ ಏಕಮುಖವಾಗಿ ತೆಗೆಯಲಾಗಿದೆ. ಅಸಂಘಟಿತ, ಗುತ್ತಿಗೆ ನೌಕರರು, ದಿನಗೂಲಿ ನೌಕರರಿಗೂ ಕೆಲಸದ ಭದ್ರತೆಯ ಭಾಗವಾಗಿ ಕಾರ್ಮಿಕ ಕಾನೂನುಗಳು ಮತ್ತು ಸೇವಾ ನಿಯಮವಳಿಗಳಿದ್ದರೂ, ಉಲ್ಲಂಘನೆಯಾಗುತ್ತಿರುವುದನ್ನು ಪ್ರತಿಭಟನಾಕಾರರು ಖಂಡಿಸಿದರು.

ನವಂಬರ್ 22–23, 2016ರಂದು ಇನ್ನೂ ಹಲವು ಬೇಡಿಕೆಗಳಿಗೆ ಸಂಬಂಧಿಸಿದಂತೆ ಇಲಾಖಾ ನಿರ್ದೇಶಕರಿಗೆ ಹಾಗೂ ಕಾರ್ಯದರ್ಶಿಗಳಿಗೆ ನಿರ್ದಿಷ್ಠ ಬದಲಾವಣೆಗಳು ಹಾಗೂ ಆದೇಶಗಳು ಜಾರಿಯಾಗಬೇಕೆಂದು ಮನವಿ ಸಲ್ಲಿಸಲಾಗಿದ್ದರೂ ಸರ್ಕಾರ ಯಾವುದೇ ಕ್ರಮಕ್ಕೆಗೊಳ್ಳದಿರುವುದರಿಂದ ದೇಶವ್ಯಾಪಿ ನೌಕರರು ಪ್ರತಿಭಟನೆಗೆ ಮುಂದಾದರು.

ರಾಜ್ಯದ 127 ತಾಲ್ಲೂಕುಗಳಲ್ಲಿ ಸುಮಾರು 20 ಸಾವಿರಕ್ಕೂ ಹೆಚ್ಚಿನ ಅಂಗನವಾಡಿ ನೌಕರರು ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದಾರೆ. ತಾಲ್ಲೂಕು ಕೇಂದ್ರಗಳ ಮೂಲಕ ಕೇಂದ್ರ, ರಾಜ್ಯ ಸರ್ಕಾರಗಳಿಗೆ ಮನವಿ ಸಲ್ಲಿಸಿದ್ದಾರೆ.







ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ 6ನೇ ರಾಜ್ಯ ಸಮ್ಮೇಳನ, ಕುಂದಾಪುರ

ಹೆಚ್.ಆರ್. ನವೀನ್‌ಕುಮಾರ್

ರಾಜ್ಯದಲ್ಲಿ ಕೃಷಿ ಕೂಲಿಕಾರರ ಚಳುವಳಿಯನ್ನು ಬಲಗೊಳಿಸಲು ನಿರ್ಧಾರ





ನಿವೇಶನರಹಿತ ಕೂಲಿಕಾರರ ಕುಟುಂಬಗಳಿಗೆ ಉಚಿತ ಮನೆ–ನಿವೇಶನಗಳನ್ನು ಮಂಜೂರು ಮಾಡಲು ಆಗ್ರಹಿಸಿ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಸಮರ್ಪಕ ಜಾರಿಗೆ ಒತ್ತಾಯಿಸಿ, ಕೋಮುವಾದ ಮೂಲಭೂತವಾದ ಹಿಮ್ಮೆಟ್ಟಿಸಲು ಒತ್ತಾಯಿಸಿ ಕಡಲತಡಿ ಉಡುಪಿ ಜಿಲ್ಲೆಯ ಕುಂದಾಪುರದಲ್ಲಿ ದುಡಿಯುವ ಗ್ರಾಮೀಣ ಭಾಗದ ಶ್ರಮಜೀವಿಗಳ ವರ್ಗವಾದ ಕೃಷಿ ಕೂಲಿಕಾರರ 6 ನೇ ರಾಜ್ಯ ಸಮ್ಮೇಳನ ಡಿಸೆಂಬರ್ 19 ರಿಂದ 21 ರ ವರೆಗೆ ಮೂರು ದಿನಗಳ ಕಾಲ 'ಫಿಡೆಲ್ ಕ್ಯಾಸ್ಟ್ರೋ ನಗರ'ದಲ್ಲಿ ಅತ್ಯಂತ ಯಶಸ್ವಿಯಾಗಿ ನಡೆಯಿತು. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಸಮ್ಮೇಳನದ ಮೊದಲ ದಿನ ಕುಂದಾಪುರದಲ್ಲಿ ಸಾವಿರಾರು ಕೃಷಿ ಕೂಲಿಕಾರರು, ಕಾರ್ಮಿಕರ ಮೆರವಣಿಗೆ ಎಲ್ಲರ ಗಮನ ಸೆಳೆಯಿತು. ನಗರದ ಪ್ರಮುಖ ಬೀದಿಯಲ್ಲಿ ಮೆರವಣಿಗೆ ನಡೆಸಿದ ಕೂಲಿಕಾರರು ನೆಹರೂ ಮೈಧಾನದಲ್ಲಿ ಸಮಾವೇಶಗೊಂಡು ಬಹಿರಂಗಸಭೆಯನ್ನು ನಡೆಸಲಾಯಿತು.

ಬಹಿರಂಗ ಸಭೆಯನ್ನು ಉಧ್ಘಾಟಿಸಿ ಮಾತನಾಡಿದ ಕೇರಳ ಎಡರಂಗ ಸರ್ಕಾರದ ಆರೋಗ್ಯ ಸಚಿವರಾದ ಶೈಲಜಾ ಟೀಚರ್‌ರವರು ಇವತ್ತು ನಾಡಿನ ಮಣ್ಣಿನ ಮಕ್ಕಳು ಮೊದಲೇ ಕಡಿಮೆ ಉದ್ಯೋಗದ ಕಾರಣಕ್ಕೆ ಸಂಕಷ್ಟ ಅನುಭವಿಸುತ್ತಿದ್ದಾರೆ. ಇದರ ಬೆನ್ನಲ್ಲೇ ನರೇಂದ್ರ ಮೋದಿಯ ನೋಟು ರದ್ದತಿ ಆದೇಶ ಮತ್ತಷ್ಟು ಸಂಕಷ್ಟಕ್ಕೀಡು ಮಾಡಿದೆ. ಯಾವುದೇ ಪೂರ್ವಭಾವಿ ತಯಾರಿ ಇಲ್ಲದೇ ಮಾಡಿದ ನೋಟು ರದ್ದತಿಗೆ ಸಾಮಾನ್ಯ ಜನರು ತೊಂದರೆ ಅನುಭವಿಸುತ್ತಿದ್ದಾರೆ. ಇನ್ನೊಂದು ಕಡೆ ಧಾರ್ಮಿಕ ಮೂಲಭಾತವಾದಿಗಳು ತಮ್ಮ ಮೂಲಭೂತ ವಾದವನ್ನು ಹರಡುತ್ತಿದ್ದಾರೆ. ಇದು ಕಳವಳಕಾರಿಯಾಗಿದ್ದು ಕೇಂದ್ರ ಸರಕಾರ ಜನವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಹೇಳಿದರು

ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಕಾಂಗ್ರೆಸ್ ಅಸ್ಪೃಶ್ಯತೆ ವಿರುದ್ಧ ಹೋರಾಟ ಬೆಂಬಲಿಸಲಿಲ್ಲ. ಭೂಮಾಲೀಕರನ್ನು ಬೆಂಬಲಿಸುವ ಕೆಲಸವನ್ನು ಮಾಡಿತ್ತು. ಜಾತಿ ಮತ್ತು ಅಸ್ಪೃಶ್ಯತೆಯನ್ನು ವಿರೋಧಿಸಿ ಹೋರಾಟ ಮಾಡಿದ್ದು ಎಡ ಚಳವಳಿ ಮತ್ತು ಸಮಾಜವಾದಿ ಪಕ್ಷ ಎನ್ನುವುದು ನಾವು ನೆನಪಿಸಿಕೊಳ್ಳಬೇಕಿದೆ ಎಂದು ಶೈಲಜ ಟೀಚರ್ ಎಡಪಂಥೀಯ ಚಳುವಳಿಯ ಹೋರಾಟಗಾಥೆಯ ಬಗ್ಗೆ ವಿವರಿಸಿದರು.

ಭೂಮಿ ಹಂಚಿಕೆಯ ಹೋರಾಟಕ್ಕಾಗಿ ಸ್ವತಃ ಭೂ ಮಾಲೀಕ ಕುಟುಂಬದವರಾದ ಕಾಮ್ರೇಡ್ ಇಎಂಎಸ್ ನಂಬೂದರಿಪ್ಪಾಡ್ ಕೂಡ ಹೋರಾಟದ ನೇತೃತ್ವ ವಹಿಸಿದ್ದರು. ಇಂತಹದೊಂದು ಹೋರಾಟಗಳನ್ನು ಲಾಠಿ ಗುಂಡಿನ ಮೂಲಕ ಸದೆಬಡಿದರೂ ಎಲ್ಲವನ್ನೂ ಎದುರಿಸಿ ಹೋರಾಟ ಮಾಡಿದರು. ಇದು ಕಮ್ಯೂನಿಸ್ಟರ ಬದ್ಧತೆ ಎಂದರು.

ಮೋದಿ ನಗದುರಹಿತ ಆರ್ಥಿಕ ವ್ಯವಸ್ಥೆ ಕುರಿತು ಮಾತನಾಡುತ್ತಿದ್ದಾರೆ. ಇದು ಯಾವ ರೀತಿಯಾಗಿ ಸಾಗುತ್ತದೆ ಎನ್ನುವುದು ಎಲ್ಲರು ಅರಿತುಕೊಂಡಿದ್ದಾರೆ. ಯಾರು ಏನನ್ನು ತಿನ್ನಬೇಕು, ಏನನ್ನು ಉಡಬೇಕು ಎಂಬ ನಿರ್ಧಾರ ಮಾಡುವ ಕೆಲಸ ಮಾಡಲಾಗುತ್ತಿದೆ. ಅವರ ಮಾತಿಗೆ ಬೆಲೆ ಕೊಡದೇ ಇದ್ದರೆ ಹಾಡುಹಗಲೇ ಕೊಲೆ ಮಾಡುವ ಅನಾಹುತಕಾರಿ ಘಟನೆಯನ್ನು ನಾವು ಅನುಭವಿಸುತ್ತಿದ್ದೇವೆ. ಸಂಘಪರಿವಾರ ಪುರೋಹಿತಶಾಹಿ ಪ್ರಾಧಾನ್ಯದ ವರ್ಣಾಶ್ರಮವನ್ನು ಎತ್ತಿ ಹಿಡಿಯುವಂತಹ ಕೆಲಸ ಮಾಡುತ್ತಿದೆ. ಇಂತಹ ಒಂದು ಹೀನ ಸಂಘಪರಿವಾರದ ಯೋಜನೆಯನ್ನು ಮಟ್ಟಹಾಕಬೇಕಿದ್ದರೆ ನಾವು ಹೋರಾಟವನ್ನು ಮಾಡಬೇಕು ಎಂದು ನುಡಿದರು.



ಕುರುಡ– ಕಿವುಡ– ಮೂಗ ಸರ್ಕಾರ ಕೇಂದ್ರದಲ್ಲಿ: ರಾಘವನ್

ಬಹಿರಂಗ ಸಭೆಯಲ್ಲಿ ಮುಖ್ಯ ಅಥಿತಿಗಳಾಗಿ ಭಾಗವಹಿಸಿದ್ದ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿಗಳು ಮತ್ತು ಮಾಜಿ ರಾಜ್ಯ ಸಭಾ ಸದಸ್ಯರಾದ ವಿಜಯ ರಾಘವನ್ ಮಾತನಾಡಿ ದೇಶದಲ್ಲಿ ಒಂದು ಹೊಸ ರೀತಿಯ ಪರಿಸ್ಥಿತಿ ಉದ್ಭವವಾಗಿದೆ. ಕುರುಡ– ಕಿವುಡ– ಮೂಕ ಸರ್ಕಾರ ಇಂದು ಕೇಂದ್ರದಲ್ಲಿ ಅಧಿಕಾರದಲ್ಲಿದೆ. ಕಾರ್ಪೋರೇಟ್ ಧಣಿಗಳಿಗೆ ಮಾತ್ರ ಸೀಮಿತವಾಗಿದೆ. ಕಾರ್ಮಿಕರು ಕೆಲಸ ಕೇಳಿದರೆ ಬ್ಯಾಂಕ್ ಮುಂಭಾಗ ಕ್ಯೂ ನಿಲ್ಲುವ ಕೆಲಸ ಕೊಡುತ್ತಿದ್ದಾರೆ. ಬಿಪಿಎಲ್ ಕಾರ್ಡ್ ಕೇಳಿದರೆ ಕ್ರೆಡಿಟ್ ಕಾರ್ಡ್ ಕೊಡುವ ಮೋದಿ ಸರ್ಕಾರ ಎಂದು ಕೇಂದ್ರ ಸರಕಾರದ ಜನವಿರೋಧಿ ನೀತಿಗಳನ್ನು ಕಟುವಾಗಿ ಟೀಕಿಸಿದರು.

ದೇಶದಲ್ಲಿ ಕೋಮು ಗಲಭೆ ಉಂಟುಮಾಡಿ ಆ ಮೂಲಕ ದುಡಿಯುವ ಜನರ ವಿರುದ್ಧ ಶ್ರೀಮಂತರನ್ನು ಬೆಳೆಸುವ ಕೆಲಸ ಕೇಂದ್ರ ಮಾಡುತ್ತಿದೆ. ಈ ಸರ್ಕಾರದ ನೀತಿಗಳನ್ನು ನಾವು ಹೋರಾಟಗಳಿಂದ ಬದಲಾಯಿಸಬೇಕು. ದೊಡ್ಡ ಹೋರಾಟದಿಂದ ಮಾತ್ರ ಜನವಿರೋಧಿ ಸರ್ಕಾರವನ್ನು ಬದಲಾಯಿಸಲು ಸಾಧ್ಯ. ಸ್ವಾತಂತ್ರ್ಯ ಬಂದು ಹಲವು ವರ್ಷ ಕಳೆದರೂ ಕೂಡ ಮನೆ, ಭೂಮಿ ಕೊಡುವ ಕಾರ್ಯಕ್ರಮ ಈ ಸರ್ಕಾರ ಕೊಟ್ಟಿಲ್ಲ. ಸಹಸ್ರಾರು ಜನ ಲಾಠಿ ಏಟು ತಿಂದು ಹೋರಾಟ ಮಾಡಿದರೂ ಕೂಡ ಇಂದಿಗೂ ಭೂಮಿ ಕೊಡಲು ಸರ್ಕಾರ ಹಿಂದೇಟು ಹಾಕುತ್ತಿದೆ. ರೈತರನ್ನು ಒಕ್ಕಲೆಬ್ಬಿಸುವ ಕೆಲಸವನ್ನು ಕೇಂದ್ರ ಮಾಡುತ್ತಿದೆ ಎಂದರು. ಕೇರಳದಲ್ಲಿ ಎಡ ಸರ್ಕಾರ ಅಧಿಕಾರಕ್ಕೆ ಬಂದಾಗ ಯಾವುದೇ ಒಬ್ಬ ರೈತನ ಭೂಮಿಯನ್ನೂ ಕಿತ್ತುಕೊಳ್ಳಲಿಲ್ಲ ಎಂದರು.

ದಿವಾಳಿ ಬ್ಯಾಂಕು ರಕ್ಷಣೆಗೆ ನೋಟು ನಿಷೇಧ : ಶ್ರೀರಾಮ ರೆಡ್ಡಿ

ಭೂಮಿ ಕೊಡುವುದಕ್ಕಾಗಿ ಸರ್ಜಿಕಲ್ ದಾಳಿ ಮಾಡಬೇಕಾದ ಮೋದಿ ಬದಲಾಗಿ ನೋಟ್ ರದ್ದತಿಯ ಮೂಲಕ ಬಡವರ ಮೇಲೆ ಸರ್ಜಿಕಲ್ ದಾಳಿ ಮಾಡಿದ್ದಾರೆ. ಕಪ್ಪು ಹಣ ಇದ್ದವರನ್ನು ಸುರಕ್ಷಿತವಾಗಿ ಬಿಟ್ಟಿದ್ದಾರೆ. ಶ್ರೀಮಂತರು ಬ್ಯಾಂಕಿನ ಎದುರು ನಿಲ್ಲಲಿಲ್ಲ. ಶ್ರೀಮಂತರ ಬಳಿ ಇದ್ದ ಹಣ ಹೇಗೆ ಮಾರ್ಪಾಟು ಆಗಿದೆ? ಎಂದು ಸಿ.ಪಿ.ಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ಕೇಂದ್ರ ಸರಕಾರದ ನೋಟು ನಿಷೇಧದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. ಯಾರಿಗೋಸ್ಕರ ನೋಟು ರದ್ದು ಮಾಡಿದ್ದೀರಿ ನರೇಂದ್ರ ಮೋದಿಯವರೇ? ದಿವಾಳಿಯಾದ ಬ್ಯಾಂಕ್ ಗಳನ್ನು ರಕ್ಷಣೆ ಮಾಡಲಿಕ್ಕೆ ನೋಟು ರದ್ದತಿ ನೀತಿಯನ್ನು ಜಾರಿಗೊಳಿಸಿದ್ದೀರಿ. ಶ್ರೀಮಂತರನ್ನು ಸಾಲದಿಂದ ಮುಕ್ತಗೊಳಿಸಲಿಕ್ಕೆ ಮಾಡಿದ್ದೀರಿ ಎಂದರು ಕರ್ನಾಟಕ ರಾಜ್ಯದಲ್ಲಿ 46 ಲಕ್ಷ ಜನ ಭೂಮಿಗಾಗಿ, ನಿವೇಶನಕ್ಕಾಗಿ ಅರ್ಜಿ ಹಾಕಿದ್ದಾರೆ. ಯಾಕೆ ಸಿದ್ದರಾಮಯ್ಯನವರೇ ನಿವೇಶನ ಕೊಡುತ್ತಿಲ್ಲ? 7 ಲಕ್ಷ ಜನ ಭೂಮಿಗಾಗಿ ಹಾಕಿದ್ದ ಅರ್ಜಿಗಳು ತೀರ್ಮಾನವಾಗದೇ ಹಾಗೆಯೇ ಇವೆ ಎಂದು ರಾಜ್ಯ ಸರಕಾರದ ನೀತಿಯನ್ನು ಖಂಡಿಸಿದರು.

ರಾಜ್ಯದ ಜನ ಭೂಮಿ, ನಿವೇಶನ, ನಿಲ್ದೋದ–ಕ್ಕೆ ಸೂರು ಬೇಕು ಎಂದು ಒದ್ದಾಡುತ್ತಿದ್ದಾರೆ. ಮನೆ ಬೇಕು ಎಂದು 50,000 ಕ್ಕೂ ಅಧಿಕ ಜನ ಜೈಲಿಗೆ ಹೋಗಲು ಸಿದ್ದರಾಗಿದ್ದಾರೆ. ಆದರೆ ಸರ್ಕಾರ–ಕ್ಕೆ ಜೈಲಿಗಟ್ಟಲು ದಮ್ ಇಲ್ಲ. ಪ್ರತಿ ಹಳ್ಳಿಯಲ್ಲಿರುವ







ನಿವೇಶನ ರಹಿತರಿಗೆ ನಿವೇಶನ ನೀಡಬೇಕು ಎಂದು ಕೃಷಿ ಕೂಲಿಕಾರರ ಸಂಘದ ರಾಜ್ಯ ಉಪಾಧ್ಯಕ್ಷರಾದ ಜಿ.ಎನ್. ನಾಗರಾಜ್ ಆಗ್ರಹಿಸಿದರು. ಬಿಜೆಪಿ ಕಾಂಗ್ರೆಸ್ ಒಂದೇ ನಾಣ್ಯದ ಎರಡು ಮುಖ. ಕರಾವಳಿಯಲ್ಲಿ ಗೋಹತ್ಯೆ ಹೆಸರಿನಲ್ಲಿ ಕೋಮು ಗಲಭೆ ಎಬ್ಬಿಸುವ ಕೆಲಸ ಬಿಜೆಪಿ ಮಾಡುತ್ತಿದೆ. ಆದರೆ ಕಾಂಗ್ರೆಸ್ ಅವರನ್ನು ನಿಯಂತ್ರಿಸುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ ಅವರು, ರಾಜ್ಯಾದ್ಯಂತ ಹೋರಾಟಕ್ಕೆ ಧುಮುಕೋಣ ಎಂದು ಕರೆ ಕೊಟ್ಟರು.

ಕೂಲಿಕಾರರ ಬದುಕು ಮತ್ತು ಬವಣೆ ಹೇಗಿದೆ ಎಂಬ ಚರ್ಚೆ ಮಾಡಿ ತೀರ್ಮಾನ ಮಾಡಲಿಕ್ಕೆ ಸೇರಿದ್ದೇವೆ. ನೋಟು ನಿಷೇಧದಿಂದ ಲಕ್ಷಾಂತರ ಜನ ಕೃಷಿಕೂಲಿಕಾರರಿಗೆ ಕೆಲಸ ಇಲ್ಲದ ಹಾಗೆ ಆಗಿದೆ. ವಲಸೆ ಬಂದು ಕೂಲಿ ಮಾಡುತ್ತಿದ್ದಾರೆ. ಬಿಲ್ ಕಟ್ಟಲಾಗದೇ ಸತ್ತಿದ್ದಾರೆ. ಕೂಲಿ ಸಿಗದೇ ಇದ್ದುದ-ರಿಂದ ಹಸಿವಿನಿಂದ ಬಳಲಿದು ವಾಪಾಸಾಗುತ್ತಿದ್ದಾರೆ. ಶ್ರೀಮಂತರ ಕಪ್ಪು ಹಣ ವಜಾಮಾಡುತ್ತೇವೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ನೋಟ್ ರದ್ದತಿಯಿಂದ ನೂರಕ್ಕೂ ಅಧಿಕ ಜನ ಬ್ಯಾಂಕ್ ಎದುರು ಕ್ಯೂನಲ್ಲಿ ನಿಂತು ಸತ್ತಿದ್ದಾರೆ. ಕೇಂದ್ರ ಸರ್ಕಾರ ಉದ್ಯೋಗ ಖಾತರಿ ಯೋಜನೆಯನ್ನು ನಾಶ ಮಾಡಲು ಹೊರಟಿರುವುದು ದುರದೃಷ್ಟಕರ ಎಂದು ಕಳವಳ ವ್ಯಕ್ತಪಡಿಸಿದರು.

ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದ ಸ್ವಾಮಿಯವರು ಬಹಿರಂಗ ಸಭೆಯ ಅಧ್ಯಕ್ಷತೆ ವಹಿಸಿದ್ದರು ವೇದಿಕೆಯಲ್ಲಿ ಕೂಲಿಕಾರರ ಸಂಘದ ಅಖಿಲ ಭಾರತ ಅಧ್ಯಕ್ಷರಾದ ತಿರುನಾವಕ್ಕರಸು ಮುಖಂಡರಾದ ಬಾಲಕೃಷ್ಣ ಶೆಟ್ಟಿ, ರಾಜೀವ ಪಡುಕೋಣೆ ಮುಖ್ಯ ಅತಿಥಿಗಳಾಗಿದ್ದರು. ಸ್ವಾಗತ ಸಮಿತಿ ಅಧ್ಯಕ್ಷ ಕೆ.ಶಂಕರ್ ಸ್ವಾಗತಿಸಿ, ಕೃಷಿಕೂಲಿಕಾರರ ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ ವಂದಿಸಿದರು. ವೆಂಕಟೇಶ್ ಕೋಣಿ ನಿರೂಪಿಸಿದರು.



ರಾಜ್ಯದಲ್ಲಿ ಕೂಲಿಕಾರರ ಚಳುವಳಿಯನ್ನು ಬಲಗೊಳಿಸಲು ಸಮ್ಮೇಳನ ನಿರ್ಧಾರ.

ಕೂಲಿಕಾರರ ಸಂಘದ ಕೆಂಬಾವುಟವನ್ನು ಆರೋಹಣ ಮಾಡುವ ಮೂಲಕ ಸಂಘದ ರಾಜ್ಯ ಅಧ್ಯಕ್ಷರಾದ ಸಂಗಾತಿ ನಿತ್ಯಾನಂದ ಸ್ವಾಮಿಯವರು ಪ್ರತಿನಿಧಿಗಳ ಅಧಿವೇಶನಕ್ಕೆ ಅಧಿಕೃತ ಚಾಲನೆ ನೀಡಿದರು. ನಂತರ ಹುತಾತ್ಮ ಸ್ಮಾರಕಕ್ಕೆ ವಂದಿಸಿಸಲಾಯಿತು. ಪ್ರತಿನಿಧಿಗಳ ಅಧಿವೇಶನವನ್ನು ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಗಳಾದ ವಿಜಯ ರಾಘವನ್ ಉದ್ಘಾಟಿಸಿದರು.

ಕಳೆದ ಮೂರು ವರ್ಷಗಳಲ್ಲಿ ಪ್ರಮುಖವಾಗಿ ರಾಜ್ಯದಲ್ಲಿ ನಡೆದ ಕಾರ್ಷಿಕ ರಂಗದ ಬೆಳವಣಿಗೆ ಮತ್ತು ಕೂಲಿಕಾರರ ಜೀವನ, ಹೋರಾಟ, ಚಟುವಟಿಕೆಗಳ ಮತ್ತು ಸಂಘಟನೆಯ ವಿಸ್ತರಣೆ ಕ್ರೋಡೀಕರಣಗಳ ಕುರಿತು ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೆರ ಮಂಡಿಸಿದ ವರದಿಯ ಮೇಲೆ ಚರ್ಚೆ ನಡೆಯಿತು. ರಾಜ್ಯದ 17 ಜಿಲ್ಲೆಗಳಿಂದ ಭಾಗವಹಿಸಿದ್ದ 228 ಪ್ರತಿನಿಧಿಗಳಲ್ಲಿ 48 ಪ್ರತಿನಿಧಿಗಳು ಕರಡುವರದಿಯ ಮೇಲಿನ ಚರ್ಚೆಯಲ್ಲಿ ನೇರವಾಗಿ ಪಾಲ್ಗೊಂಡರು. ಚರ್ಚೆಯಲ್ಲಿ ರಾಜ್ಯದಲ್ಲಿ ಕೂಲಿಕಾರರ ಸಂಘಟನೆಯಿಂದ ಕೈಗೆತ್ತಿಕೊಂಡಿರುವ ಉದ್ಯೋಗ ಖಾತ್ರಿ ಯೋಜನೆಯ ಸಮಪ್ರಕ ಜಾರಿ, ಕೂಲಿಯ ಪ್ರಶ್ನೆ, ಮನೆ ನಿವೇಶನ ರಹಿತರ ಹೋರಾಟ ಮತ್ತು ಕೂಲಿಕಾರ ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ಕುರಿತು ಗಂಬೀರವಾಗಿ ಚರ್ಚಿಸಲಾಯಿತು. ಚರ್ಚೆಯ ಒಂಟ್ಟು ಫಲಿತಾಂಶವಾಗಿ ರಾಜ್ಯದಲ್ಲಿ ಕೂಲಿಕಾರರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದ್ದು ಇವರುಗಳನ್ನು ನಮ್ಮ ಸಂಘಟನೆಯ ವ್ಯಾಪ್ತಿಗೆ ತರಲು ವಿಫುಲವಾದ ಅವಕಾಶಗಳಿದ್ದು ಅವುಗಳನ್ನು ಸರಿಯಾಗಿ ಬಳಸಿಕೊಂಡು ಸಂಘಟನೆ ಮತ್ತು ಚಳುವಳಿಯನ್ನು ಬೆಳೆಸಬೇಕೆಂದು ತೀರ್ಮಾನಿಸಲಾಯಿತು.

ಪ್ರತಿನಿಧಿಗಳ ಚರ್ಚೆಗಳನ್ನು ಗಮನಿಸಿ ಮಾರ್ಗದರ್ಶನ ನೀಡಿದ ಕೂಲಿಕಾರರ ಸಂಘದ ಅಖಿಲ ಭಾರತ ಅಧ್ಯಕ್ಷರಾದ ತಿರುನಾವಕ್ಕರಸುರವರು ರಾಜ್ಯ ದಲ್ಲಿ ಕಳೆದ ಮೂರು ವರ್ಷಗಳಲ್ಲಿ ರಾಜ್ಯ ನಾಯಕತ್ವ ಚಳುವಳಿಯನ್ನು ಕಟ್ಟಲ್ಲು ಮತ್ತು ಕೂಲಿಕಾರರ ಪ್ರಶ್ನೆಗಳನ್ನು ಕೈಗೆತ್ತಿಕೊಳ್ಳಲು ಸಾಕಷ್ಟು ನಿರ್ಣಾಯ ಪ್ರಯತ್ನಗಳನ್ನು ನಡೆಸಿದೆ ಆದರೆ ಇನ್ನು ಹೆಚ್ಚಿನ ನಿರೀಕ್ಷೆಗಳಿದ್ದು ಅದನ್ನು ಸಂಪೂರ್ಣಗೊಳಿಸಲು ಈ ಸಮ್ಮೇಳನದಲ್ಲಿ ಬಂದಿರುವ ಚರ್ಚೆಗಳು ಸಹಕಾರಿಯಾಗಲಿವೆ. ಕೂಲಿಕಾರರ ಸಂಘದ ಅಖಿಲ ಭಾರತ ಕಣ್ಣೋಟದ ಆಧಾರದ ಮೇಲೆ ರಾಜ್ಯದ ಪ್ರತಿ ಹಳ್ಳಿಗಳಲ್ಲೂ ಕೂಲಿಕಾರರ ಸಂಘವನ್ನು ಕಟ್ಟಲು ಯೋಜನೆಯೊಂದನ್ನು ರೂಪಿಸಿ ಯಶಸ್ವಿಯಾದರೆ ಮಾತ್ರ ನಮ್ಮ ವರ್ಗ ಶತೃಗಳನ್ನು ನಾವು ಸಮರ್ಥವಾಗಿ ಎದುರಿಸಲು ಸಾಧ್ಯ ಎಂದರು.



ಸಮಾರೋಪ :



ಕೆಳವರ್ಗ ಸಮುದಾಯದವರು ಕೂಲಿ ಕಾರ್ಮಿಕರಾಗಿದ್ದಾರೆ. ಅವರ ತಿಳುವಳಿಕೆಯನ್ನು ಗಮನದಲ್ಲಿರಿಸಿಕೊಂಡು ನಾವೆಲ್ಲರೂ ಕೆಲಸ ಮಾಡಬೇಕಾಗಿದೆ. ಬಡಜನರಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಆಳುವ ವರ್ಗ ಕೊಡುತ್ತಿಲ್ಲ. ಒಂದೆಡೆ ಕೇಂದ್ರದ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ, ಇನ್ನೊಂದೆಡೆ ರಾಜ್ಯದ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರದ ಜನವಿರೋಧಿ ನೀತಿಗಳನ್ನು ನಾವು ಎದುರಿಸಬೇಕಿದ್ದರೆ ನಾವೆಲ್ಲರೂ ಸೇರಿ ಕೆಲಸ ಮಾಡಬೇಕಿದೆ ಎಂದು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ವಿಜಯ್ ರಾಘವನ್ ನುಡಿದರು.

ಅವರು ಮೂರು ದಿನಗಳಿಂದ ಕುಂದಾಪುರ ಕಾರ್ಮಿಕಭವನದಲ್ಲಿನಡೆಯುತ್ತಿರುವಕೃಷಿಕೂಲಿಕಾರರ ಸಂಘದ 6ನೇ ರಾಜ್ಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಮಾತನಾಡುತ್ತಿದ್ದರು.

ನಾವು ನಮ್ಮ ಮುಂದೆ ಇರುವ ದುಷ್ಟ ಶಕ್ತಿಗಳನ್ನು ಎದುರಿಸಬೇಕಿದೆ. ಕಾರ್ಪೋರೇಟರ್‌ಗಳು, ಹಣವಂತರು, ಭೂ ಮಾಲಕರ ವಿರುದ್ದ ನಾವು ಸೆಟೆದು ನಿಲ್ಲಬೇಕಿದೆ. ಇವರೆಲ್ಲರೂ ಬಡವರನ್ನು ಶೋಷಣೆ ಮಾಡುತ್ತಿರುವವರು. ಇವರೆಲ್ಲರನ್ನೂ ನಾವು ಎದುರಿಸಬೇಕಿದ್ದರೆ ನಮ್ಮ ಸಂಘಟನೆಯನ್ನು ಬಲಿಷ್ಠಗೊಳಿಸಬೇಕಿದೆ. ಸ್ಥಳೀಯವಾಗಿ ನೂರಾರು ಕಾರ್ಯಕರ್ತರನ್ನು ಸೈದ್ಧಾಂತಿಕವಾಗಿ ಸಂಘಟಿಸಬೇಕಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ ಅವರು, ಇಂದು ಕೆಂಬಾವುಟ ಈ ಪ್ರದೇಶದಲ್ಲಿ ಹಾರಿಸಿದ್ದೀರಿ. ಮುಂದೊಂದು ದಿನ ಪ್ರಬಲ ಚಳವಳಿಯಾಗಿ ಈ ಸಂಘ ಹೊರಹೊಮ್ಮಬೇಕು ಎಂದರು.

ಸಮ್ಮೇಳನವನ್ನು ಅಚ್ಚುಕಟ್ಟಾಗಿ ಯಶಸ್ವಿಯಾಗಿ ಸಂಘಟಿಸಿದ ಸ್ವಾಗತ ಸಮಿತಿಗೆ ಮತ್ತು ಸ್ವಯಂ ಸೇವಕರಿಗೆ ಅಭಿನಂದನೆ ಸಲ್ಲಿಸಲಾಯಿತು.


ಸಮ್ಮೇಳನದಲ್ಲಿ ಅಂಗೀಕರಿಸಿದ ನಿರ್ಣಯಗಳ ಪಟ್ಟಿ

1. ಕೊಡಗು ಜಿಲ್ಲೆ ದಿಡ್ಡಳ್ಳಿ ಆದಿವಾಸಿ ಜನರಿಗೆ ಹಕ್ಕುಪತ್ರ ನೀಡಲು ಒತ್ತಾಯಿಸಿ
2. ಹಿತ್ತಲು ಸಹಿತ ನಿವೇಶನ ಮತ್ತು ಮನೆಗಾಗಿ ಒತ್ತಾಯಿಸಿ ನಿರ್ಣಯ
3. ಸಾರ್ವತ್ರಿಕ ಪಡಿತರ ವ್ಯವಸ್ಥೆ ಬಲಪಡಿಸಲು ಒತ್ತಾಯಿಸಿ ನಿರ್ಣಯ
4. ಅರಣ್ಯಭೂಮಿ, ಸರ್ಕಾರಿ ಭೂಮಿ ಸಾಗುವಳಿದಾರರಿಗೆ ಹಕ್ಕುಪತ್ರ ನೀಡಲು ಒತ್ತಾಯಿಸಿ ನಿರ್ಣಯ
5. ದಲಿತರ ಮೇಲಿನ ದೌರ್ಜನ್ಯ ವಿರೋಧಿಸಿ ನಿರ್ಣಯ
6. ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ, ಅತ್ಯಾಚಾರ ವಿರೋಧಿಸಿ ನಿರ್ಣಯ
7. ಕೃಷಿ ಕೂಲಿಕಾರರಿಗೆ ಕೇರಳ ಮಾದರಿ ಕಲ್ಯಾಣ ಮಂಡಳಿ ರಚನೆಗಾಗಿ ಒತ್ತಾಯಿಸಿ ನಿರ್ಣಯ
8. ಉದ್ಯೋಗ ಖಾತ್ರಿ ಯೋಜನೆ ಸಮರ್ಪಕ ಜಾರಿಗಾಗಿ ಒತ್ತಾಯಿಸಿ ನಿರ್ಣಯ
9. ಕೃಷಿ ಕೂಲಿಕಾರರಿಗೆ ಉಚಿತ ವಿದ್ಯುತ್ ಕೊಡಲು ಒತ್ತಾಯಿಸಿ ನಿರ್ಣಯ
10. ನೀರಾ ನೀತಿ ರೂಪಿಸಲು ಒತ್ತಾಯಿಸಿ ನಿರ್ಣಯ
11. ಮಡೆಸ್ನಾನ–ಪಂಕ್ತಿಭೇದ ವಿರೋಧಿಸಿ ನಿರ್ಣಯ
12. ಉದ್ಯೋಗಖಾತ್ರಿ ಕೆಲಸಗಾರರಿಗೆ ಕಟ್ಟಡ ಕಾರ್ಮಿಕ ಸೌಲಭ್ಯಗಳು ಸಿಗುವಂತೆ ಒತ್ತಾಯಿಸಿ ನಿರ್ಣಯ

ಕೊಡಗು ಜಿಲ್ಲೆಯ ದಿಡ್ಡಳ್ಳಿ ಆದಿವಾಸಿ ಜನರಿಗೆ ಹಕ್ಕುಪತ್ರ ನೀಡಲು ಒತ್ತಾಯಿಸಿ ನಿರ್ಣಯ

ಕೊಡಗು ಜಿಲ್ಲೆಯ ದಿಡ್ಡಳ್ಳಿ ಪ್ರದೇಶದಲ್ಲಿ 577 ಆದಿವಾಸಿ ಕುಟುಂಬಗಳನ್ನು ಒಕ್ಕಲೆಬ್ಬಿಸಿದ ರಾಜ್ಯ ಸರಕಾರದ ಕ್ರಮವನ್ನು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ 6ನೇ ರಾಜ್ಯ ಸಮ್ಮೇಳನ ತೀವ್ರವಾಗಿ ಖಂಡಿಸುತ್ತದೆ. ಎಲ್ಲಾ 577 ಕುಟುಂಬಗಳಿಗೆ ನಿವೇಶನಗಳನ್ನು ನೀಡಿ ಹಕ್ಕುಪತ್ರ ಒದಗಿಸಬೇಕು ಹಾಗೂ ಮನೆ ನಿರ್ಮಿಸಿಕೊಡಬೇಕೆಂದು ರಾಜ್ಯ

ಪುಟ 10 ಕ್ಕೆ



ಅಧ್ಯಕ್ಷರು: ಕಾಂ॥. ನಿತ್ಯಾನಂದ ಸ್ವಾಮಿ



ಪ್ರಧಾನ ಕಾರ್ಯದರ್ಶಿ : ಚಂದ್ರಪ್ಪ ಹೊಸ್ಕೇರ

ನೂತನ ರಾಜ್ಯ ಸಮಿತಿ ಆಯ್ಕೆ :

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ 6ನೇ ರಾಜ್ಯ ಸಮ್ಮೇಳನದಲ್ಲಿ ಆಯ್ಕೆಗೊಂಡ 52 ರಾಜ್ಯ ಸಮಿತಿ ಸದಸ್ಯರಲ್ಲಿ 14 ಜನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ.

ಅಧ್ಯಕ್ಷರು	: ಕಾಂ॥. ನಿತ್ಯಾನಂದ ಸ್ವಾಮಿ
ಉಪಾಧ್ಯಕ್ಷರು	: ಜಿ.ಎನ್. ನಾಗರಾಜ್
	: ಎಂ. ಪುಟ್ಟಮಾದು
	: ಭೀಮಶೆಟ್ಟಿ ಯಂಪಳ್ಳಿ
	: ಕರಿಯಪ್ಪ ಅಚ್ಚುಳಿ
	: ಗಂಗಾಧರ ಸ್ವಾಮಿ
	: ವೆಂಕಟೇಶ ಕೋಣಿ
ಪ್ರಧಾನ ಕಾರ್ಯದರ್ಶಿ	: ಚಂದ್ರಪ್ಪ ಹೊಸ್ಕೇರ
ಸಹ ಕಾರ್ಯದರ್ಶಿ	: ಮಲ್ಲಮ್ಮ ಕೊಡ್ಲಿ
	: ದಾವಲ್ ಸಾಬ ನದಾಪ್
	: ಕೆ. ಬಸವರಾಜ್
	: ಎಂ. ಬಸವರಾಜ್
	: ಹನುಮೇಗೌಡ. ಕೆ
	: ಕೆ. ನಾಗರಾಜ್

‘ಸಮಾನ ಕೆಲಸಕ್ಕೆ ಸಮಾನ ವೇತನ’ಕ್ಕಾಗಿ ಗುತ್ತಿಗೆ ಕಾರ್ಮಿಕರ ಪ್ರತಿಭಟನೆ

ಸುಪ್ರೀಂ ಕೋರ್ಟ್ ತೀರ್ಪಿನಂತೆ ಗುತ್ತಿಗೆ, ಅರೆ ಗುತ್ತಿಗೆ, ಟ್ರೈನಿ, ಅಪ್ರೆಂಟಿಸ್, ಹಂಗಾಮಿ, ದಿನಗೂಲಿ ಮುಂತಾದ ಎಲ್ಲಾ ಕಾರ್ಮಿಕರಿಗೂ ‘ಸಮಾನ ಕೆಲಸಕ್ಕೆ ಸಮಾನ ವೇತನ’ ಬೇಡಿಕೆಯೊಂದಿಗೆ ಮತ್ತು ಗುತ್ತಿಗೆ ಕಾರ್ಮಿಕರ ಖಾಯಂ ಸ್ಥಾನಮಾನಕ್ಕೆ ಶಾಸನಕ್ಕೆ ಒತ್ತಾಯಿಸಿ ರಾಜ್ಯಾದ್ಯಂತ ಡಿಸೆಂಬರ್ 22ರಂದು ಪ್ರತಿಭಟನೆ ಧರಣಿ ನಡೆಸಿದರು.

ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ನ ಅಖಿಲ ಭಾರತ ಪ್ರತಿಭಟನೆಯ ಕರೆಯ ಭಾಗವಾಗಿ ರಾಜ್ಯದ ಹಲವು ಜಿಲ್ಲೆಗಳಲ್ಲಿ ಪ್ರತಿಭಟನೆ ನಡೆದಿದೆ.

ಬೆಂಗಳೂರಿನ ಕಾರ್ಮಿಕ ಭವನ ಮುಂಭಾಗ ನಡೆದ ಧರಣಿಯನ್ನು ಉದ್ದೇಶಿಸಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ॥ಮೀನಾಕ್ಷಿ ಸುಂದರಂ ರವರು ಮಾತನಾಡಿ “ಸರಕಾರ ಹಾಗೂ ಖಾಸಗಿ ಕಂಪೆನಿ ಹಾಗೂ ಸಂಸ್ಥೆಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರನ್ನು ಖಾಯಂಗೊಳಿಸಲು ಕಾಯ್ದೆ ರೂಪಿಸಬೇಕು.



ರಾಜ್ಯ ಕಾರ್ಮಿಕ ಇಲಾಖೆಯ ವಾರ್ಷಿಕ ವರದಿಯಂತೆ 2015ರ ಅಂತ್ಯದ ವೇಳೆದ 16193 ಹೆಚ್ಚಿನ ಗುತ್ತಿಗೆದಾರರು ಇದ್ದಾರೆ. 20ಕ್ಕೂ ಹೆಚ್ಚು ಗುತ್ತಿಗೆ ಕಾರ್ಮಿಕರನ್ನು ಒದಗಿಸುವ ಗುತ್ತಿಗೆದಾರರು ಮಾತ್ರ ಪರವಾನಗಿ ಪಡೆಯಬೇಕಿದೆ. 19ಕ್ಕೂ ಹಾಗೂ ಕಡಿಮೆ ಕಾಂರ್ಇಕರನ್ನು ಒದಗಿಸುವ ಗುತ್ತಿಗೆದಾರರ ಸಂಖ್ಯೆ ಇನ್ನೂ ಹಲವು ಪಟ್ಟು ಇದೆ. ರಾಜ್ಯದಲ್ಲಿ 3,23,860 ನೊಂದಾಯಿತ ಗುತ್ತಿಗೆ ಕಾರ್ಮಿಕರು ಇದ್ದಾರೆ. ಪರವಾನಗಿ ಇಲ್ಲದ ಗುತ್ತಿಗೆದಾರರ ಅಡಿ ಇದಕ್ಕಿಂತ ಹೆಚ್ಚು ಕಾರ್ಮಿಕರು ಇರುವ ಸಾಧ್ಯತೆಗಳಿವೆ.

ತಮಿಳುನಾಡು, ಅಸ್ಸಾಂ ರಾಜ್ಯಗಳಲ್ಲಿ ಗುತ್ತಿಗೆ ಕಾರ್ಮಿಕರನ್ನು ಖಾಯಂಗೊಳಿಸುವ ಕಾಯ್ದೆ ರೂಪಿಸಲಾಗಿದೆ. ಅದೇ ಮಾದರಿಯಲ್ಲಿ ಗುತ್ತಿಗೆ ಕಾರ್ಮಿಕರನ್ನು ಖಾಯಂಗೊಳಿಸಲು ಅನುಕೂಲವಾಗುವಂತೆ ಕಾರ್ಮಿಕ ಇಲಾಖೆ ಕರಡನ್ನು ತಯಾರಿಸಿದೆ. ಅದನ್ನು ಸಚಿವ ಸಂಪುಟದಲ್ಲಿ ಚರ್ಚಿಸಿ ಕಾಯ್ದೆ ರೂಪಿಸಬೇಕೆಂದು ಹೇಳಿದರು.

ಪ್ರತಿ ಕಾರ್ಮಿಕನಿಗೂ ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವಂತೆ ಸುಪ್ರೀಂ ಕೋರ್ಟ್ 26.10.2016ರಂದು ಮಹತ್ವದ ತೀರ್ಪು ನೀಡಿದೆ. ಈಗಾಗಲೇ ಹಲವು ಭಾರಿ ಇದೇ ರೀತಿಯ ತೀರ್ಪನ್ನು ನ್ಯಾಯಾಲಯಗಳು ನೀಡಿ ಹಲವು ವರ್ಷಗಳೇ ಕಳೆದಿವೆ. ಇಂದಿಗೂ ಸರಕಾರವಾಗಲಿ, ಕಂಪನಿಗಳ ಮಾಲಕರಾಗಲಿ ಈ ಬಗ್ಗೆ ಕಿಂಚಿತ್ತೂ ಚಿಂತಿಸಿಲ್ಲ. ಇದರಿಂದ ದೇಶಾದ್ಯಂತ ಕಾರ್ಮಿಕ ವರ್ಗವು ಹಲವು ಸಮಸ್ಯೆಗಳಿಂದ ಬಳಲುತ್ತಿದ್ದಾರೆ ಎಂದು ಅವರ ವಿಷಾಧಿಸಿದರು.

ಲಕ್ಷಾಂತರ ಮಂದಿ ಕಾರ್ಮಿಕರು ಅಪಾಯದ ಅಂಚಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಕಾರ್ಮಿಕರಿಗೆ ಅಗತ್ಯವಾಗಿ ಸಿಗಬೇಕಾದ ತುರ್ತು ಚಿಕಿತ್ಸೆಗಳು ಸಿಗುತ್ತಿಲ್ಲ. ಬಹುತೇಕ ಕಾರ್ಮಿಕರಿಗೆ ಆರೋಗ್ಯ ವಿಮೆ ಇಲ್ಲವಾಗಿದೆ. ಈ ಬಗ್ಗೆ ಸರಕಾರ ಗಂಭೀರವಾಗಿ ಚಿಂತಿಸಿ ಕಾರ್ಮಿಕರ ಹಕ್ಕುಗಳನ್ನು ಸಂರಕ್ಷಿಸುವಂತಹ ಕೆಲಸ ಮಾಡಬೇಕಾಗಿದೆ ಎಂದು ಅವರು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಸಿಐಟಿಯು ಕಾರ್ಯದರ್ಶಿ ಕೆ.ಎನ್. ಉಮೇಶ್, ಮಹಾಂತೇಶ್ ಕೆ., ಜಿಲ್ಲಾಧ್ಯಕ್ಷರಾದ ಕೆ.ಪ್ರಕಾಶ್, ಪ್ರಧಾನ ಕಾರ್ಯದರ್ಶಿ ಬಿ.ಎನ್. ಮಂಜುನಾಥ್, ಮತ್ತಿತರರು ಉಪಸ್ಥಿತರಿದ್ದರು.

ತುಮಕೂರಿನಲ್ಲಿ ಜಿಲ್ಲಾಧಿಕಾರಿ ಕಛೇರಿ ಎದುರು

ಪೌರಕಾರ್ಮಿಕರು, ಆಸ್ಪತ್ರೆ ಕಾರ್ಮಿಕರು, ಹಾಸ್ಟೇಲ್ ಕಾರ್ಮಿಕರು, ಬಿಎಸ್‌ಎನ್‌ಎಲ್ ಕಾರ್ಮಿಕರು, ವಿವಿಧ ಕೈಗಾರಿಕಾ ಕಾರ್ಮಿಕರು ಪ್ರತಿಭಟನಾ ಧರಣಿಯನ್ನು ನಡೆಸಿದರು.

ಪ್ರತಿಭಟನಾ ಧರಣಿಯನ್ನು ಉದ್ದೇಶಿಸಿ ಪೌರಕಾರ್ಮಿಕರ ಸಂಘದ ನಟರಾಜ್ ಮಾತನಾಡಿ ಖಾಯುಂ ಮಾಡುತ್ತೇವೆ ಎಂಬ ಆಸೆ ತೇ-ೀರಿ ಹೆಚ್ಚಿಸಿರುವ ಸಂಬಂಳವನ್ನು ಎರಡು-ಮೂರು ತಿಂಗಳಿಗೊಮ್ಮೆ ನೀಡುತ್ತಿದ್ದಾರೆ ಇದ-ರಿಂದ ಪೌರಕಾರ್ಮಿಕರು ಬದುಕು ಸಾಗಿಸುವುದು ದುಸ್ಥರವಾಗಿದೆ ಎಂದರು.

ಆಸ್ಪತ್ರೆ ಕಾರ್ಮಿಕರ ಸಂಘದ ರಂಗಮ್ಮ ಮಾತನಾಡಿ 15–18 ವರ್ಷಗಳಿಂದ ಕೆಲಸ ಮಾಡುತ್ತಿದ್ದು ಕಾನೂನು ಬದ್ದ ಸಂಬಂಳ ಖಾಯಂಮಾತಿ ಕೇಳಿದರೆ ಕೆಲಸದಿಂದ ತೆಗೆಯುವ ಕೆಲಸ ಮಾಡುತ್ತಿದ್ದಾರೆ ನಾವು ಬದುಕುವುದು ಬೇಡವೇ ಎಂದು ಪ್ರಶ್ನಿಸಿದರು.

ಕಾರ್ಮಿಕರ ಅಹವಾಲು ಕೇಳಲು ಜಂಟಿ ಸಭೆಗೆ ಆಗ್ರಹ:

ಮನವಿ ಸ್ವೀಕರಿಸಲು ಬಂದ ಅಪರ ಜಿಲ್ಲಾಧಿಕಾರಿಗಳಾದ ಶ್ರೀಮತಿ ಅನಿತಾಲಕ್ಷ್ಮೀರವರಿಗೆ ವಿವಿಧ ಕಾರ್ಮಿಕರು ತಮ್ಮ ಸಂಕಷ್ಟಗಳನ್ನು ತೋಡಿ-ಕೊಂಡರು. ಈ ಸಂದರ್ಭದಲ್ಲಿ ಪ್ರತಿಭಟನಾಕಾರರಿಗೂ ಹಾಗೂ ಅಪರ ಜಿಲ್ಲಾಧಿಖಾರಿಗಳ ನಡುವೆ ಮಾತಿಗೆ ಮಾತು ನಡೆಯಿತು. ಸರ್ಕಾರದ ವಿವಿಧ ಇಲಾಖೆಗಳ ನಿಗಮ ಮಂಡಳಿಗಳಲ್ಲಿರುವ, ಕೈಗಾರಿಕೆಗಳಲ್ಲಿರುವ ಗುತ್ತಿಗೆ ಕಾರ್ಮಿಕರ ಅಹವಾಲುಗಳನ್ನು ಚರ್ಚಿಸಲು ಕಾರ್ಮಿಕ ಪ್ರತಿನಿಧಿಗಳ ಹಾಗೂ ಇಲಾಖೆಯ ಮುಖ್ಯಸ್ಥರ ಜಂಟಿ ಸಭೆಯೊಂದನ್ನು ಕರೆಯುವಂತೆ ಪ್ರತಿಭನಟಾಕಾರರ ಆಗ್ರಹಿಸಿದರು.

ಇದಕ್ಕೆ ಒಪ್ಪಿಗೆ ಸೂಚಿಸಿದ ಅಪರ ಜಿಲ್ಲಾಧಿಕಾರಿಗಳು ಕಾರ್ಮಿಕ ಇಲಾಖೆಯ ಅಧಿಕಾರಿಗಳಿಗೆ ಈ ಜಂಟಿ ಸಭೆಯನ್ನು ವ್ಯವಸ್ಥೆಗೊಳಿಸುವಂತೆ ನಿರ್ದೇಶನ ನೀಡಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಸಿಐಟಿಯು ಜಿಲ್ಲಾಧ್ಯಕ್ಷ ಸೈಯದ್ ಮುಜೀಬ್, ಜಿಲ್ಲಾ ಕಾರ್ಯದರ್ಶಿ ಎನ್.ಕೆ.ಸುಬ್ರಮಣ್ಯ, ನೀರು ಸರಬರಾಜು ಕಾರ್ಮಿಕರ ಸಂಘದ ಮುಖಂಡ ಕಾಂತರಾಜು ಮಾತನಾಡಿದರು.

ಹಾಸನದಲ್ಲಿ ಬೃಹತ್ ಮೆರವಣಿಗೆ ಮೂಲಕ ತೆರಳಿಸಿದ ಪ್ರತಿಭಟನಾಕಾರರು ಜಿಲ್ಲಾಧಿಕಾರಿ ಕಛೇರಿ ಎದುರು ಧರಣಿ ನಡೆಸಿದರು. ಸಿಐಟಿಯು ರಾಜ್ಯ ಕಾರ್ಯದರ್ಶಿ ಧರ್ಮೇಶ್‌ರವರು ಮಾತನಾಡಿ “ರಾಜ್ಯದ ‘ನೂತನ ಕೈಗಾರಿಕಾ ನೀತಿ : 2014–2019’ ರಲ್ಲಿ 30 ಶೇಕಡಾ ಗುತ್ತಿಗೆ ಕಾರ್ಮಿಕರನ್ನು ಉತ್ಪಾಧನ ಕೆಲಸಗಳಲ್ಲಿ ತೊಡಗಿಸಲು ಅನುವುಗೊಳಿಸಿರುವ ಕಾರಣ. ಗುತ್ತಿಗೆ ಕಾರ್ಮಿಕರ (ಕ್ರಮೀಕರಣ ಮತ್ತು ನಿಷೇಧ) ಕಾಯ್ದೆ-1970ಕ್ಕೆ ವ್ಯತಿರಿಕ್ತವಾಗಿ ಖಾಯಂ ಮತ್ತು ನಿರಂತರ ಸ್ವರೂಪದ ಕೆಲಸಗಳಿಗೆ ಗುತ್ತಿಗೆ ಕಾರ್ಮಿಕರನ್ನು ನಿಯೋಜಿಸಲು ಮಾಲೀಕರಿಗೆ ಮುಕ್ತ ಅವಕಾಶ ಲಭಿಸಿದೆ.

ಕೇಂದ್ರ ಸರ್ಕಾರವು ‘ಅಪ್ರೆಂಟಿಸ್‌ಶಿಪ್ ಕಾಯ್ದೆಗೆ’ 2015ರಲ್ಲಿ ತಿದ್ದುಪಡಿ ತಂದಿರುವ ಕಾರಣ ಕಾರ್ಖಾನೆಯ ಒಟ್ಟು ಕಾರ್ಮಿಕರು 30 ಶೇಕಡ ಅಪ್ರೆಂಟಿಸ್ ಹೆಸರಿನ ಕಾರ್ಮಿಕರನ್ನು ನೇಮಿಸಿಕೊಳ್ಳಲು ಅವಕಾಶ ನೀಡಿದೆ. ಅಂತಹ ಕಾರ್ಮಿಕರು ಸಹ ಖಾಯಂ ಕಾರ್ಮಿಕರು ಮಾಡುವ ಕೆಲಸವನ್ನೇ ಮಾಡಿಸಲು ಮಾಲೀಕರು ಮುಂದಾಗಿದ್ದಾರೆ. ಈ ಪರಿಣಾಮವಾಗಿ ಇಂದು ಕಾರ್ಖಾನೆಗಳಲ್ಲಿ ಖಾಯಂ ಕಾರ್ಮಿಕರಿಗಿಂತ ಮೂರರಿಂದ ಹತ್ತು ಪಟ್ಟು ಗುತ್ತಿಗೆ ಕಾರ್ಮಿಕರು ಇದ್ದಾರೆ. ಸರ್ಕಾರಗಳು ತಂದಿರುವ ಕಾನೂನುಗಳು ಕಾರ್ಮಿಕರ ಪರವಾಗಿಲ್ಲ” ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಂಡ್ಯ, ಮೈಸೂರು, ವಿಜಯಪುರ, ಕಲಬುರಗಿ, ಚಿಕ್ಕಬಳ್ಳಾಪುರ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಬಳ್ಳಾರಿ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಮೆರವಣಿಗೆ ನಡೆಸಿ ಸರ್ಕಾರಿ ಕಛೇರಿಗಳ ಮುಂಭಾಗ ಪ್ರತಿಭಟನೆ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ದಿಡ್ಡಳ್ಳಿ ಹೋರಾಟದ ಹಿನ್ನೆಲೆ

ಆದಿವಾಸಿ ಅಧಿಕಾರ್ ಮಂಚದ ರಾಜ್ಯದ ಸಂಚಾಲಕ. ವೈ.ಕೆ..ಗಣೇಶ. ಡಿಸೆಂಬರ್ 16ರಂದು ಕೊಟ್ಟ ಹೇಳಿಕೆಯಲ್ಲಿ ದಿಡ್ಡಳ್ಳಿ ಹೋರಾಟದ ಹಿನ್ನೆಲೆಯನ್ನು ಹೀಗೆ ವಿವರಿಸಿದ್ದಾರೆ:

ಕೊಡಗಿನಲ್ಲಿ ಬುಡಕಟ್ಟು ಜನಾಂಗದವರು ಈ ಜಿಲ್ಲೆಯ ಮೂಲ ನಿವಾಸಿಗಳು. ಈ ಜಿಲ್ಲೆಯ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಸಂಪತ್ತಿನ ನೈಜ ವಾರಸುದಾರರು ಅವರು. ಆದರೆ ಇಂದು ಜಿಲ್ಲೆಯಲ್ಲಿ ಅವರೇ ಅತ್ಯಂತ ಹೆಚ್ಚು ಶೋಷಣೆಗೆ ಒಳಗಾಗಿರುವವರಾಗಿದ್ದಾರೆ. ಇಂದಿನ ಆಧುನಿಕ ಯುಗದಲ್ಲೂ ಅವರಿಗೆ ವಾಸಿಸಲು ಯೋಗ್ಯವಾದ ಮನೆಗಳಿಲ್ಲ, ತಮ್ಮದೇ ಭೂಮಿ ಇಲ್ಲ. ಮೂಲಭೂತ ಸೌಕರ್ಯ ಗಳಿಂದ ವಂಚಿತವಾದ ಹಾಡಿಗಳಲ್ಲಿ ಇಲ್ಲವೇ ಯಜಮಾನರುಗಳು ಕೊಡುವ ದೊಡ್ಡಿಗಳಲ್ಲಿ ಜೀವಿಸಬೇಕು.; ತೋಟಗಳಲ್ಲಿ ಕೆಲಸ ಮಾಡುವವರಿಗೆ ಕನಿಷ್ಠ ಸಂಬಳ ಸಿಗುತ್ತಿಲ್ಲ,, ದುಡಿಮೆಯ ಹೊರೆ ಮಾತ್ರ ಕಡಿಮೆ ಇಲ್ಲ. ಸರಕಾರದಿಂದ ಘೋಷಿಸಲ್ಪಡುವ ಯೋಜನೆಗಳು, ಸವಲತ್ತುಗಳು ಅವರನ್ನು ತಲುಪದೆ ಮಧ್ಯವರ್ತಿ ಗಳ ಪಾಲಾಗುತ್ತಿದೆ. ಅವರ ಹೆಸರಿನಲ್ಲಿ ರೇಶನ್ ಕಾರ್ಡ್ ಗಳನ್ನು ಮಾಡಿಸಿ ಯಜಮಾನರುಗಳು ತಮ್ಮ ಕೈಯಲ್ಲಿಟ್ಟುಕೊಂಡು ಅದ-ರಿಂದ ಆಹಾರ ಸಂಗ್ರಹಿಸಿ ಅದನ್ನು ಅವರಿಗೆ ಕೊಟ್ಟು ಅದಕ್ಕೆ ಹಣ ವಸೂಲಿ ಮಾಡಲಾಗುತ್ತಿದೆ ವುದು ಅವರ ಮೇಳಾಗುತ್ತಿರುವ ಶೋಷಣೆಯ ಆಳಕ್ಕೆ ಸಾಕ್ಷಿ.

’ ನಾವೂ ಮನುಷ್ಯರು.ಈ ದೇಶದ ಇತರೆಲ್ಲರಂತೆ ನಮಗೂ ಬದುಕಲು, ಬೆಳೆಯಲು ಹಕ್ಕು ಇದೆ. ನಾವೂ ಇತರರಂತೆ ಬೆಳೆದು ಬಾಳಬೇಕು’ ಎನ್ನುವ ಆಶೆ ಅವರಲ್ಲಿಯೂ ಜಾಗೃತಿಯಾಗಿದೆ, ಅವರು ಎಚ್ಚರಾಗುತ್ತಿದ್ದಾರೆ. ಆದರೆ ಸರಕಾರಗಳು ಅವರ ಬಗ್ಗೆ ಅತ್ಯಂತ ನಿರ್ಲಕ್ಷ್ಯ ತೋರುತ್ತಿವೆ. ಅವರ ಅಭ್ಯುದಯ ದ ಬಗ್ಗೆ ಹಗಲಿರುಳೂ ವಾಚಾಮಗೋಚರವಾಗಿ ಗಳಹುವ ಸರಕಾರಗಳು ದೊಡ್ಡ ಪ್ರಮಾಣದಲ್ಲಿ ಅವರನ್ನು ವಂಚಿಸುತ್ತಿವೆ. ಪರಿಣಾಮವಾಗಿಯೇ ದಿಡ್ಡಳ್ಳಿ ಯಂತಹಾ ಘಟನೆಗಳು ನಡೆಯುತ್ತವೆ.

ದಿಡ್ಡಳ್ಳಿ ಯಲ್ಲಿ ಅರಣ್ಯ ಪ್ರದೇಶ ದಿಂದ ಹೊರ ಹಾಕಲ್ಪಟ್ಟ ಗಿರಿಜನರಿಗೆ ಅನುಕಂಪ ತೋರುವ ನಾಟಕವನ್ನು ಶಾಸಕ ಕೆ.ಜಿ.ಬೋಪಯ್ಯನವರನ್ನೊಳಗೊಂಡು ಭಾ.ಜ.ಪ.ಮಂದಿ ಈಗ ಮಾಡುತ್ತಿದ್ದಾರೆ. ಆದರೆ ಇಂದಿನ ಸ್ತಿತಿಗೆ ಅವರ ಪಕ್ಷ ದ ಪಂಚಾಯತ್ ಸದಸ್ಯ ರೇ ಕಾರಣರಾಗಿದ್ದಾರೆ ಎಂದು ಅವರು ಅರ್ಥ ಮಾಡಿಕೊಳ್ಳಬೇಕು.

ದಿಡ್ಡಳ್ಳಿ ಯಲ್ಲಿ ಹೊರದೂಡಲ್ಪಟ್ಟಿರುವ ಅಮಾಯಕರು ಜಾಗವನ್ನೂ, ಹಣವನ್ನೂ ಕಳೆದುಕೊಂಡು ಅತಂತ್ರರಾಗಿದ್ದಾರೆ. ಜಿಲ್ಲಾಡಳಿತ ತಕ್ಷಣವೇ ಅವರಿಗೆ ಸೂಕ್ತ ವ್ಯವಸ್ಥೆ ಮಾಡಿಕೊಡಬೇಕು.

ಅಲ್ಲದೆ, ಜಿಲ್ಲೆಯಲ್ಲಿರುವ ಪೈಸಾರಿ ಜಾಗಗಳನ್ನು ತಕ್ಷಣವೇ ಗುರುತಿಸಿ ಬುಡಕಟ್ಟು ಜನರನ್ನೊಳಗೊಂಡು ಎಲ್ಲಾ ಭೂರಹಿತರಿಗೆ ಹಂಚಿಕೊಡಬೇಕು,; ಟಾಟಾ, ಬಿ.ಬಿ.ಟಿ.ಸಿ.ಯನ್ನೊಳಗೊಂಡು ಆಗರ್ಭ ಶ್ರೀ ಮಂತರು ಕೈವಶ ಮಾಡಿಕೊಂಮಾಡಿಕೊಂಡಿರುವ ಪೈಸಾರಿ ಜಾಗಗಳನ್ನು ಅವರಿಂದ ಕಿತ್ತುಕೊಂಡು ಭೂರಹಿತರಾದ ನಿವೃತ್ತ ಸೈನಿಕರನ್ನೊಳಗೊಂಡು ಎಲ್ಲಾ ಆರ್ಥಿಕವಾಗಿ ದುರ್ಬಲರಿಗೆ ತಕ್ಷಣವೇ ಹಂಚಬೇಕೆಂದು ಕರ್ನಾಟಕ ಆದಿವಾಸಿ ಬುಡಕಟ್ಟು ಜನರ ಹಕ್ಕುಗಳ ಸಮನ್ವಯ ಸಮಿತಿಯ ಕೊಡಗು ಜಿಲ್ಲಾ ಘಟಕ ಒತ್ತಾಯಿಸುತ್ತದೆ.


ಕೂಲಿಕಾರರ ಸಂಘದ 6ನೇ ರಾಜ್ಯ ಸಮ್ಮೇಳನ...... ಪುಟ 9 ರಿಂದ

ಸಮ್ಮೇಳನವು ಒತ್ತಾಯಿಸುತ್ತದೆ.

ಡಿಸೆಂಬರ್ 7ರ ಬೆಳಗಿನ ಜಾವ 4 ಗಂಟೆಗೆ ಜೆಸಿಬಿ ಯಂತ್ರಗಳು ಹಾಗೂ ಪೊಲೀಸ್ ಇಲಾಖೆಯ ಬಲದೊಂದಿಗೆ ಬಂದ ಅರಣ್ಯ ಅಧಿಕಾರಿಗಳು, ಕುಟುಂಬ ಸದಸ್ಯರ ಪ್ರತಿಭಟನೆಯ ನಂತರವೂ ಅಮಾನುಷವಾಗಿ ಗುಡಿಸಲುಗಳನ್ನು ಧ್ವಂಸಗೊಳಿಸಿರುತ್ತಾರೆ. ಕಾಡಿನಲ್ಲಿ ಹುಟ್ಟಿ ಬೆಳೆದ ಆದಿವಾಸಿಗಳನ್ನು ಕಾಡು ಸಂರಕ್ಷಣೆ ಹೆಸರಿನಲ್ಲಿ ಒಕ್ಕಲೆಬ್ಬಿಸಿರುವುದು ಖಂಡನೀಯ.


ಒಕ್ಕಲೆಬ್ಬಿಸಿದ ನಂತರ 15 ದಿನಗಳಿಂದ ಆದಿವಾಸಿ ಕುಟುಂಬಗಳು ಧರಣಿ ನಡೆಸುತ್ತಿವೆ. ಮಕ್ಕಳು ಶಾಲೆಗೆ ಹೋಗದಂತೆ ಆಗಿದೆ. ಶುದ್ದ ಕುಡಿಯುವ ನೀರು ಕೂಡಾ ಸಿಗುತ್ತಿಲ್ಲ. ಇದರಿಂದ ಸುಮಾರು 40 ಮಕ್ಕಳು ಅಸ್ವಸ್ಥರಾಗಿದ್ದರೆಂದು ವರದಿಯಾಗಿದೆ. ಪ್ರತಿಭಟನೆ ನಡೆಸುತ್ತಿರುವುದರಿಂದ ಜನರು ಕೂಲಿ ಕೆಲಸಕ್ಕೆ ಹೋಗದಂತಾಗಿದೆ.

ಈಗ ಕಾಫಿ ಕುಯ್ಲು ಸಂದರ್ಭವಾಗಿದ್ದು ಉತ್ತಮ ದುಡಿಮೆಯ ಸಮಯವಾಗಿದೆ. ಆದ್ದ-ರಿಂದ ಕೊಡಗು ಜಿಲ್ಲಾಡಳಿತ ಮಧ್ಯ ಪ್ರವೇಶಿಸಿ ಆದಿವಾಸಿ ಮುಖಂಡರೊಂದಿಗೆ ಮಾತುಕತೆ ನಡೆಸಿ ಸ್ಥಳದಲ್ಲಿಯೇ ಮನೆ ನಿರ್ಮಿಸಿ ಕೊಡಬೇಕು ಹಾಗೂ ಕೂಡಲೇ ಹಕ್ಕುಪತ್ರ ನೀಡಬೇಕು ಎಂದು ಸಮ್ಮೇಳನವು ಒತ್ತಾಯಿಸುತ್ತದೆ. ಸಮರ್ಪಕ ಕೂಲಿ ಸಿಗುವವರೆಗೆ ಗಂಜಿ ಕೇಂದ್ರವನ್ನು ರಚಿಸಬೇಕು ಹಾಗೂ ವೈದ್ಯಕೀಯ ಸವಲತ್ತು ಒದಗಿಸಬೇಕೆಂದು ಸಮ್ಮೇಳನವು ಆಗ್ರಹಿಸುತ್ತದೆ.



ನಿವೇಶನ ರಹಿತರ ಕಾರ್ಯಾಗಾರ

ವಸತಿ ನಿವೇಶನದ ಹಕ್ಕಿಗಾಗಿ, ಸಂವಿಧಾನದ ಹಕ್ಕುಗಳ ಉಳುವಿಗಾಗಿ, ವಸತಿ ನಿವೇಶನ ರಹಿತರ ಹೋರಾಟ ಸಮಿತಿ ನೇತೃತ್ವದಲ್ಲಿ ಜಿಲ್ಲಾ ಮಟ್ಟದ ಕಾರ್ಯಾಗಾರವನ್ನು ಡಿಸೆಂಬರ್ 18ರಂದು ಏರ್ಪಡಿಸಲಾಗಿತು. ಹಾಸನದಲ್ಲಿ ನಡೆದ ಕಾರ್ಯಾಗಾರವನ್ನು ಉದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾಂ॥ಜಿ.ವಿ.ಶ್ರೀರಾಮರೆಡ್ಡಿರವರು ಮಾತನಾಡಿದರು. ಕಾರ್ಯಕ್ರಮದಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕಾಂ॥ಧರ್ಮೇಶ್ ಅಧ್ಯಕ್ಷತೆ ವಹಿಸಿದ್ದರು. ಕಾಂ॥ಹೆಚ್.ಆರ್.ನವೀನ್‌ಕುಮಾರ್‌ರವರು ಮುಂದಿನ ಹೋರಾಟಗಳ ರೂಪುರೇಷೆಗಳನ್ನು ಮಂಡಿಸಿದರು. ರಾಘವೇಂದ್ರ, ಪೃಥ್ವಿ, ಮಂಜುನಾಥ್, ಪುಷ್ಪ ಹರೀಶ್ ಮತ್ತು ನಿವೇಶನರಹಿತರು ನೂರಾರು ಜನತೆ ಭಾಗವಹಿಸಿದ್ದರು.



ಬೊಳುವಾರು ಅವರಿಗೆ ಅಭಿನಂದನೆಗಳು !

ಬೊಳುವಾರು ಮಹಮ್ಮದ್ ಕುಂಞ್ ಅವರಿಗೆ 2016 ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಡಿ. 21ರಂದು ಕೇಂದ್ರ ಸಾಹಿತ್ಯ ಅಕಾಡೆಮಿ ಬಿಡುಗಡೆ ಮಾಡಿರುವ ಪತ್ರಿಕಾ ಹೇಳಿಕೆಯಲ್ಲಿ ಬೊಳುವಾರು ಮಹಮ್ಮದ್ ಕುಂಞ್ ಅವರ 'ಸ್ವಾತಂತ್ರ್ಯದ ಓಟ' ಕಾದಂಬರಿಗೆ ಈ ಪ್ರಶಸ್ತಿ ನೀಡಲಾಗಿದೆ.

ಒಂದು ಲಕ್ಷ ರೂ ನಗದು ಮತ್ತು ಪ್ರಶಸ್ತಿ ಫಲಕ ಹೊಂದಿರುವ ಅಕಾಡೆಮಿ ಪ್ರಶಸ್ತಿಯನ್ನು 2017 ಫೆಬ್ರವರಿಯಲ್ಲಿ ಪ್ರದಾನ ಮಾಡಲಾಗುತ್ತದೆ.

ಬೊಳುವಾರು ಸಮುದಾಯ ಮತ್ತು ಬಂಡಾಯ ಚಳುವಳಿಗಳ ಭಾಗವಾಗಿದ್ದು, ಸಮುದಾಯದ ರಾಜ್ಯಾಧ್ಯಕ್ಷರು ಆಗಿದ್ದರು. 'ಸ್ವಾತಂತ್ರ್ಯದ ಓಟ' ಕಾದಂಬರಿ ಆಧಾರಿತ ನಾಟಕವನ್ನು ಸಮುದಾಯ ಪ್ರದರ್ಶಿಸಿತ್ತು. ವೃತ್ತಿಯಲ್ಲಿ ಬ್ಯಾಂಕ್ ಅಧಿಕಾರಿಯಾಗಿದ್ದ, ಪ್ರವೃತ್ತಿಯಲ್ಲಿ ಲೇಖಕರಾಗಿದ್ದ ಅವರು ಎಡ-ಪ್ರಜಾಸತ್ತಾತ್ಮಕ ಚಳುವಳಿಯಲ್ಲಿ ಭಾಗವಹಿಸಿದ್ದು ಸದಾ ಅದರ ಬೆಂಬಲಿಗರಾಗಿದ್ದಾರೆ. ಬೊಳುವಾರು ಅವರಿಗೆ 'ಜನಶಕ್ತಿ ಬಳಗದ ಪರವಾಗಿ ತುಂಬು ಹೃದಯದ ಅಭಿನಂದನೆಗಳು.

ಈ ಸಂದರ್ಭದಲ್ಲಿ ಅವರ ಕಿರು ಪರಿಚಯ, ಪ್ರಶಸ್ತಿ ವಿಜೇತ ಸಾವಿರ ಪುಟಗಳ 'ಸ್ವಾತಂತ್ರ್ಯದ ಓಟ' ಮಹಾಕಾದಂಬರಿಗೆ ಪ್ರೊ. ಎಸ್.ಜಿ. ಸಿದ್ಧರಾಮಯ್ಯ ಬರೆದ ಮುನ್ನುಡಿಯ ಆಯ್ದ ಭಾಗಗಳು ಮತ್ತು ಕಾದಂಬರಿಕಾರರ ಮೊದಲ ಮಾತು.

ಕಿರು ಪರಿಚಯ

ಬೊಳುವಾರು ಮಹಮದ್ ಕುಂಞ್ ಇವರು ಬೆಂಗಳೂರಿನಲ್ಲಿರುವ ಖ್ಯಾತ ಲೇಖಕರು. ಕನ್ನಡ ಗದ್ಯ ಸಾಹಿತ್ಯಕ್ಕೆ ಮುಸ್ಲಿಂ ಬದುಕನ್ನು ಮೊತ್ತ ಮೊದಲು ಪರಿಚಯಿಸಿದ (1973) ಇವರು ಕನ್ನಡ ಸಾಹಿತ್ಯದ್ದಲ್ಲಿ ಮುಸ್ಲಿಂ ಸಂವೇದನೆ ಎಂಬ ಚರ್ಚೆಗೆ ನಾಂದಿ ಹಾಡಿದರು. ಭೂಮಿಯ ಮೇಲೆ ಒಡೆತನ ಮತ್ತು ಅಧಿಕಾರಕ್ಕಾಗಿ ಕಣ್ಣು ಕಿವಿಗಳನಷ್ಟೇ ಪ್ರಮಾಣವಾಗಿರಿಸಿಕೊಂಡು ನಿನ್ನ ದಿವ್ಯವಾಣಿಯನ್ನು ಅವಿವೇಕದಿಂದ ವಿಚಾರರಹಿತವಾಗಿ ಉದ್ಧರಿಸುವವರನ್ನು ನರಕದ ಕೆಂಡದ ರಾಶಿಯ ಮೇಲೆ ನಿಲಿಸು' ಎಂಬ ಹಕ್ಕೊತ್ತಾಯದ ಮೂಲಕ ಕನ್ನಡ ಕಥಾಲೋಕಕ್ಕೆ ಅಡಿಯಿತ್ತಿದ್ದ ಇವರ ಇನ್ನೂರಕ್ಕೂ ಮಿಕ್ಕಿದ ಕತೆಗಳು ಕನ್ನಡದ ವಿವಿಧ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿವೆ. ಭಾರತದ ಬಹುತೇಕ ಎಲ್ಲ ಭಾಷೆಗಳಿಗೆ ಇವರ ಕತೆಗಳು ಅನುವಾದಗೊಂಡಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ 1997ರಲ್ಲಿ ಗೌರವ ಪ್ರಶಸ್ತಿಗೆ ಬಾಜನರಾಗಿದ್ದ ಇವರಿಗೆ,ಆ ಮೊದಲೇ ಸಾಹಿತ್ಯ ಅಕಾಡೆಮಿಯಿಂದ ಎರಡು ಬಾರಿ ಪುಸ್ತಕ ಬಹುಮಾನ ಲಭಿಸಿತ್ತು (1983 ಮತ್ತು- 1992). 1983 ರಲ್ಲಿ ಕಲ್ಕತ್ತಾದ ಭಾಷಾ ಸಂಸ್ಥಾನ ದಿಂದ ಪ್ರಶಸ್ತಿ ಪಡೆದಿದ್ದ ಇವರಿಗೆ, 1991 ರಲ್ಲಿ ಆರ್ಯಭಟ, 1992 ರಲ್ಲಿ ಪರಶುರಾಮ, 1994 ರಲ್ಲಿ ದೆಹಲಿಯ ಕಥಾ ಪ್ರಶಸ್ತಿ, 2010 ರಲ್ಲಿ ಕೌಳವ ಪ್ರಶಸ್ತಿಗಳೂ ಲಭಿಸಿದ್ದವು. ಅದಲ್ಲದೆ 2001 ಮತ್ತು 2002 ಹೀಗೆ ಎರಡು ಬಾರಿ ಇವರ ಸಿನೆಮಾ(ಮುನ್ನುಡಿ ಹಾಗೂ ಅತಿಥಿ)ಗಳಿಗೆ ರಾಷ್ಟ್ರ ಪ್ರಶಸ್ತಿಯೂ ದಕ್ಕಿತ್ತು. ಇವರು ಸಂಪಾದಿಸಿದ ತಟ್ಟು ಚಪ್ಪಾಳೆ ಪುಟ್ಟ ಮಗು- ಎಂಬ ಮಕ್ಕಳ ಪದ್ಯಗಳ ಸಂಕಲನದಿಂದಾಗಿ ಇವರು ಕನ್ನಡ ಮಕ್ಕಳ ಸಾಹಿತ್ಯದಲ್ಲೂ ಗಟ್ಟಿ ಜಾಗ ಪಡೆದಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸಿದ ಇವರ ಪಾಪು ಗಾಂಧಿ ಗಾಂಧಿ ಬಾಪು ಆದ ಕತೆ (ಇದು ಪ್ರಕಟವಾದ ಎರಡು ವರ್ಷಗಳಲ್ಲಿ ನಾಲ್ಕು ಮುದ್ರಣ ಕಂಡಿದೆ) ಕನ್ನಡದ ಮಕ್ಕಳಿಗೆ ಮಹಾತ್ಮ ಗಾಂಧಿಯನ್ನು ಹೊಸದಾಗಿ ಪರಿಚಯಿಸಿದೆ.ಈ ಕೃತಿ 2010 ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗಳಿಸಿದೆ.

ಕೊನೆಯ ಸುತ್ತು

ಸುಮಾರು ನಾಲ್ಕು ದಶಕಗಳ ಕೆಳಗೆ, ಬರೆಯಲು ಆರಂಭಿಸಿದಾಗ ನನ್ನೆದುರು ಹಲವು 'ಲೋಕ'ಗಳಿದ್ದವು; ಅದ್ದರಿಂದಲೇ, ನನ್ನ ಕಥಾ ಪಾತ್ರಗಳ ಬದುಕಿಗಾಗಿ 'ಮುತ್ತುಪ್ಪಾಡಿ' ಎಂಬ ನನ್ನದೇ ಆದ 'ಲೋಕ'ವೊಂದನ್ನು ಕಟ್ಟಿಕೊಂಡಿದ್ದೆ. ಮುತ್ತುಪ್ಪಾಡಿಯ ತುಂಬ ಮನುಷ್ಯರನ್ನು, ಅವರಿಗೆ ನಂಬಲೆಂದು ದೇವರುಗಳನ್ನು, ಪೂಜಿಸಲು ಮಂದಿರಗಳನ್ನು, ಪ್ರಾರ್ಥಿಸಲು ಮಸೀದಿಗಳನ್ನು, ಆರಾಧಿಸಲು ಚರ್ಚುಗಳನ್ನು, ಓದಲು ಶಾಲೆಗಳನ್ನು, ಆಡಲು ಬಯಲುಗಳನ್ನು, ಕವಾಯಿತಿಗೆ ಮೈದಾನಗಳನ್ನು ಆಳಲು ಪೊಲೀಸರನ್ನು, ವಂದಿಸಲು ಧ್ವಜಗಳನ್ನು, ಈಜಲು ಹೊಳೆಗಳನ್ನು, ಹಾರಲು ಕೆರೆಗಳನ್ನು, ಮಲಗಲು ಆಸ್ಪತ್ರೆಗಳನ್ನು, ಸುಡಲು ಸ್ಮಶಾನಗಳನ್ನು, ಹೂಳಲು ಕಬರಸ್ತಾನಗಳನ್ನು ಹೀಗೆ, ನಾಗರಿಕ ಜೀವನಕ್ಕೆ ಏನೇನು ಬೇಕೋ ಅವೆಲ್ಲವನ್ನೂ ಒದಗಿಸಿದ್ದೆ. ಆನಂತರ; ಮುತ್ತುಪಾಡಿಯ ಮನುಷ್ಯರಿಗೆ ಅವರಿಗಿಷ್ಟಬಂದಂತೆ ಬದುಕುವ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟು ಅವರದೇ ಬದುಕಿನ ಕತೆಗಳನ್ನು ಒಂದೊಂದಾಗಿ ಬರೆದಿದ್ದೆ; ಇನ್ನು ಸಾಕು. ಅಂಕೆ ಸಂಖ್ಯೆಗಳ ಅಧಾರದಲ್ಲಿ ಇದು ನನ್ನ ಎರಡನೆಯ ಕಾದಂಬರಿ; ಇದುವರೆಗೆ ನಾನು ಬರೆದ ಮತ್ತು ಬರೆಯದೆ ಉಳಿದಿದ್ದ ಮುತ್ತುಪ್ಪಾಡಿಯ ಮನುಷ್ಯರ 'ಸ್ವಾತಂತ್ರ್ಯದ ಓಟಗಳ' ಕೊನೆಯ ಸುತ್ತು.

-ಬೊಳುವಾರು, ಜನವರಿ 30, 2012

ಭಾರತದ ಬದುಕಿನ ಮಹಾಯಾನ

'ಬೊಳುವಾರು' ನಮ್ಮ ಕಾಲದ ಒಂದು ಮಹಾ ಕಥನ ಪ್ರತಿಭೆ. ಆದರೆ ಅವರ ಕಥನ ಕೇವಲ ಕಥೆ ಹೇಳುವುದಕ್ಕೆ ಮಾತ್ರ ಮೀಸಲಾದುದಲ್ಲ; ಧರ್ಮನಿಷ್ಠ ನೆಲೆಯಲ್ಲಿ ಮನುಷ್ಯ ಸಂಬಂಧಗಳನ್ನು ಹುಡುಕುವ, ಬಹುತ್ವದ ಭಾರತೀಯ ಸಮಾಜದ ಹೊಸ ಕನಸುಗಳನ್ನು, ಆಶಯಗಳನ್ನು ಮನಗಾಣಿಸುವ ನಿತ್ಯ ಶೋಧನೆ. 'ಒಂದು ತುಂಡು ಗೋಡೆ'ಯಂತಹ ಕಥನದ ಮೂಲಕ ನಮ್ಮ ಸಮಕಾಲೀನ ಸಂದರ್ಭದ ಧಾರ್ಮಿಕ, ರಾಜಕೀಯ ಸಂಘರ್ಷಗಳಿಗೆ ಕನ್ನಡಿ ಹಿಡಿದ ಈ ಕಥೆಗಾರ, ಇದೀಗ 'ಸ್ವಾತಂತ್ರ್ಯದ ಓಟ' ಕುರಿತು ಭಾರತದ ಬದುಕಿನ ಮಹಾಯಾನವನ್ನು, ತಮ್ಮ ಮಹಾತ್ವಾಕಾಂಕ್ಷೆಯ ಕಾದಂಬರಿ 'ಸ್ವಾತಂತ್ರ್ಯದ ಓಟ'ದ ಸಾವಿರದ ಪುಟಗಳಲ್ಲಿ ನಿರೀಕ್ಷಿಸಿದ್ದಾರೆ.

ಸಿಖ್ ಹೆಣ್ಣುಮಕ್ಕಳಿಬ್ಬರಿಗೆ ಸಹಾಯ ಮಾಡಲೆಂದು ಪಾಕಿಸ್ತಾನದ ಗಡಿ ದಾಟಿ-ಭಾರತಕ್ಕೆ ಬಂದ ಮುಸ್ಲಿಮ್ ಹುಡುಗನೊಬ್ಬ, ತನ್ನ 'ಮಾತೃಭೂಮಿ'ಗೆ ಹಿಂತಿರುಗಿ ಹೋಗಲಾರದ ಇಕ್ಕಟ್ಟಿಗೆ ಸಿಕ್ಕಿಕೊಂಡು ಭಾರತದಲ್ಲೇ ಉಳಿದು, ಐವತ್ತು ವರ್ಷಗಳ ಕಾಲದಲ್ಲಿ ಅನುಭವಿಸುವ ಸಂತೋಷ, ಸಂಕಟಗಳ ಸಂಕಥನ ಈ ಕಾದಂಬರಿ. ಇಡೀ ಕಾದಂಬರಿಯ ಬೆಳವಣಿಗೆಯಲ್ಲಿ ಚಾಂದ್ ಅಲೀಯ ಪಾತ್ರ ಮಹತ್ವದ್ದಾಗಿದ್ದು ಘಟಿಸುತ್ತಿರುವ ಎಲ್ಲಾ ಘಟನೆಗಳಿಗೂ ಸಾಕ್ಷಿಪ್ರಜ್ಞೆಯಂತಿದ್ದಾನೆ. 'ಸ್ವಾತಂತ್ರ್ಯದ ಓಟ' ಚಾಂದ್ ಅಲೀ ಒಬ್ಬನ ಓಟವಲ್ಲ. ಅವನ ಭಯ ನರಳುವಿಕೆ ಆತಂಕ ಈ ಓಟದ ಅಂತರ್ದ್ರವ್ಯದಲ್ಲಿನ ದ್ರವ್ಯವಾಗಿದೆ. ಅವನ ಮಾತೃಭೂಮಿಯ ನಿಗೂಢತೆ, ಹುಟ್ಟಿನ ಮೂಲಕ ಬಗ್ಗೆ ಬಾಯಿಬಿಡಲಾಗದ ಮೌನ, ಅವನಲ್ಲಿ ಬದುಕಿನುದ್ದಕ್ಕೂ ಭೂತವಾಗಿ ಬೆಳೆದ ಅಭದ್ರತೆಯ ಪರಿಣಾಮವಾಗಿದೆ. ಇಲ್ಲಿದ್ದೂ ಇಲ್ಲಿಯವನಾಗದ, ಅಲ್ಲಿಗೆ ಹೋಗಲಾಗದ ಅತಂತ್ರ ಸ್ಥಿತಿಯನ್ನು ಸಾರುತ್ತಿದೆ. ಅವನ ಭಯವೆಂಬುದು ಪೀಳಿಗೆಯ ಭಯವಾಗಿ ಅವನ ಮಕ್ಕಳಲ್ಲಿ ವಿಸ್ತರಿಸಿಕೊಂಡಿದೆ, ಅವರಿಸಿಕೊಂಡಿದೆ. ಇಂತಹ ಸನ್ನಿವೇಶಗಳನ್ನು ಬರೆಯುವಾಗ ಬೊಳುವಾರರ ನಿರೀಕ್ಷಣೆಯ, ಮಾನವೀಯ ಆರ್ದ್ರತೆಯ ಶೋಧದ ಪಾತಳಿಯನ್ನು ಮುಟ್ಟುತ್ತದೆ.

'ಸ್ವಾತಂತ್ರ್ಯದ ಓಟ' ಕೇವಲ ಕತೆ ಹೇಳುವ ಆಸೆಯಿಂದ ಬರೆದ ಮತ್ತೊಂದು ಕಾದಂಬರಿಯಾಗಿ ಕಾಣಿಸುವುದಿಲ್ಲ ಅಥವಾ ಚರಿತ್ರೆಯಲ್ಲಿ ಸಂಭವಿಸಿವೆ ಎಂದು ಹೇಳಲಾದ ಘಟನೆಗಳಲ್ಲಿ ತಮ್ಮ ವಾದಕ್ಕನುಕೂಲವಾಗುವುದನ್ನು ಮಾತ್ರ ಹೆಕ್ಕಿ ಹೆಕ್ಕಿ ಹಾಕುವ ಪ್ರಯತ್ನವೂ ಆಗಿ ಗೋಚರಿಸುವುದಿಲ್ಲ. ಇದರಲ್ಲಿ ಚಿತ್ರಿತವಾಗಿರುವ ಯಾವ ಪಾತ್ರಗಳೂ ಓದುಗನನ್ನು ರೊಚ್ಚಿಗೇಳಿಸುವುದಿಲ್ಲ. ಬದಲಿಗೆ, ಬೊಳುವಾರರ ಕಲ್ಯಾಣಗ್ರಾಮ 'ಮುತ್ತುಪ್ಪಾಡಿ'ಯ ಮನುಷ್ಯರ ಪರಮ ಔದಾರ್ಯದ ವರ್ತನೆಗಳು ಓದುಗನನ್ನು ಬೆಚ್ಚಿ ಬೀಳಿಸುತ್ತದೆ; ಬೆಚ್ಚಗೆ ಕಾಡುತ್ತದೆ. 'ಮುತ್ತುಪ್ಪಾಡಿ' ಬೇರೆ ಊರುಗಳಿಗಿಂತ ಭಿನ್ನವೂ ಮಾದರಿಯದೂ ಆದ ಭಾವದ ಬಗೆಯಲ್ಲಿ ಬದುಕು ನಡೆಸಿದೆ. ಇಲ್ಲೂ ಹೆಣ್ಣಿನ ಅಪಹರಣ ನಡೆದಿದೆ. ಯುವಕರ ಬಿಸಿರಕ್ತ ತಾಳ್ಮೆ ತಪ್ಪಿ ವರ್ತಿಸಿದ ಘಟನೆಗಳೂ ನಡೆದಿವೆ. ಆದರೆ ಆಗ ಊರನ್ನೂ ಮುನ್ನಡೆಸುವ ಮುತ್ಸದ್ದಿಗಳ ದಂಡೇ ಮುಂದಾಳತ್ವ ವಹಿಸಿ ಮುತ್ತುಪಾಡಿಯ ಬದುಕಿನಲ್ಲಿ ಮಾನವೀಯ ಮೌಲ್ಯಗಳನ್ನು ಸಂರಕ್ಷಿಸುತ್ತಾರೆ. ಸ್ವಾತಂತ್ರ್ಯಾನಂತರದ ಭಾರತದ ಬದುಕಿನಲ್ಲಿ ಈಗಲು ಹಿಂದೂಮುಸ್ಲಿಂ ಎಂಬ ದ್ವೈತ ನಿಲುವಿನಲ್ಲಿ ರಾಜಕಾರಣ ಮಾಡುವ ರಾಜಕೀಯ ಮುತ್ಸದ್ದಿಗಳು ಮನೋನಿರೀಕ್ಷೆಗೆ ಒಡ್ಡಿಕೊಳ್ಳಬೇಕಾದ ಒಳನೋಟಗಳನ್ನು ನೀಡುವ ಬರವಣಿಗೆಯಿದು.

ವಾಘಾ ಗಡಿಯಲ್ಲಿ ಆರಂಭವಾಗಿ ಕರಾಚಿ, ಲಾಹೋರು, ಡೆಲ್ಲಿ, ಮುತ್ತುಪ್ಪಾಡಿ, ಕ್ಯಾಲಿಫೋರ್ನಿಯಾ, ಬರ್ಲಿನ್‌ಗಳಲ್ಲಿ ಬೆಳೆದು ಮತ್ತೆ ವಾಘಾದಲ್ಲೇ ಕೊನೆಯಾಗುವ ಮಹಾಯಾನ ಇದು. ನೆಪ ಮಾತ್ರಕ್ಕೆ ವ್ಯಕ್ತಿಯೊಬ್ಬ ಕೇಂದ್ರವಾದರೂ, ಅದು ಸ್ಥಾವರಗೊಂಡ ಕೇಂದ್ರವಲ್ಲ. ಸ್ಥಳೀಯತೆಯಲ್ಲಿ ಬೇರುಬಿಟ್ಟು ದೇಶವ್ಯಾಪ್ತಿಯಲ್ಲಿ ಬದುಕಿನ ಗತಿಗಂತವ್ಯಗಳನ್ನು ಹಬ್ಬಿಸಿಕೊಂಡು ಬೆಳೆದ ಸ್ವಾತಂತ್ರ್ಯದ ಓಟದ ಕಥನವಿದು. ವ್ಯಕ್ತಿಯ ಸಾಕ್ಷಿಪ್ರಜ್ಞೆಯು ಸನ್ನಿವೇಶಗಳನ್ನು ಸಮಾಜವನ್ನು ನಿರೀಕ್ಷಿಸುತ್ತಲೇ ವಿಶ್ವ ಸಮುದಾಯಗಳ ಬದುಕು ಮಿಳಿತಗೊಂಡು ವಸ್ತುವಿನ್ಯಾಸದಲ್ಲಿ ಪ್ರೀತಿ, ಪ್ರೇಮಗಳ ಅನಾವರಣದಲ್ಲಿ ಧಾರ್ಮಿಕ ವಸ್ತುದ್ರವ್ಯವನ್ನು ನಿರೀಕ್ಷಿಸುವ 'ಸ್ವಾತಂತ್ರ್ಯದ ಓಟ' ನಮ್ಮ ಕಾಲದ ಬಹು ಮಹತ್ವದ ಕಾದಂಬರಿ.

ಎಸ್.ಜಿ. ಸಿದ್ಧರಾಮಯ್ಯ ಬೆಂಗಳೂರು,
ಫೆಬ್ರವರಿ 2012

ದಿಡ್ಡಳ್ಳಿ ಆದಿವಾಸಿಗಳನ್ನು ಒಕ್ಕಲೆಬ್ಬಿಸಬೇಡಿ – ಸಿಪಿಐ(ಎಂ) ಆಗ್ರಹ

ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿನ ದಿಡ್ಡಳ್ಳಿ ಪ್ರದೇಶದಲ್ಲಿ ವಾಸಮಾಡುತ್ತಿದ್ದ 577 ಆದಿವಾಸಿ ಕುಟುಂಬಗಳನ್ನು ಯಾವುದೇ ಮುನ್ಸೂಚನೆ ನೀಡದೆ ನೆಲಸಮ ಮಾಡಿ, ಬೀದಿ ತಳ್ಳಿದ ಸರಕಾರದ ಕ್ರಮವನ್ನು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಉಗ್ರವಾಗಿ ಖಂಡಿಸುತ್ತದೆ.

ಸರಕಾರದ ಇಲಾಖಾ ಅಧಿಕಾರಿಗಳ ಈ ಆಕ್ರಮಣ ತನ್ನದೇ ನಾಗರೀಕರ ಮೇಲಿನ ಧಾಳಿಯಾಗಿದೆ ಮತ್ತು ಮಾನವ ಹಕ್ಕುಗಳ ಹಾಗೂ ಸಂವಿಧಾನದ ಭರವಸೆಯ ಉಲ್ಲಂಘನೆಯಾಗಿದೆ. ಆದ್ದರಿಂದ ಜಿಲ್ಲಾಡಳಿತ ಬೇಷರತ್ತಾಗಿ ಜನತೆಯ ಕ್ಷಮೆ ಕೋರಬೇಕು.

ಮುಖ್ಯವಾಗಿ ಬೀದಿಗೆ ಬಿದ್ದಿರುವ ಆ ಎಲ್ಲಾ ಕುಟುಂಬಗಳಿಗೆ ನಿವೇಶನ-ಹಕ್ಕು ಪತ್ರ ನೀಡಿ, ಮನೆಯನ್ನು ಕಟ್ಟಿಕೊಡಲು ಸಂಪೂರ್ಣ ನೆರವನ್ನು ಕೊಡಬೇಕೆಂದು ಸಿಪಿಐ(ಎಂ) ಪಕ್ಷ ಆಗ್ರಹಿಸುತ್ತದೆ. ಆದಿವಾಸಿಗಳು ನಮ್ಮ ಸಂಸ್ಕೃತಿ, ನಾಗರೀಕತೆಯ ಬಹು ಮುಖ್ಯ ಭಾಗ. ಮಾತ್ರವಲ್ಲ, ಆಧಾರವೂ ಕೂಡ ಎಂಬುದನ್ನು ಗಮನಿಸಬೇಕು. ಆ ಕಾರಣಕ್ಕೆ ನಮ್ಮ ಸಂವಿಧಾನದಲ್ಲಿಯೇ ಅವರ ಬದುಕು, ಪರಂಪರೆಯ ರಕ್ಷಣೆಗೆ ಅತ್ಯಂತ ಶಕ್ತಿಯುತ ಸ್ಥಾನವನ್ನು ನೀಡಲಾಗಿದೆ. ಆದರೆ ಆದಿವಾಸಿ-ಬುಡಕಟ್ಟು ಸಮುದಾಯಗಳಿಗೆ ಭೂಮಿ, ಮನೆ, ಆಹಾರ-ಆರೋಗ್ಯದ ಕನಿಷ್ಠ ಸೌಲಭ್ಯಗಳೂ ಇಲ್ಲದೇ ಅತಂತ್ರರನ್ನಾಗಿ ಮಾಡಲಾಗಿದೆ. ಅವರ ಸ್ವಾಭಿಮಾನ, ಬದುಕಿನ ಮೇಲೆ ನಿರಂತರ ಧಾಳಿಗಳು ನಡೆಯುತ್ತಿರುವುದು ಅಮಾನುಷವಾಗಿದೆ. ಇದನ್ನು ನಿಲ್ಲಿಸಿ, ಗೌರವಿಸಿ, ಬದುಕಿಗೆ, ಅವರ ಸ್ವಾತಂತ್ರ್ಯಕ್ಕೆ ಪೂರ್ಣ ಅವಕಾಶ ನೀಡಬೇಕು.



ಈ ದೆಸೆಯಲ್ಲಿ ಕೂಡಲೇ ರಾಜ್ಯ ಸರಕಾರ, ಉಸ್ತುವಾರಿ ಸಚಿವರು, ಅರಣ್ಯ ಹಾಗೂ ಸಮಾಜ ಕಲ್ಯಾಣ ಸಚಿವರು ಮಧ್ಯ ಪ್ರವೇಶಿಸಿ ಇಡೀ ಕೊಡಗು ಜಿಲ್ಲೆಯ ಎಲ್ಲಾ ಆದಿವಾಸಿ-ದಲಿತರಿಗೆ, ನಿವೇಶನ, ಮನೆ ಕೊಡಲು ಕ್ರಮವಹಿಸಬೇಕು. ಮುಖ್ಯವಾಗಿ ಸಚಿವರು ದಿಡ್ಡಳ್ಳಿ-ತಳ್ಳಿ ನಿರಾಶ್ರಿತರಾದ ಬುಡಕಟ್ಟು ಹಾಗೂ ದಲಿತ ಸಮುದಾಯಗಳ ಸಮಸ್ಯೆ ಬಗೆಹರಿಸಬೇಕು. ಬೇರೆಡೆಗೆ ಪರ್ಯಾಯ ಕಲ್ಪಿಸುವ ಬಾಯಿ ಮಾತಿನ ಭರವಸೆ ಬಿಟ್ಟು ಅಲ್ಲಿಯೇ ಇರುವ ಅರಣ್ಯ-ಪೈಸಾರಿ ಭೂಮಿಯನ್ನು ಕಂದಾಯ ಇಲಾಖೆ ಸೂಕ್ತ ಕ್ರಮವಹಿಸಿ ಹಂಚಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

ಇಲ್ಲಿಗೆ 13 ದಿನಗಳಾದರೂ ಖಚಿತ ತೀರ್ಮಾನ ಕೊಡುವಲ್ಲಿ ಜಿಲ್ಲಾಡಳಿತ ವಿಫಲವಾಗಿದೆ. ಇದೇ ಸ್ಥಿತಿ ಮುಂದುವರೆದಲ್ಲಿ ಈ ಹೋರಾಟವನ್ನು ತೀವ್ರಗೊಳಿಸಲಾಗುವುದಲ್ಲದೆ ರಾಜ್ಯದಾದ್ಯಂತ ವಿಸ್ತರಿಸಲಾಗುವುದು. ಎಲ್ಲಾ ಸಂಘಟನೆಗಳು ತೀರ್ಮಾನಿಸಿದಂತೆ ಇದೇ ಡಿಸೆಂಬರ್ 22ರಂದು ಪಾದಯಾತ್ರೆ ಮೂಲಕ ಹೊರಟು 23ಕ್ಕೆ ಜಿಲ್ಲಾಧಿಕಾರಿ ಕಛೇರಿಯೆದುರು ನಿರಂತರ ಧರಣಿ ನಡೆಸಲಾಗುವುದು. ಈ ಎಲ್ಲಾ ಹೋರಾಟಕ್ಕೆ ಸಿಪಿಐ(ಎಂ) ಪೂರ್ಣ ಬೆಂಬಲ ನೀಡುತ್ತದೆ ಎಂದು ಎಸ್.ವೈ.ಗುರುಶಾಂತ್, ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರು ಡಾ॥ದುರ್ಗಾಪ್ರಸಾದ್ ಐ.ಆರ್., ಜಿಲ್ಲಾ ಕಾರ್ಯದರ್ಶಿ ರಮೇಶ್ ಹೆಚ್.ಬಿ., ಜಿಲ್ಲಾ ಸಂಘಟನಾ ಸಮಿತಿ ಸದಸ್ಯರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ನೋಟುಹರಣದ ಅವಾಂತರದ ನಡುವೆ ಚೆಕ್ ಮೂಲಕ ಸಂಬಳದ ಸುಗ್ರೀವಾಜ್ಞೆ ಯೋಚನೆ

ಪ್ರಧಾನ ಮಂತ್ರಿಗಳು ಕೇಳಿದ್ದ 50ದಿನಗಳ ಗಡುವು ಸಮೀಪಿಸುತ್ತ ಬಂದರೂ ಬ್ಯಾಂಕುಗಳಲ್ಲಿರುವ ತಮ್ಮ ಹಣವನ್ನು ಪಡೆಯಲು ಜನಗಳ ಮೇಲೆ ಪ್ರತಿದಿನ ಎಂಬಂತೆ ಹಲವು ಮಿತಿಗಳನ್ನು ಹಾಕಿ ಅವರು ದೈನಂದಿನ ಖರ್ಚಿಗೆ ಪ್ರತಿದಿನ ಬ್ಯಾಂಕ್‌ಗಳಲ್ಲಿ ಕ್ಯೂ ನಿಲ್ಲುವಂತಹ ಸ್ಥಿತಿ ಸುಧಾರಿಸಿಲ್ಲ. ದೇಶದ ಅತಿ ದೊಡ್ಡ ಸಾರ್ವಜನಿಕ ವಲಯದ ಬ್ಯಾಂಕಾದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಅಧ್ಯಕ್ಷರೇ ಡಿಸೆಂಬರ್ 30ರ ಗಡುವಿನ ನಂತರವೂ ಪರಿಸ್ಥಿತಿ ಸುಧಾರಿಸಬಹುದೆಂಬ ನಿರೀಕ್ಷೆ ಇಲ್ಲ, ನಮ್ಮ ಬಳಿ ನಗದು ಇದ್ದರೆ ತಾನೇ ನಾವು ಕೊಡಲು ಸಾಧ್ಯ ಎಂದು ಜನರಿಗೆ ಅವರೇ ಮರುಪ್ರಶ್ನೆ ಹಾಕುವಂತಾಗಿದೆ.

ಆದರೆ ಇದರ ನಡುವೆಯೂ ಕೇಂದ್ರ ಸರಕಾರ ತಾನು ಕಾರ್ಮಿಕರಿಗೆ 'ಒಳ್ಳೆಯ'ದನ್ನೇ ಮಾಡುತ್ತಿದ್ದೇನೆ ಎನ್ನುತ್ತ ಇನ್ನು ಮುಂದೆ ಸಂಬಳ ಪಾವತಿ ಚೆಕ್ ಮೂಲಕ ಅಥವ ಇಲೆಕ್ಟ್ರಾನಿಕ್ ವಿಧಾನದಲ್ಲೇ ಕೊಡಬೇಕು ಎಂದು ಕಡ್ಡಾಯ ಮಾಡುವ ಸುಗ್ರೀವಾಜ್ಞೆ ಹೊರಡಿಸಲಿದೆಯಂತೆ. ಇತ್ತೀಚೆಗೆ ಮುಗಿದ ಸಂಸತ್ತಿನ ಅಧಿವೇಶನದ ಕೊನೆಯ ದಿನ ಅನಾಣ್ಯೀಕರಣದ ಗಲಾಟೆಯ ನಡುವೆಯೇ ಸಂಬಳ ಪಾವತಿ ತಿದ್ದುಪಡಿ ಮಸೂದೆಯನ್ನು ಮಂಡಿಸಲಾಗಿತ್ತು. ಆ ಮಸೂದೆ ಪಾಸಾಗುವ ವರೆಗೆ ಕಾಯಲಾರದಂತಹ ಸ್ಥಿತಿಯಲ್ಲಿ ಈ ಸರಕಾರ ಇರುವಂತೆ ಕಾಣುತ್ತದೆ.

ದೇಶದ ಪ್ರಮುಖ ಕಾರ್ಮಿಕ ಸಂಘಟನೆಗಳು ಸರಕಾರದ ಈ ಯೋಚನೆಯ ಬಗ್ಗೆ ಆತಂಕ ವ್ಯಕ್ತಪಡಿಸಿವೆ. ಇಡೀ ಬ್ಯಾಂಕಿಂಗ್ ವ್ಯವಸ್ಥೆಯೇ ಈಗಿನ ಅಸಾಮಾನ್ಯ ಪರಿಸ್ಥಿತಿಯಲ್ಲಿ ಅಸ್ತವ್ಯಸ್ತಗೊಂಡಿರುವಾಗ ಸರಕಾರದ ಈ ತರಾತುರಿಯ ಆಶಯವೇ ಸಂದೇಹಾಸ್ಪದವಾಗಿದೆ ಎಂದು ಸಿಐಟಿಯು ಹೇಳಿದೆ.

ಅಲ್ಲದೆ ಈ ಸುಗ್ರೀವಾಜ್ಞೆ ತಿದ್ದುಪಡಿ ಮಸೂದೆಯನ್ನೇ ಆಧರಿಸಿದ್ದು, ಅದು ಈಗ ಕಾರ್ಮಿಕರಿಗೆ ಇರುವ ಒಂದು ಹಕ್ಕನ್ನು ಕಿತ್ತುಕೊಳ್ಳ ಹೊರಟಿದೆ. ಎಂಬ ಸಂಗತಿಯತ್ತ ಸಿಐಟಿಯು ಗಮನ ಸೆಳೆದಿದೆ. ಈಗಿರುವ ಕಾನೂನಿನ ಪ್ರಕಾರ ಸಂಬಳವನ್ನು ನಗದಾಗಿ ಪಡೆಯಬೇಕೋ ಅಥವ ಚೆಕ್ ಮೂಲಕವೋ ಎಂಬ ಆಯ್ಕೆ ಕಾರ್ಮಿಕನಿಗಿದ್ದು, ಆ ಬಗ್ಗೆ ಆತನ/ಆಕೆಯ ಸಮ್ಮತಿಯಿಲ್ಲದೆ ಯಾವುದೇ ವಿಧಾನ ಅನುಸರಿಸುವಂತಿಲ್ಲ. ಈ ಹಕ್ಕು ದೇಶದಲ್ಲಿ 35% ವಸತಿ ಪ್ರದೇಶಗಳಲ್ಲಿ ಬ್ಯಾಂಕ್ ಶಾಖೆಗಳು ಇಲ್ಲದಿರುವಾಗ, ಮತ್ತು ಬಹುಪಾಲು ಕಾರ್ಮಿಕರು, ಮುಖ್ಯವಾಗಿ ಕಡಿಮೆ ಸಂಬಳದ ಕಾರ್ಮಿಕರು, ಬ್ಯಾಂಕ್ ಖಾತೆಗಳನ್ನೇ ಹೊಂದಿರದಿರುವಾಗ ಬಹಳ ಮಹತ್ವದ್ದಾಗುತ್ತದೆ. ವಲಸೆ ಕಾರ್ಮಿಕರಂತೂ ಇನ್ನಷ್ಟು ಪರದಾಡಬೇಕಾಗುತ್ತದೆ.

ಆದ್ದರಿಂದ ಸರಕಾರ ಈ ಬಗ್ಗೆ ತರಾತುರಿಯಿಂದ ವರ್ತಿಸಿ ಈಗಾಗಲೇ ಅನಾಣ್ಯೀಕರಣದ ಪರಿಣಾಮವಾಗಿ ಸಂಬಳ-ನಷ್ಟ, ಉದ್ಯೋಗ-ನಷ್ಟದಿಂದ ಒದ್ದಾಡುತ್ತಿರುವ ಕಾರ್ಮಿಕರನ್ನು ಇನ್ನಷ್ಟು ಸಂಕಷ್ಟಗಳಿಗೆ ಒಡ್ಡಬಾರದು ಮತ್ತು ಕಾನೂನು ನೀಡಿರುವ ಹಕ್ಕನ್ನು ಕಿತ್ತುಕೊಳ್ಳಬಾರದು ಎಂದು ಸಿಐಟಿಯು ಆಗ್ರಹಿಸಿದೆ.

ಸರಕಾರದ ತರಾತುರಿ ಕಾರ್ಮಿಕರಿಗೆ 'ಒಳ್ಳೆಯ ದಿನ'ಗಳನ್ನು ತರಲು ಖಂಡಿತಾ ಅಲ್ಲ, ಬದಲಾಗಿ ಕಪ್ಪುಹಣ ಹೊರ ತರುವ ದಾವೆಯ ವಿಫಲತೆಯನ್ನು ಮರೆಮಾಚುವ 'ನಗದುರಹಿತ ಆರ್ಥಿಕ'ದ ಅಬ್ಬರದ ಭಾಗವಷ್ಟೇ ಎಂಬ ಅಭಿಪ್ರಾಯ ಬಲಗೊಳ್ಳುತ್ತಿದೆ.

ಹಣದುಬ್ಬರ ದರದ ಇಳಿಕೆ ಸಂತಸ ತಂದಿಲ್ಲ, ಪಿಎಫ್ ಬಡ್ಡಿದರ ಇಳಿಕೆ, ಪೆಟ್ರೋಲಿಯಂ ದರ ಏರಿಕೆ ಸಂಕಟ ತಂದಿದೆ

ಸಾಮಾನ್ಯವಾಗಿ ಹಣದುಬ್ಬರ ಪ್ರಮಾಣ ಇಳಿಯುತ್ತಿದೆ ಎಂಬುದು ಸಂತೋಷದ ಸುದ್ದಿಯಾಗಬೇಕು, ಆರ್ಥಿಕ ವ್ಯವಸ್ಥೆಗೂ, ಜನಸಾಮಾನ್ಯರಿಗೂ. ನವಂಬರ್ ತಿಂಗಳಲ್ಲಿ ಹಣದುಬ್ಬರ ದರ 3.63%ಕ್ಕೆ ಇಳಿದಿದೆ. ಇದು ಕಳೆದ ಎರಡು ವರ್ಷಗಳಲ್ಲೇ (ಅಂದರೆ ಒಳ್ಳೆಯ ದಿನಗಳ) ಅತಿ ಕಡಿಮೆ ಹಣದುಬ್ಬರ ದರ ಎನ್ನಲಾಗಿದೆ. ಈ ಸರಕಾರ ಅಧಿಕಾರ ವಹಿಸಿಕೊಂಡಾಗ 7%ದಷ್ಟಿತ್ತು. ಆದರೂ 'ಸಾಧನೆ'ಗಳ ಟಾಂಟಾಂ ಹೊಡೆಯುವ ಆಳುವ ವೃಂದಿಯೂ ಈ ಬಗ್ಗೆ ಸಂತೋಷ ವ್ಯಕ್ತಪಡಿಸಲು ಹಿಂಜರಿಯುತ್ತಿದ್ದಾರೆ. ಏಕೆಂದರೆ ಈ ಹಣದುಬ್ಬರ ಇಳಿಕೆ ಆಗಿರುವುದು ಬೆಲೆಗಳ ಇಳಿಕೆಯಿಂದ ಅಲ್ಲ, ಬದಲು ಬೇಡಿಕೆಬ್ಬರ ಇಳಿಕೆಯಿಂದಾಗಿ, ಖರೀದಿಸಲು ಜನರ ಬಳಿ ನಗದು ಇಲ್ಲದಂತೆ ಮಾಡಿರುವ ಅನಾಣ್ಯೀಕರಣದ ತಕ್ಷಣ 'ಫಲ' ಇದು ಎಂದು ವಿಶ್ಲೇಷಕರು ಹೇಳುತ್ತಿದ್ದಾರೆ. ಇದು ಖಂಡಿತಾ ಆರ್ಥಿಕ ವ್ಯವಸ್ಥೆಗೂ ಒಳ್ಳೆಯ ಸುದ್ದಿ ಅಲ್ಲ. 'ನಗದುರಹಿತ' ವ್ಯವಸ್ಥೆಯತ್ತ ಪರಿವರ್ತನೆ ಸರಕಾರ ಹಾಕಿಕೊಂಡ ಸಮಯದ ಚೌಕಟ್ಟಿನೊಳಗೆ ಆಗದಿದ್ದರೆ(ಆಗದಿರುವ ಸಂಭವವೇ ಹೆಚ್ಚು) ರೈತರ ಮತ್ತು ಸಣ್ಣ ವ್ಯಾಪಾರಿಗಳ ಸಂಕಟ ಇನ್ನೂ ದೀರ್ಘಕಾಲ ಮುಂದುವರೆದು ಆರ್ಥಿಕ ವ್ಯವಸ್ಥೆಯಲ್ಲಿನ ಬೇಡಿಕೆ ಹೀಗೇ ಕೆಳಮಟ್ಟದಲ್ಲಿ ಮುಂದುವರೆಯುವ ಸಾಧ್ಯತೆ ಇದೆ ಎಂದೂ ಈ ವಿಶ್ಲೇಷಕರು ಹೇಳುತ್ತಿದ್ದಾರೆ.

ಅನಾಣ್ಯೀಕರಣ ಕುರಿತಂತೆ ನವಂಬರ್ 8ರ ನಂತರದ 42 ದಿನಗಳಲ್ಲಿ 59 ಅಧಿಸೂಚನೆಗಳು ಹಣಕಾಸು ಮತ್ರಾಲಯದಿಂದ ಮತ್ತು ರಿಝರ್ವ್ ಬ್ಯಾಂಕ್‌ನಿಂದ ಹೊರಟಿವೆ. ಇವುಗಳಲ್ಲಿ ನಗದು ವಿನಿಮಯದ ನಿಯಮಗಳನ್ನು 5ಸಲ ಬದಲಾಯಿಸಲಾಗಿದೆ, ನಗದು ಪಡೆಯುವ ಮಿತಿಗಳನ್ನು 6 ಸಲ ಹಾಗೂ ಹಳೆಯ ನೋಟುಗಳ ಬಳಕೆಯ ಆಯ್ಕೆಯನ್ನು 8ಸಲ ಬದಲಾಯಿಸಲಾಗಿದೆ-ಸುದ್ದಿ



ವ್ಯಂಗ್ಯಚಿತ್ರ:ಕೀರ್ತಿಶ್, ಬಾಮುಲಾಹಿಜಾ.ಕಾಂ

ಈ ಸುದ್ದಿಯ ಬೆನ್ನಲ್ಲೇ ನೌಕರರ ಭವಿಷ್ಯ ನಿಧಿಯ ಮೇಲಿನ ಬಡ್ಡಿದರ ಕಳೆದ ಏಳು ವರ್ಷಗಳಲ್ಲೇ ಅತಿ ಕೆಳಗಿನ ಮಟ್ಟಕ್ಕೆ ಇಳಿದಿದೆ ಎಂಬ ಸುದ್ದಿ ಬಂದಿದೆ. ಕಳೆದ ವರ್ಷ ಅದನ್ನು 8.8%ಕ್ಕೆ ಇಳಿಸಲಾಗಿತ್ತು. ಈಗ ಮತ್ತಷ್ಟು ಇಳಿಸಲಾಗಿದೆ. ಸರಕಾರದ ಆಶಯ ಅದನ್ನು 8.6%ಕ್ಕೆ ಇಳಿಸುವುದಾಗಿತ್ತು. ಚೌಕಾಶಿ ಮಾಡಿ ಅದನ್ನು 8.65% ಎಂದು ಮಾಡಲಾಗಿದೆ. ಕಾರ್ಮಿಕ ಸಂಘಟನೆಗಳೆಲ್ಲ ಈ ಬಗ್ಗೆ ಅಸಂತೋಷ ವ್ಯಕ್ತಪಡಿಸಿದ್ದರೆ 'ಒಳ್ಳೆಯ ದಿನ'ಗಳ ತರ್ಕವನ್ನು ನಂಬಲೇ ಬೇಕಾಗಿರುವ ಸಂಘ ಪರಿವಾರದ ಬಿಎಂಎಸ್ ಈ ಕ್ರಮವನ್ನು ಮೆಚ್ಚಿಕೊಂಡಿದೆಯಂತೆ, ಬೇರೆಲ್ಲ ಬಡ್ಡಿದರಗಳು ಇಳಿಯುತ್ತಿರುವಾಗ ಇದು ಸಹಜ, ಈಗಲೂ ಬೇರೆಲ್ಲ ಉಳಿತಾಯಗಳಿಗಿಂತ ಹೆಚ್ಚು ಬಡ್ಡಿ ನೀಡಲಾಗಿದೆ ಎಂದು ಅದು ತನ್ನ ಮೆಚ್ಚುಗೆಯನ್ನು ಸಮರ್ಥಿಸಿಕೊಂಡಿದೆ.

ಇಂತಹ ಸನ್ನಿವೇಶದಲ್ಲಿ ಹೆಚ್ಚು ಪ್ರತಿಫಲ ಸಿಗುತ್ತದೆ ಎಂಬ ತರ್ಕದ ಮೇಲೆಯೇ ನೌಕರರ ಭವಿಷ್ಯ ನಿಧಿಯ ಹಣವನ್ನು ಶೇರು ಮಾರುಕಟ್ಟೆಯಲ್ಲಿ ತೊಡಗಿಸುವ ಕ್ರಮವನ್ನು ಕಾರ್ಮಿಕ ಸಂಘಟನೆಗಳ ವಿರೋಧದ ನಡುವೆಯೂ ಆರಂಭಿಸಲಾಗಿತ್ತು ಎಂಬುದನ್ನು ಅದು ಮರೆತಂತಿದೆ. ನಿಜ ಹೇಳಬೇಕೆಂದರೆ ಅದರಿಂದಾಗಿಯೇ ನೌಕರರ ಭವಿಷ್ಯ ನಿಧಿಯ ಪ್ರತಿಫಲ ದರ ಇಳಿದಿರಬೇಕು ಎಂಬ ಅನುಮಾನ ಉಂಟಾಗಿದೆ.

ಈ ದಿನಗಳ ಮತ್ತೊಂದು ಸುದ್ದಿಯೆಂದರೆ ಪೆಟ್ರೋಲಿಯಂ ಉತ್ಪನ್ನಗಳ ದರಗಳಲ್ಲಿ ಏರಿಕೆ. ಪೆಟ್ರೋಲ್ ದರಗಳಲ್ಲಿ ಲೀಟರಿಗೆ 2.21ರೂ. ಏರಿಕೆಯಾಗಿದ್ದರೆ, ಡೀಸೆಲ್ ದರಗಳಲ್ಲಿ 1.79 ರೂ. ಏರಿಕೆಯಾಗಿದೆ. ಇದು ಇತ್ತೀಚಿನ ಕೆಲವು ಇಳಿಕೆಗಳಿಗೆ ಹೋಲಿಸಿದರೆ ಬಹಳ ಹೆಚ್ಚಿನ ಏರಿಕೆ.

ಗಮನಿಸಬೇಕಾದ ಸಂಗತಿಯೆಂದರೆ ಸಾಮಾನ್ಯವಾಗಿ ಪ್ರತಿ ತಿಂಗಳು 1ನೇ ತಾರೀಕು ಮತ್ತು 15ನೇ ತಾರೀಕಿನಂದು ಪೆಟ್ರೋಲಿಯಂ ಉತ್ಪನ್ನಗಳ ದರಗಳ ವಿಮರ್ಶೆ ಮಾಡಲಾಗುತ್ತದೆ. ಆದರೆ ಈ ತಿಂಗಳು ಸಂಸತ್ತು ಅಧಿವೇಶನದಲ್ಲಿ ಇದ್ದುದರಿಂದ ಅಲ್ಲಿ ದರ ಏರಿಸಿದರೆ ಪ್ರತಿಭಟನೆ ಬರಬಹುದು ಎಂದು ಹೆದರಿ ಅಧಿವೇಶನ ಮುಗಿದ ಮೇಲೆಯೇ ಈ ಏರಿಕೆಗಳನ್ನು ಪ್ರಕಟಿಸಲಾಗಿದೆ. ಈ ಮೂಲಕ ಈ ಏರಿಕೆ/ಇಳಿಕೆಗಳು ತೈಲ ಕಂಪನಿಗಳಿಗೆ ಬಿಟ್ಟದ್ದು, ಸರಕಾರದ ಪಾತ್ರ ಅದರಲ್ಲೇನೂ ಇಲ್ಲ ಎಂಬ ಆಳುವವರ ತರ್ಕ ಅರ್ಥವಿಲ್ಲದ್ದು ಎಂಬುದು ಮತ್ತೊಮ್ಮೆ ಸಾಬೀತಾಗಿದೆ.

ತನ್ನೆಲ್ಲ ಕ್ರಮಗಳು ಜನರ ಒಳ್ಳೆಯದಕ್ಕಾಗಿಯೇ ಎನ್ನುವ ಸರಕಾರ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ತೆರಿಗೆಯನ್ನು ಎರಡು ಪಟ್ಟಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಏರಿಸಿದೆ. ಅದು ಅಧಿಕಾರಕ್ಕೆ ಬರುವ ವೇಳೆಗೆ ಪೆಟ್ರೋಲ್ 'ಮೇಲೆ ತೆರಿಗೆ ಲೀಟರಿಗೆ 9.48 ರೂ. ಇತ್ತು. ಈಗ ಅದು 21.48ರೂ. ಆಗಿದೆ. ಆಗ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಗಳು ಇಳಿಯುತ್ತಿದ್ದುದರಿಮದ ಸರಕಾರಕ್ಕೆ ಇದರಿಂದ ಬರುತ್ತಿದ್ದ ಆದಾಯವನ್ನು ಉಳಿಸಿಕೊಳ್ಳಲು ತೆರಿಗೆ ದರವನ್ನು ಏರಿಸಲಾಯಿತು. ಈಗ ಜಾಗತಿಕ ಮಾರುಕಟ್ಟೆಯಲ್ಲಿ ಬೆಲೆ ಏರುವ ಲಕ್ಷಣಗಳೇ ಹೆಚ್ಚಿರುವಾಗ ತನ್ನ ಹೆಚ್ಚುವ ತೆರಿಗೆ ಆದಾಯದಲ್ಲಿ ಜನಸಾಮಾನ್ಯರಿಗೆ ಪರಿಹಾರ ಕೊಡಲು ತೆರಿಗೆ ದರಗಳನ್ನು ಇಳಿಸಬಾರದೇಕೆ ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ. ಇದಕ್ಕೆ ಎಂದಿನ ದಿವ್ಯ ಮೌನ!



ಪ್ರತಿಭಾವಂತ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ಸ್ಕಾಲರ್‌ಶಿಪ್ ಪಾವತಿ ಬಾಕಿ 8000 ಕೋಟಿ ರೂ.

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ ದೊಡ್ಡ ಪ್ರಮಾಣದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ಅಧ್ಯಯನಕ್ಕೆ ಕೊಡಬೇಕಾದ ಸ್ಕಾಲರ್‌ಶಿಫ್ ಹಣವನ್ನು ಪಾವತಿ ಮಾಡದೆ ಬಾಕಿ ಇಟ್ಟುಕೊಂಡಿದೆ. ಅದೀಗ 8000 ಕೋಟಿ ರೂ. ದಾಟಿದೆ. ಇದು ಆ ಇಲಾಖೆಗೆ ಈ ಬಾಬ್ತು ಹಣಕಾಸು ಇಲಾಖೆ ಒಂದು ವರ್ಷದಲ್ಲಿ ಕೊಡುವ ಹಣಕ್ಕಿಂತಲೂ ಹೆಚ್ಚು, ಎಂದು ಇಕನಾಮಿಕ್ ಟೈಮ್ಸ್ ವರದಿ ಮಾಡಿದೆ. ಈ ವರ್ಷ ರೂ.6500 ಕೋಟಿ ನಿಗದಿಯಾಗಿದ್ದು, ಇದುವರೆಗೆ 4667 ಕೋಟಿ ರೂ. ಮಾತ್ರ ಅದಕ್ಕೆ ಸಿಕ್ಕಿದೆ. ಈ ಇಲಾಖೆಯ ಮಂತ್ರಿಗಳು ಇಷ್ಟು ಪಾವತಿ ಬಾಕಿಯಿದೆ ಎಂಬುದನ್ನು ಒಪ್ಪಿಕೊಂಡಿದ್ದಾರೆ. ಇದನ್ನು ಹಣಕಾಸು ಇಲಾಖೆಯೊಂದಿಗೆ ಎತ್ತಲಾಗುವುದು ಎಂದ ಅವರು ರಾಜ್ಯಗಳು ಈ ಹಣವನ್ನು ನೇರ ವರ್ಗಾವಣೆಯ ಮೂಲಕ ಕೊಡಬೇಕು ಎಂದಿದ್ದಾರೆ. ರಾಜ್ಯಗಳಿಗೆ ಹಣವನ್ನೆ ಸಂದಾಯ ಮಾಡದಿರುವಾಗ ನೇರ ವರ್ಗಾವಣೆಯ ಪ್ರಶ್ನೆ ಎಲ್ಲಿ ಬರುತ್ತದೋ ಗೊತ್ತಿಲ್ಲ.

ಏಳು ಅರಣ್ಯ ಉತ್ಪನ್ನಗಳ ಬೆಂಬಲ ಬೆಲೆ ಇಳಿಸಿದ ಸರಕಾರ


ಬುಡಕಟ್ಟು ಜನಗಳು ದೂರದ ಅರಣ್ಯ ಪ್ರದೇಶಗಳಲ್ಲಿ ಸಂಗ್ರಹಿಸುವ 11 ಉತ್ಪನ್ನಗಳಲ್ಲಿ 7 ಉತ್ಪನ್ನಗಳ ಕನಿಷ್ಠ ಬೆಂಬಲ ಬೆಲೆಗಳನ್ನು ಇಳಿಸಿದೆ. ಕೆಲವು ಉತ್ಪನ್ನಗಳಿಗೆ ಕೊಡುವ ಹಣ ಅರ್ಧಕಿಂತಲೂ ಕೆಳಗಿಳಿದಿದೆ. ರಂಗಿನಿ ಅರಗಿನ ಬೆಂಬಲ ಬೆಲೆಯನ್ನು ಕೆಜಿಗೆ 230ರೂ.ನಿಂದ 100ರೂ.ಗೆ ಇಳಿಸಿದೆ, ಕುಸುಮೀ ಅರಗಿಗೆ 320ರೂ.ನಿಂದ 150ರೂ.ಗೆ ಇಳಿಸಿದೆ.

ಯುಪಿಎ ಸರಕಾರ ಮೊದಲ ಬಾರಿಗೆ ಮೂರು ವರ್ಷಗಳ ಹಿಂದೆ ಸಣ್ಣ ಅರಣ್ಯ ಉತ್ಪನ್ನಗಳಿಗೆ ಕನಿಷ್ಟ ಬೆಂಬಲ ಬೆಲೆಯನ್ನು ನಿಗದಿ ಮಾಡಿತ್ತು. ಸಾಮಾನ್ಯವಾಗಿ ಬೆಂಬಲ ಬೆಲೆಗಳನ್ನು ಏರಿಸಬೇಕು. ನಾವು ತಂತಾನೇ ಏರುವ ರೀತಿಯಲ್ಲಿ ಸೂತ್ರವನ್ನು ರೂಪಿಸಿದ್ದೆವು, ಅದನ್ನು ಇಳಿಸುವುದರಿಂದ ಬಡ ಬುಡಕಟ್ಟು ಜನಗಳಿಗೆ ತೊಂದರೆಯಾಗುತ್ತದೆ ಎಂದು ಆಗ ಬುಡಕಟ್ಟು ವ್ಯವಹಾರಗಳ ಮಂತ್ರಿಗಳಾಗಿದ್ದ ಕಿಶೋರ ಚಂದ್ರ ದೇವ್ ಹೇಳಿದ್ದಾರೆ.

ಆದರೆ 'ಒಳ್ಳೆಯ ದಿನಗಳ' ಸರಕಾರದ ಬುಡಕಟ್ಟು ವ್ಯವಹಾರಗಳ ಮಂತ್ರಿಗಳ ಪ್ರಕಾರ ಕನಿಷ್ಠ ಬೆಂಬಲ ಬೆಲೆಗಳನ್ನು 'ತರ್ಕಬದ್ಧ'ಗೊಳಿಸಲಾಗಿದೆ. ಅಂದರೆ ಕೆಲವಕ್ಕೆ ಹೆಚ್ಚಿನ ಬೆಲೆ ನಿಗದಿ ಮಾಡಲಾಗಿತ್ತಂತೆ, ಅದನ್ನೀಗ ಸರಿಪಡಿಸಲಾಗಿದೆಯಂತೆ, ಇನ್ನು ಮುಂದೆ ಅದು ಹೆಚ್ಚುತ್ತದಂತೆ. 10 ಕೋಟಿ ಬುಡಕಟ್ಟು ಜನಗಳಿಗೆ ಕಲ್ಯಾಣ ಕ್ರಮವಾಗಿ ಆರಂಭವಾಗಿದ್ದ ಈ ಯೋಜನೆಯಲ್ಲಿ ರಾಜ್ಯಸರಕಾರಗಳಿಗೆ ನಷ್ಟವಾಗಿದ್ದರಿಂದ ಹೀಗೆ ಮಾಡಲಾಗಿದೆ ಎಂದು ಬಿಜೆಪಿ ಮಂತ್ರಿಗಳು ತಮ್ಮ ಸರಕಾರದ ಕ್ರಮವನ್ನು ಸಮರ್ಥಿಸಿಕೊಂಡಿದ್ದಾರೆ.

ಮಣಿಪುರ ಬಿಜೆಪಿ ಶಾಸಕಾಂಗ ಪಕ್ಷದ ಮುಖಂಡ ಕಾಂಗ್ರೆಸಿಗೆ

ಮಣಿಪುರದಲ್ಲಿ ಬಿಜೆಪಿ ಮುಖಂಡನಿಂದ ಕಾಂಗ್ರೆಸಿಗೆ ಪಕ್ಷಾಂತರ ಒಳ್ಳೆಯ ದಿನಗಳನ್ನು ತರುವುದಕ್ಕಾಗಿ ದೇಶವನ್ನು 'ಕಾಂಗ್ರೆಸ್ ಮುಕ್ತ'ಗೊಳಿಸುವ ಮತ್ತು ಅಸ್ಸಾಂ ವಿಜಯದ ನಂತರ ಈಶಾನ್ಯ ಭಾರತದಲ್ಲಿ ತನ್ನ ಪ್ರಭಾವ ವಿಸ್ತರಿಸುವ ಬಿಜೆಪಿಯ ಭಾರೀ ಯೋಜನೆಗೆ ಧಕ್ಕೆ ತಂದಿದೆ. ಅಲ್ಲಿನ ವಿಧಾನಸಭೆಯಲ್ಲಿ ಬಿಜೆಪಿ ತಂಡದ ಮುಖಂಡ ಖುಮುಕ್ಚಮ್ ಜೊಯ್‌ಕಿಶನ್ ಕಾಂಗ್ರೆಸ್ ಪಕ್ಷವನ್ನೇ ಸೇರಿದ್ದಾರೆ. ಈತ ಮುಂದಿನ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿಯ ಮುಖ್ಯಮಂತ್ರಿ ಅಭ್ಯರ್ಥಿಯಾಗುವ ಸಾಧ್ಯತೆಯಿತ್ತು ಎನ್ನಲಾಗಿದೆ. ಬಿಜೆಪಿ ರಾಜ್ಯದ ಜನರಿಗೆ ಏನೂ ಮಾಡುತ್ತಿಲ್ಲ ಎನ್ನುವುದು ಅವರ ಆಕ್ಷೇಪವಂತೆ.



ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್

ಕೇಂದ್ರ ಸರಕಾರದ ನಿಲುವಿನಿಂದಾಗಿ ಜಿಎಸ್‌ಟಿ ಜಾರಿಯ ಬಗ್ಗೆ ಪ್ರಶ್ನೆ ಚಿಹ್ನೆ



ಕೆ.ಎಂ.ನಾಗರಾಜ್

ಜಿಎಸ್‌ಟಿ ಮಂಡಳಿಯಲ್ಲಿ ಇಲ್ಲಿಯವರೆಗೆ ಯಾವ ವಿಷಯವೂ ವೋಟಿಂಗ್ ಮೂಲಕ ನಿರ್ಣಯವಾಗಿಲ್ಲ ಮತ್ತು ಎಲ್ಲಾ ವಿವಾದಗಳೂ ಒಮ್ಮತದ ಮೂಲಕವೇ ನಿರ್ಣಯವಾಗಿವೆ. ಆದರೆ ಅನಾಣ್ಯೀಕರಣದ ನಂತರ ಉಂಟಾಗಿರುವ ವಾತಾವರಣದಲ್ಲಿ ರಾಜ್ಯ ಮತ್ತು ಕೇಂದ್ರದ ನಡುವಿನ ಸಂಬಂಧಗಳು ಒಕ್ಕೂಟ-ಸಹಕಾರಿ ತತ್ವಗಳ ಆಧಾರದಲ್ಲಿ ನೆಲೆಗೊಳಿಸಿರಬೇಕೆಂಬ ಉದಾತ್ತ ಮನೋಭಾವದ ಮಾತುಗಳು ಬರೀ ಆಡಂಬರದ ಮಾತುಗಳಾಗಿ ಉಳಿದಿವೆ. ಅನಾಣ್ಯೀಕರಣದ ಸಮಸ್ಯೆಯನ್ನು ಚರ್ಚಿಸಲು ಎಲ್ಲ ರಾಜ್ಯಗಳ ಮುಖ್ಯ ಮಂತ್ರಿಗಳ ಸಭೆಯನ್ನಾಗಲಿ ಅಥವಾ ರಾಜ್ಯ ಹಣಕಾಸು ಮಂತ್ರಿಗಳ ಸಭೆಯನ್ನಾಗಲಿ ಕರೆಯುವ ಸೌಜನ್ಯವನ್ನು ಕೇಂದ್ರ ಸರ್ಕಾರ ತೋರಿಸಿಲ್ಲ. ಈ ಪರಿಸ್ಥಿತಿಯಲ್ಲಿ, ಏಪ್ರಿಲ್ ಒಂದರಿಂದ ಜಿಎಸ್‌ಟಿ ಜಾರಿಯಾಗುವುದು ಅನುಮಾನ ಎಂದೇ ಹೇಳಬಹುದು ಎನ್ನುತ್ತಾರೆ ಕೇರಳ ರಾಜ್ಯ ಸರ್ಕಾರದ ಹಣಕಾಸು ಮಂತ್ರಿ, ಡಾ. ಥಾಮಸ್ ಐಸ್ಯಾಕ್. ಅವರ ಲೇಖನದ ಭಾವಾನುವಾದ ಇಲ್ಲಿದೆ.

ಜಿಎಸ್‌ಟಿ ಜಾರಿ ಸಂಬಂಧವಾಗಿ ಸಂವಿಧಾನ ತಿದ್ದುಪಡಿಯಾದ ನಂತರ, 2017ರ ಏಪ್ರಿಲ್ ಒಂದ-ರಿಂದ ಜಿಎಸ್‌ಟಿ ಜಾರಿಯಾಗುವುದು ಖಚಿತವೆಂದು ಎಲ್ಲರೂ ಭಾವಿಸಿದ್ದರು. ಕೇಂದ್ರೀಯ(ಸೆಂಟ್ರಲ್) ಜಿಎಸ್‌ಟಿ (ಸಿಜಿಎಸ್‌ಟಿ) ಮತ್ತು ಸಮಗ್ರೀಕರಣಗೊಂಡ ಜಿಎಸ್‌ಟಿ (ಐಜಿಎಸ್‌ಟಿ) ಮಸೂದೆಗಳಿಗೆ ಲೋಕ ಸಭೆಯ ಚಳಿಗಾಲದ ಅಧಿವೇಶನದಲ್ಲಿ ಅಂಗೀಕಾರ ಪಡೆದು, ನಂತರ, ಮುಂಬರುವ ರಾಜ್ಯಗಳ ಬಜೆಟ್ ಅಧಿವೇಶನಗಳಲ್ಲಿ ರಾಜ್ಯಗಳ ಜಿಎಸ್‌ಟಿ ಮಸೂದೆಗೆ ಅಂಗೀಕಾರ ಪಡೆದು 2017ರ ಏಪ್ರಿಲ್ ಒಂದ-ರಿಂದ ಜಿಎಸ್‌ಟಿ ಜಾರಿಮಾಡಲಾಗುವುದೆಂದು ಉದ್ದೇಶಿಸಲಾಗಿತ್ತು. ಆದರೆ, ನೋಟುಗಳ ರದ್ದತಿಯ ಅವಾಂತರದ ಹಿನ್ನೆಲೆಯಲ್ಲಿ, ಸಿಜಿಎಸ್‌ಟಿ ಮತ್ತು ಐಜಿಎಸ್‌ಟಿ ಮಸೂದೆಗಳು ಕಳೆದ ವಾರ ಮುಕ್ತಾಯಗೊಂಡ ಲೋಕ ಸಭೆಯ ಚಳಿಗಾಲದ ಅಧಿವೇಶನದಲ್ಲಿ ಪ್ರಸ್ತಾಪವಾಗಲೇ ಇಲ್ಲ. ಹಾಗಾಗಿ, ಮುಂಬರುವ ಏಪ್ರಿಲ್ ಒಂದರಿಂದ ಜಿಎಸ್‌ಟಿ ಜಾರಿಯಾಗುವ ಸಂಭವವಿಲ್ಲ.

ಈ ನಡುವೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಪ್ರತಿನಿಧಿಗಳನ್ನೊಳಗೊಂಡ ಜಿಎಸ್‌ಟಿ ಕೌನ್ಸಿಲ್‌ನಲ್ಲಿ ನಡೆದ ಆರು ಸಭೆಗಳ ನಂತರವೂ ಒಂದು ಮಾದರಿ ಜಿಎಸ್‌ಟಿ ಕಾನೂನಿನ ಚೌಕಟ್ಟನ್ನು ನಿರ್ಧರಿಸಲು ಒಮ್ಮತ ಏರ್ಪಟ್ಟಿಲ್ಲ. ಆರಂಭದ ಸಭೆಗಳಲ್ಲಿ, ರಾಜ್ಯಗಳು ತಾಳಿದ ರಾಜಿ ಮನೋಭಾವದಿಂದಾಗಿ, ಅಪರೂಪ ಎನಿಸುವ ಒಂದು ಒಮ್ಮತ ಮತ್ತು ಕೊಡು ಕೊಳ್ಳುವ ಸೌಹಾರ್ದಯುತ ವಾತಾವರಣವಿತ್ತು. ಆನಂತರ, ಹೊಸ ತೆರಿಗೆ ದರಗಳನ್ನು ನಿರ್ಧರಿಸುವ ವಿಷಯದಲ್ಲಿ, ರಾಜ್ಯಗಳ ನಡುವೆ ರಾಜಕೀಯ ಮತ್ತು ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ತಲೆದೋರಿವೆ. ಹಾಗಾಗಿ, ತೆರಿಗೆ ಆಡಳಿತದ ವಿಷಯದ ಬಗ್ಗೆಯೂ ಕೇಂದ್ರ ಮತ್ತು ರಾಜ್ಯಗಳ ನಡುವಿನ ಅಭಿಪ್ರಾಯಗಳಲ್ಲಿ ಸಂಪೂರ್ಣ ಸಹಮತ ಮೂಡಿಲ್ಲ.

ಉಭಯ ನಿಯಂತ್ರಣ

ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ವಿಧಿಸುತ್ತಿರುವ ಸೆಂಟ್ರಲ್ ಎಕ್ಸೈಸ್, ಸೇವಾ ತೆ-ರಿಗೆ, ಕಸ್ಟಮ್ಸ್ ತೆರಿಗೆ, ಸಿಎಸ್‌ಟಿ, ವ್ಯಾಟ್, ಲಕ್ಷುರಿ ತೆರಿಗೆ, ಪ್ರವೇಶ ತೆರಿಗೆ ಮತ್ತು ಅನೇಕ ಸೆಸ್‌ಗಳು ಹಾಗೂ ಸರ್ಚಾರ್ಜ್‌ಗಳು ಈ ಎಲ್ಲವನ್ನೂ ಹೊಸ ಜಿಎಸ್‌ಟಿ ಒಳಗೊಂಡಿರುತ್ತದೆ. ಹಾಗಾಗಿ, ತೆರಿಗೆದಾರರ ಪರಿಶೀಲನೆ ಮತ್ತು ಮೇಲ್ವಿಚಾರಣೆಯ ಕೆಲಸ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವ್ಯಾಪ್ತಿಗೆ ಬರುತ್ತದೆ. ದೇಶದಲ್ಲಿ 63 ಲಕ್ಷ ವ್ಯಾಟ್ ಡೀಲರ್‌ಗಳಿದ್ದಾರೆ. ನಾಲ್ಕು ಲಕ್ಷ ಸೆಂಟ್ರಲ್ ಎಕ್ಸೈಸ್ ಡೀಲರ್‌ಗಳು ಮತ್ತು 26 ಲಕ್ಷ ಸೇವಾ ತೆರಿಗೆ ಕೊಡುವ ಸಂಸ್ಥೆಗಳಿವೆ. ಇವರಲ್ಲಿ ಹೆಚ್ಚಿನ ಮಂದಿ, ಈಗ, ರಾಜ್ಯಗಳ ತೆರಿಗೆ ಅಧಿಕಾರಿಗಳಿಗೆ ತಮ್ಮ ವಿವರಗಳನ್ನು ಸಲ್ಲಿಸುತ್ತಿದ್ದಾರೆ. ಜಿಎಸ್‌ಟಿ ತೆರಿಗೆ ವ್ಯವಸ್ಥೆ ಜಾರಿಗೆ ಬಂದ ನಂತರ, ಇಂತಹ ತೆರಿಗೆದಾರರ ನೋಂದಣಿ, ಲೆಕ್ಕ ಪರಿಶೋಧನೆ, ಮೇಲ್ವಿಚಾರಣೆ, ತೆರಿಗೆ ನಿರ್ಧಾರಣೆ, ತೆರಿಗೆ ಹಿಂತಿರುಗಿಸುವುದು ಮುಂತಾದುವುಗಳ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಅಧಿಕಾರವಿರುತ್ತದೆ. ಈ ಅಧಿಕಾರವನ್ನು ಒಂದು ವೇಳೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ನಿರ್ವಹಿಸಿದರೆ, ತೆರಿಗೆದಾರರಿಗೆ ಕಿರುಕುಳವೂ ಮತ್ತು ಅನವಶ್ಯಕ ಗೊಂದಲವೂ ಉಂಟಾಗುತ್ತದೆ.

ಆದ್ದರಿಂದ, 1.5 ಕೋಟಿ ರೂಪಾಯಿಗಳಿಗಿಂತ ಕಡಿಮೆ ವಹಿವಾಟು ನಡೆಸುವ ಸಂಸ್ಥೆಗಳ ಮೇಲ್ವಿಚಾರಣೆಯ ಹೊಣೆಯನ್ನು ರಾಜ್ಯಗಳಿಗೆ ವಹಿಸಬೇಕೆಂದು ರಾಜ್ಯ ಸರ್ಕಾರಗಳು ಒತ್ತಾಯಿಸಿವೆ. 1.5 ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ವಹಿವಾಟು ನಡೆಸುವ ಸಂಸ್ಥೆಗಳ ಮೇಲ್ವಿಚಾರಣೆಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮನಾಗಿ ಹಂಚಿಕೊಳ್ಳಬೇಕೆಂದೂ ಮತ್ತು ಈ ಹಂಚಿಕೆಯು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೊಂದಿರುವ ಸಿಬ್ಬಂದಿ ಸಂಖ್ಯೆ ಮತ್ತು ಆಡಳಿತಾತ್ಮಕ ಅಂಶಗಳಿಗೆ ಅನುಗುಣವಾಗಿರಬೇಕೆಂಬ ಸಲಹೆಗಳಿವೆ. ಆದರೆ, 1.5 ಕೋಟಿ ರೂಪಾಯಿಗಳಿಗಿಂತ ಕಡಿಮೆ ವಹಿವಾಟು ನಡೆಸುವ ಸಂಸ್ಥೆಗಳ ಮೇಲ್ವಿಚಾರಣೆಯನ್ನು ರಾಜ್ಯಗಳಿಗೆ ವಹಿಸಬೇಕೆಂಬ ರಾಜ್ಯಗಳ ನಿಲುವಿಗೆ ಕೇಂದ್ರ ಸರ್ಕಾರ ಸಮ್ಮತಿಸಿಲ್ಲ.

ಅಂತಾರಾಜ್ಯ ವ್ಯವಹಾರಗಳ ಮೇಲೆ ಕಣ್ಣು ಹಾಕಿದ ಕೇಂದ್ರ

ಜಿಎಸ್‌ಟಿ ತೆರಿಗೆ ವ್ಯವಸ್ಥೆ ಜಾರಿಗೆ ಬಂದ ನಂತರ, ಒಂದು ರಾಜ್ಯದಿಂದ ಇನ್ನೊಂದು ರಾಜ್ಯದ ನಡುವೆ ನಡೆಯುವ ವ್ಯವಹಾರಗಳ ಮೇಲಿನ ತೆರಿಗೆಗಳ ಮೇಲೆ ಕೇಂದ್ರ ಸರ್ಕಾರ ಕಣ್ಣು ಹಾಕಿದೆ. ಈವರೆಗೂ ಈ ವ್ಯವಹಾರಗಳ ಮೇಲಿನ ತೆರಿಗೆಗಳು ರಾಜ್ಯ ಸರ್ಕಾರಗಳಿಗೆ ಸೇರುತ್ತಿದ್ದವು. ತೆರಿಗೆಗಳ ಹೆಸರಿನಲ್ಲಾದ ಬದಲಾವಣೆಯ ಲಾಭವನ್ನು ಕೇಂದ್ರ ಸರ್ಕಾರ ಪಡೆಯಲು ಬಯಸುತ್ತಿದೆ. ಇದು, ರಾಜ್ಯಗಳಿಗೆ ಒಪ್ಪಲಾಗದ ವಿಷಯ.

ಜಿಎಸ್‌ಟಿ ಕೌನ್ಸಿಲ್‌ನಲ್ಲಿ ನಡೆದ ಸಭೆಯಲ್ಲಿ ಭೂಮಿಯ ವರ್ಗಾವಣೆಯ ಮೇಲಿನ ಸೇವಾ ತೆ-ರಿಗೆಗೆ ಸಂಬಂಧಿಸಿದಂತೆ ಕೇಂದ್ರವು ಮತ್ತೊಂದು ಹೊಸ ವಿವಾದ ಸೃಷ್ಟಿಸಿದೆ. ಭೂಮಿ ವರ್ಗಾವಣೆಗೆ ಸಂಬಂಧಿಸಿದ ಸ್ಟ್ಯಾಂಪ್ ಡ್ಯೂಟಿ ರಾಜ್ಯ ಸರ್ಕಾರಗಳ ವ್ಯಾಪ್ತಿಯಲ್ಲಿತ್ತು. ಈ ವಿಷಯವನ್ನು ಸಂವಿಧಾನ ತಿದ್ದುಪಡಿಯಿಂದ ಹೊರಗಿಡಲಾಗಿತ್ತು. ಕೇಂದ್ರ ಸರ್ಕಾರವು ಇಂತಹ ವಿಷಯಗಳನ್ನು ತೆರಿಗೆ ಹಂಚಿಕೆಯ ಪಾಲನ್ನು ಹಂಚಿಕೊಳ್ಳುವ ವಿಷಯಗಳೊಂದಿಗೆ ಚೌಕಾಶಿ ಮಾಡಲು ಉಪಯೋಗಿಸಿಕೊಳ್ಳುತ್ತಿದೆ.

ಉದ್ವಿಗ್ನ ಪರಿಸ್ಥಿತಿ

ಇಂತಹ ವಿಷಯಗಳ ಬಗ್ಗೆ ಜಿಎಸ್‌ಟಿ ಕೌನ್ಸಿಲ್‌ನಲ್ಲಿ ನಡೆಯುತ್ತಿರುವ ಹಗ್ಗ ಜಗ್ಗಾಟದಲ್ಲಿ ಬಿಜೆಪಿಯ ಅಧಿಕಾರದ ರಾಜ್ಯಗಳು ಕೇಂದ್ರ ಸರ್ಕಾರದತ್ತ ವಾಲುತ್ತಿವೆ. ಜಿಎಸ್‌ಟಿ ಕೌನ್ಸಿಲ್‌ನಲ್ಲಿ ಇಂತಹ ವಿವಾದಗಳನ್ನು ಸಹಮತದ ಮೂಲಕ ಇತ್ಯರ್ಥಪಡಿಕೊಳ್ಳಲು ಸಾಧ್ಯವಾಗದಿದ್ದರೆ, ವೋಟಿಂಗ್ ಮೂಲಕವಾಗಿ – ಶೇ. 75 ಮತಗಳ ಬಹುಮತದ ಆಧಾರದ ಮೇಲೆ ತೀರ್ಮಾನಿಸಬೇಕಾಗುತ್ತದೆ. ಆದರೆ, ಶೇ.33 ಮತಗಳನ್ನು ಹೊಂದಿರುವ ಕೇಂದ್ರ ಸರ್ಕಾರವು ಯಾವುದೇ ಪ್ರಸ್ತಾಪವನ್ನು ತಟಸ್ಥಗೊಳಿಸಬಹುದು. ಅದರೆ, ಜಿಎಸ್‌ಟಿ ಕೌನ್ಸಿಲ್‌ನಲ್ಲಿ ಒಂದು ನಿರ್ಣಯ ಅಂಗೀಕಾರಗೊಳ್ಳಲು, ಕೇಂದ್ರದ ಜೊತೆಯಲ್ಲಿ, 31ರಾಜ್ಯಗಳ ಪೈಕಿ ಕನಿಷ್ಠ 19 ರಾಜ್ಯಗಳು ಮತ ಹಾಕಿದಾಗ ಮಾತ್ರ ಸಾಧ್ಯವಾಗುತ್ತದೆ. ಇಲ್ಲಿಯವರೆಗೆ ಯಾವ ವಿಷಯವೂ ವೋಟಿಂಗ್ ಮೂಲಕ ನಿರ್ಣಯವಾಗಿಲ್ಲ ಮತ್ತು ಎಲ್ಲಾ ವಿವಾದಗಳೂ ಒಮ್ಮತದ ಮೂಲಕವೇ ನಿರ್ಣಯವಾಗಿವೆ. ವ್ಯಾಟ್ ಜಾರಿಯಾಗುವ ಮುನ್ನ ನೇಮಕಗೊಂಡಿದ್ದ ವಿಶೇಷಾಧಿಕಾರ ಉಳ್ಳ ರಾಜ್ಯ ಹಣಕಾಸು ಮಂತ್ರಿಗಳ ಸಮಿತಿಯ ಕಾಲದಿಂದಲೂ ಈ ಪರಂಪರೆ ಮುಂದುವರೆದಿದೆ. ಆದರೆ, ನೋಟು ರದ್ದತಿಯ ಹಿನ್ನೆಲೆಯಲ್ಲಿ ಉಂಟಾಗಿರುವ ಸಂದಿಗ್ಧ ಪರಿಸ್ಥಿತಿಯಲ್ಲಿ, ಕೊಡು ಕೊಳ್ಳುವ ಮನೋಭಾವವು ಜಿಎಸ್‌ಟಿ ಕೌನ್ಸಿಲ್‌ನಲ್ಲಿ ಮಾಯವಾಗಿದೆ.

ಅನಾಣ್ಯೀಕರಣದಿಂದಾಗಿ ಇಡೀ ಅರ್ಥ ವ್ಯವಸ್ಥೆಯಲ್ಲಿ ಹಾಗೂ ಇಡೀ ಸಮಾಜದಲ್ಲಿ ಒಂದು ಉದ್ವಿಗ್ನ ಪರಿಸ್ಥಿತಿ ಉಂಟಾಗಿದೆ. ರಾಜ್ಯ ಸರ್ಕಾರಗಳ ಆದಾಯ ಇಳಿದಿದೆ. ಸಹಕಾರಿ ವಲಯದ ಸಾಲ ವ್ಯವಸ್ಥೆ ಮತ್ತು ಸಹಕಾರಿ ಬ್ಯಾಂಕಿಂಗ್ ವ್ಯವಸ್ಥೆ ಹಲವು ರಾಜ್ಯಗಳಲ್ಲಿ ಕುಸಿದು ಬಿದ್ದಿದೆ. ಕೇರಳದ ಈ ಸಮಸ್ಯೆಯ ಬಗ್ಗೆ ಅಳಲು ತೋಡಿಕೊಳ್ಳಲು ಹೋದ ಕೇರಳದ ಮುಖ್ಯ ಮಂತ್ರಿ ಪಿನರಾಯಿ ವಿಜಯನ್ ಅವರಿಗೆ ಭೇಟಿಯ ಅವಕಾಶವನ್ನೂ ಪ್ರಧಾನ ಮಂತ್ರಿಗಳು ನೀಡಲಿಲ್ಲ. ರಾಜ್ಯ ಮತ್ತು ಕೇಂದ್ರದ ನಡುವಿನ ಸಂಬಂಧಗಳು ಒಕ್ಕೂಟ-ಸಹಕಾರಿ ತತ್ವಗಳ ಆಧಾರದಲ್ಲಿ ನೆಲೆಗೊಳಿಸಿರಬೇಕೆಂಬ ಉದಾತ್ತ ಮನೋಭಾವದ ಮಾತುಗಳು ಬರೀ ಆಡಂಬರದ ಮಾತುಗಳಾಗಿ ಉಳಿದಿವೆ. ಅನಾಣ್ಯೀಕರಣದ ಸಮಸ್ಯೆಯನ್ನು ಚರ್ಚಿಸಲು ಎಲ್ಲ ರಾಜ್ಯಗಳ ಮುಖ್ಯ ಮಂತ್ರಿಗಳ ಸಭೆಯನ್ನಾಗಲಿ ಅಥವಾ ರಾಜ್ಯ ಹಣಕಾಸು ಮಂತ್ರಿಗಳ ಸಭೆಯನ್ನಾಗಲಿ ಕರೆಯುವ ಸೌಜನ್ಯವನ್ನು ಕೇಂದ್ರ ಸರ್ಕಾರ ತೋರಿಸಿಲ್ಲ. ಈ ಪರಿಸ್ಥಿತಿಯಲ್ಲಿ, ಏಪ್ರಿಲ್ ಒಂದರಿಂದ ಜಿಎಸ್‌ಟಿ ಜಾರಿಯಾಗುವುದು ಅನುಮಾನ ಎಂದೇ ಹೇಳಬಹುದು.

ಸ್ಟೂಡೆಂಟ್... ರಾಜಕೀಯ ಸಿನೆಮಾದ ಮಾದರಿ... ಪುಟ 6 ರಿಂದ

ಕೇಳಿಸಿಕೊಳ್ಳುತ್ತಾಳೆ.

ಸಿರಿವಂತರು ತಮ್ಮ ಸುಖಕ್ಕಾಗಿ ಎಷ್ಟು ಜನ ಬಡವರು ಸತ್ತರೂ ಲೆಕ್ಕಿಸುವುದಿಲ್ಲ. ಅವರಿಗೆ ಭಾವನೆಗಳಿಲ್ಲ. ಬಡವರಿಗೆ ಭಾವನೆಗಳಿವೆ. ಆದರೆ ಅವರು ಭಾವೋದ್ವೇಗಕ್ಕೆ ಸಿಕ್ಕಿ ತಪ್ಪೊಪ್ಪಿಕೊಂಡುಬಿಡುತ್ತಾರೆ. ಅದೇ ಅವರ ದೌರ್ಬಲ್ಯ ಎಂದು ವಿದ್ಯಾರ್ಥಿಯ ಪೋಲೀಸರಿಗೆ ಶರಣಾಗಿ ಜೈಲು ಸೇರುತ್ತಾನೆ.

'ಸ್ಟೂಡೆಂಟ್' ಅರ್ಥಪೂರ್ಣತೆ

ದಾಸ್ತೋವೆಸ್ಕಿಯ ಕಾದಂಬರಿಯಲ್ಲಿರುವ ಕಥಾನಾಯಕನ ಅಪರಾಧ, ನೈತಿಕ ತಾಕಲಾಟದ ಮೂಲಕ ಅವನನ್ನು ಪಶ್ಚಾತ್ತಾಪಕ್ಕೆ ಕೊಂಡೊಯ್ಯುತ್ತದೆ. ಆದರೆ 'ಸ್ಟೂಡೆಂಟ್' ಸಿನೆಮಾದ ಕಥಾನಾಯಕನ ಅಪರಾಧ ಹಾಗಾಗದೆ ಅವನು ಪ್ರತಿನಿಧಿಸುವ ಬಡವರ ಭಾವನೆಗಳತ್ತ ಬೊಟ್ಟು ಮಾಡುತ್ತದೆ. ಬಡವರು ತಮ್ಮ ಭಾವನೆಗಳ ಮಾನವೀಯ ಗುಣದಿಂದಾಗಿಯೇ ದುರ್ಬಲರಾಗಿ ಸಿರಿವಂತರ ನಿರ್ಭಾವದ ಅಮಾನವೀಯತೆಯ ಮುಂದೆ ಸೋಲುತ್ತಾರೆ ಎಂಬ ದುರಂತ ಸ್ಟೂಡೆಂಟ್ ಸಿನೆಮಾ ಹೊಳೆಸುವ ಬಹಳ ಅರ್ಥಪೂರ್ಣವಾದ ಅಂಶ. 'ಮಾನವೀಯತೆ, ದಯಾಪರತೆ, ಸಹೋದರತೆ, ಪ್ರಜಾತಾಂತ್ರಿಕತೆ ಮುಂತಾದ ಜನಪರ ಗುಣಗಳು ಮನೆಮಾಡಿರುವುದು ಬಂಡವಳಿಗರಲ್ಲೇ, ಸಮಾಜವಾದಿಗಳಲ್ಲಿ ಅಲ್ಲ' ಎಂಬ ಜನಜನಿತ ತಪ್ಪುಗ್ರಹಿಕೆಯನ್ನು ಸಿನೆಮಾ ಬಯಲು ಮಾಡುತ್ತದೆ. ಎಡಪಂಥೀಯರು, ಸಮಾಜವಾದಿಗಳು, ಪ್ರಗತಿಪರರು ನಿಜವಾದ ಅರ್ಥದಲ್ಲಿ ಮಾನವೀಯತೆ ಮತ್ತು ಪ್ರಜಾತಾಂತ್ರಿಕತೆಯಲ್ಲಿ ನಂಬಿಕೆ ಇಡುವುದರಿಂದಲೇ ಸಹಕಾರ, ಸಹಜೀವನ, ಸಂಪತ್ತಿನ ನ್ಯಾಯವಾದ ಹಂಚಿಕೆಯ ಮೂಲಕ ಕೂಡಿಬಾಳುವ ಸಾಮಾಜಿಕ ಜೀವನವನ್ನು, ಅದನ್ನು ಸಾಧ್ಯಮಾಡುವ ಸಮಾಜವಾದೀ ರಾಜಕೀಯ ದೃಷ್ಟಿಕೋನವನ್ನು ಅವರು ಪ್ರತಿಪಾದಿಸುತ್ತಾರೆ. ಪ್ರಾಣಿ ಸಹಜ ಪ್ರವೃತ್ತಿಗಳಾದ ಸ್ಪರ್ಧೆ, ಮೇಲಾಟ, ಕ್ರೌರ್ಯಗಳನ್ನು 'ಮನುಷ್ಯರ ನಿಸರ್ಗದತ್ತ ಸಹಜ ಗುಣಗಳೆಂದು ನಂಬುವ ಬಂಡವಾಳಶಾಹಿಗಳು ಸ್ವಾರ್ಥ, ಸಹಜೀವಿಗಳ ಸುಖ-ನೆಮ್ಮದಿಗಳ ಬಗ್ಗೆ ತಿರಸ್ಕಾರ ಮತ್ತು ನಿರ್ಭಾವದ, ಅಮಾನವೀಯವಾದ ಸಾಮಾಜಿಕ ವ್ಯವಸ್ಥೆಯನ್ನೇ ಪ್ರಜಾತಂತ್ರವೆಂದು, ವ್ಯಕ್ತಿ ಸ್ವಾತಂತ್ರ್ಯವೆಂದು ಗಟ್ಟಿಯಾಗಿ ಪ್ರತಿಪಾದಿಸುತ್ತಾರೆ.

2012 ರಲ್ಲಿ ತಯಾರಾಗಿ ಕಾನ್ ಚಿತ್ರೋತ್ಸವದಲ್ಲಿ ಪ್ರದರ್ಶಿತಗೊಂಡ 'ಸ್ಟೂಡೆ-ಂಟ್' ಸಿನೆಮಾ 'ಮಿನಿಮಲ್' ವಿಧಾನದ ಚಿತ್ರಣ, ಮಾತು, ದೃಶ್ಯಗಳ ಮೂಲಕ ನೈಜ ಮಾನವೀಯ ಸಮಾಜದ ರಾಜಕೀಯ ದೃಷ್ಟಿಕೋನವನ್ನು, ಮಂಕುಹಿಡಿದಂತೆ ತೋರುವ ಪಾತ್ರ, ಆವರಣ ಮತ್ತು ಘಟನೆಗಳನ್ನು ಸಿನಿಮಾ ತಯಾರಿಕೆ-ಯ ಚೌಕಟ್ಟಿನೊಳಗಿಂದ ಮೂಡುವ ಚೌಕಟ್ಟಿನ ಮೂಲಕ ನೈಜ ಸಿನೆಮಾ ಸೌಂದರ್ಯಾತ್ಮಕತೆಯನ್ನು ಸಾಧಿಸುತ್ತದೆ. ಸಿನೆಮಾದ ಅಂತರ್ಯವಿರುವುದೇ ಅದು ಮಾತುಗಳಲ್ಲಿ ಹೇಳುವುದಕ್ಕಿಂತ ಮಾತಿಲ್ಲದೆ ಹೇಳುವ ದೃಶ್ಯವಿನ್ಯಾಸಗಳಲ್ಲಿ. ಬಾಯಿ ಬಿಟ್ಟು ಹೇಳದಿರುವ ಮಾತುಗಳಲ್ಲಿ, ವಿವರಗಳಿಗೆ ಹೋಗದೆ ಕೇವಲ ಸೂಚನೆಗಳಲ್ಲಿ ಮುಕ್ತಾಯವಾಗುವ ತುಣುಕು ದೃಶ್ಯಗಳಲ್ಲಿ ನಿಜವಾದ ಸಿನೆಮಾ ಮೈದಾಳುತ್ತದೆ. ಸಿನಿಮಾದ ಸಾಮಾಜಿಕ ಉದ್ದೇಶಗಳ ಬಗ್ಗೆ ಯಾ-ರೋ ಒಬ್ಬ ನಿರ್ದೇಶಕನ ಬಾಯಲ್ಲಿ ಹೇಳಿಸುವ ಬದಲು ದರಷಾನ್ ಒಮಿರ್ಬಾಯೇವ್ ತನ್ನ ಸಿನೆಮಾದಲ್ಲಿ ತಾನೇ ಪಾತ್ರವೂ ಆಗಿ, ಸಂದರ್ಶಕಿಯ ಪ್ರಶ್ನೆಗೆ 'ಸಿನೆಮಾ ಕಾಲ ಕಳೆಯಲು' ಎಂದು ಉತ್ತರಿಸುವ ಮೂಲಕ ಸ್ವವ್ಯಂಗ್ಯವನ್ನು ಬಳಸುತ್ತಾನೆ. ಅದನ್ನು ತಿರುವುಮುರುವು ಮಾಡಿ ಮಂಡಿಸುವ ಸಿನಿಮಾಕ್ಕೆ ಗಂಭೀರ ಉದ್ದೇಶವಿದೆ ಎಂದು ಕೃತಿರೂಪದಲ್ಲಿ ಮಂಡಿಸುವ 'ಸ್ಟೂಡೆಂಟ್' ನೈಜ ಸ್ವರೂಪದ ಕಲಾತ್ಮಕವಾದ ಗಟ್ಟಿ ಸಿನೆಮಾ.

ಕೇರಳದ ಬಗ್ಗೆ ಅಸಂಪೂರ್ಣವಾದ ಸುದ್ದಿಗಳು ಬರುತ್ತಿವೆ, ಬರಲಿವೆ, ಎಚ್ಚರದಿಂದಿರಿ-ಪಿಣರಾಯಿ ವಿಜಯನ್

ಕೇರಳದಲ್ಲಿ ಲೇಖಕರ ಬಂಧನ, ರಾಜದ್ರೋಹದ ಕೇಸ್ ಇತ್ಯಾದಿ ಸುದ್ದಿಗಳು ವಾರ್ತ್ಯವಾಗಳಲ್ಲಿ ಬರುತ್ತಿವೆ. ಕಳೆದ ವಾರ ನಾದಿರ್ ಎಂಬ ಯುವ ಲೇಖಕನನ್ನು ಬಂಧಿಸಲಾಗಿದೆ ಹಾಗೂ ಪ್ರಖ್ಯಾತ ಲೇಖಕ, ಚಿತ್ರ ನಿರ್ದೇಶಕ ಕಮಲ್ ಸಿ ಚವರ ಅವರ ಮೇಲೆ ರಾಷ್ಟ್ರಗೀತೆಗೆ ಅವಮಾನ ಮಾಡಿದರೆಂದು ರಾಜದ್ರೋಹದ ಕೇಸ್ ಹಾಕಲಾಗಿದೆ ಎಂಬ ಎರಡು ಸುದ್ದಿಗಳ ಬಗ್ಗೆ ಗೃಹಖಾತೆಯನ್ನು ನೋಡಿಕೊಳ್ಳುತ್ತಿರುವ ರಾಜ್ಯದ ಮುಖ್ಯಮಂತ್ರಿಗಳು ಹಾಗೂ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕೊಡಿಯೇರಿ ಬಾಲಕೃಷ್ಣನ್ ಸ್ಪಷ್ಟೀಕರಣ ನೀಡಿದ್ದಾರೆ. ಎಲ್‌ಡಿಎಫ್ ಸರಕಾರ ರಾಜದ್ರೋಹದ ಕೇಸುಗಳನ್ನು ಹಾಕುವುದಿಲ್ಲ ಮತ್ತು ಭಯೋತ್ಪಾದನೆ ಅಡಗಿಸಲು ಎಂದು ತಂದ ಯುಎಪಿಎ ಕಾನೂನನ್ನು ಪೋಲೀಸರು ದುರುಪಯೋಗ ಪಡಿಸಿಕೊಳ್ಳಲು ಅವಕಾಶ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ನಾದಿರ್ ಮೇಲೆ ಆತನಿಗೆ ಮಾವೋವಾದಿಗಳ ಜೊತೆಗೆ ಸಂಪರ್ಕ ಇದೆ ಎಂದು ಕಳೆದ ಮಾರ್ಚ್ ತಿಂಗಳಲ್ಲಿ ಕೇಸು ದಾಖಲಾಗಿತ್ತು. ಆಗ ಯುಡಿಎಫ್ ಸರಕಾರ ಇತ್ತು. ಭಯೋತ್ಪಾದನೆ ನಿಗ್ರಹಕ್ಕೆ ಎಂದಿರುವ ಯುಎಪಿಎ ಕಾನೂನಿನ ಅಡಿಯಲ್ಲಿ ಆ ಕೇಸು ದಾಖಲಾಗಿತ್ತು. ಆ ಕೇಸಿನ ಅಡಿಯಲ್ಲಿ ಆತನನ್ನು ಪೋಲೀಸರು ಬಂಧಿಸಿದರು ಎಂದು ವರದಿಯಾಗಿತ್ತು. ಈಗ ಅಂತಹ ಸಂಪರ್ಕ ಏನೂ ಇಲ್ಲ ಎಂದು ಆತನನ್ನು ಬಿಡುಗಡೆ ಮಾಡಲಾಗಿದೆ ಎಂದೂ ವರದಿಯಾಯಿತು.

ಈ ರೀತಿ ಇತರ ಕೆಲವು ಕೇಸುಗಳಲ್ಲೂ ಈ ಕಾಯ್ದೆಯ ದುರುಪಯೋಗ ಈಗ ಸರಕಾರದ ಗಮನಕ್ಕೆ ಬಂದಿದೆ. ಕೆಲವು ಪೋಲೀಸ್ ಅಧಿಕಾರಿಗಳು ಪ್ರಸಕ್ತ ಸರಕಾರದ ಪೋಲೀಸ್ ಧೋರಣೆಗೆ ವ್ಯತಿರಿಕ್ತವಾಗಿ ವರ್ತಿಸುತ್ತಿದ್ದಾರೆ, ಪೋಲೀಸ್ ಕಾಯ್ದೆಯನ್ನು ಉಲ್ಲಂಘಿಸುತ್ತಿದ್ದಾರೆ, ಅವರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಕೊಡಿಯೇರಿ ಬಾಲಕೃಷ್ಣನ್ ಹೇಳಿದ್ದಾರೆ.

ಕಮಲ್ ಅವರ ಮೇಲೆ ಹಾಕಿರುವ ರಾಜದ್ರೋಹದ ಕೇಸನ್ನು ರದ್ದು ಮಾಡಬೇಕು ಎಂದೂ ಅವರು ಹೇಳಿದ್ದಾರೆ.

ಫೇಸ್‌ಬುಕ್‌ನಲ್ಲಿ ರಾಷ್ಟ್ರಗೀತೆಯ ವಿರುದ್ಧ ಬರೆದಿದ್ದಾರೆ ಎಂಬ ದೂರಿನ ಮೇಲೆ ಅವರ ಮೇಲೆ ರಾಜದ್ರೋಹದ ಕೇಸ್ ವಿಷಯದಲ್ಲಿ ಸ್ವತಃ ಮುಖ್ಯಮಂತ್ರಿಗಳು ಮಧ್ಯಪ್ರವೇಶಿಸಿದ್ದಾರೆ. ಸಿಪಿಐ(ಎಂ) ರಾಜದ್ರೋಹ ಕುರಿತಾದ ಸೆಕ್ಷನ್ 124(ಎ) ಬಳಕೆಯನ್ನು ವಿರೋಧಿಸುತ್ತದೆ, ಕೇರಳದಲ್ಲಿ ಈಗ ಯಾವ ರಾಜದ್ರೋಹದ ಕೇಸೂ ಇಲ್ಲ ಎಂದು ಅವರು ಹೇಳಿದ್ದಾರೆ.

ಈ ಕೇಸಿಗೆ ಇನ್ನೊಂದು ಆಯಾಮವೂ ಇದೆ ಎಂದು ಅವರು ಹೇಳಿದ್ದಾರೆ. ದೇಶಾದ್ಯಂತ ಕಳೆದ ಒಂದು ತಿಂಗಳಿಂದ ಜನಗಳು ಅನಾಣ್ಯೀಕರಣದಿಂದಾಗಿ ನರಳುತ್ತಿದ್ದಾರೆ. ಆದರೆ ಬಹಳಷ್ಟು ಕಡೆಗಳಲ್ಲಿ ಅದಕ್ಕೆ ಸಾಮೂಹಿಕ ಪ್ರತಿಭಟನೆಗಳು ಬಂದಿಲ್ಲ. ಆಮ್ ಆದ್ಮಿ ಪಕ್ಷ ಮತ್ತು ಟಿಎಂಸಿ ಮುಖಂಡರು ಈ ಬಗ್ಗೆ ಹೇಳಿಕೆಗಳನ್ನು,ಟ್ವೀಟ್‌ಗಳನ್ನು ಕೊಡುತ್ತಿದ್ದರೂ ಸಾಮೂಹಿಕ ಪ್ರತಿಭಟನೆಗಳನ್ನು ನಡೆಸಿಲ್ಲ.

ಆದರೆ ಕೇರಳದಲ್ಲಿ ಮಾತ್ರ ಎಡಪಕ್ಷಗಳು ಮತ್ತು ರಾಜ್ಯ ಸರಕಾರ ಜನಗಳನ್ನು ಪ್ರತಿಭಟನೆಗಳಿಗೆ ದೊಡ್ಡ ಸಂಖ್ಯೆಯಲ್ಲಿ ಅಣಿನೆರೆಸುತ್ತಿವೆ.

ಅನಾಣ್ಯೀಕರಣದ ಮೊದಲೂ ಕೂಡ ಆರೆಸ್ಸೆಸ್-ಬಿಜೆಪಿ ಕೇರಳದ ಮೇಲೆ ವಿಶೇಷ ಗುರಿ ಇಟ್ಟಿದ್ದು ಅದಕ್ಕೆ ಕಾರಣ ಎಲ್ಲರಿಗೂ ಗೊತ್ತಿದೆ. ಇವು ಕಷ್ಟದ ದಿನಗಳು. ಮುಂದಿನ ದಿನಗಲಲಿ ಕೇರಳದ ಬಗ್ಗೆ ಎಲ್ಲರ ಈತಿಯ ಕತೆಗಳೂ ಬರಲಿವೆ. ಆದ್ದರಿಂದ ಅಸಂಪೂರ್ಣವಾದ, ದಾರಿತಪ್ಪಿಸುವ ಸುದ್ದಿಗಳ ಬಗ್ಗೆ ಎಚ್ಚರದಿಂದಿರಿ ಎಂದು ಅವರು ಹೇಳಿದ್ದಾರೆ.

ಸನ್ನಿವೇಶವನ್ನು ಕೋಮುಗ್ರಸ್ತಗೊಳಿಸಲು ಪ್ರಯತ್ನಿಸುತ್ತಿರುವ ಸಂಘ ಪರಿವಾರ ದುರುದ್ದೇಶದಿಂದಲೇ 'ಕಮಲುದ್ದೀನ್' ಎಂದೇ ಹೇಳುತ್ತಿವೆ. ಕಮಲ್ ಅವರಿಗೆ ಸಂಘ ಪರಿವಾರದ ಸರ್ಟಿಫಿಕೇಟ್ ಏನೂ ಬೇಕಿಲ್ಲ ಎಂದು ಕೋಝಿಕೋಡ್‌ನಲ್ಲಿ ಸಾರ್ವಜನಿಕ ಸಭೆಯೊಂದರಲ್ಲಿ ಮುಖ್ಯಮಂತ್ರಿಗಳು ಹೇಳಿದ್ದಾರೆ.

ಈ ನಡುವೆ ರಾಜ್ಯದ ಡಿಜಿಪಿ ಲೋಕನಾಥ ಬೆಹ್ರ ನಾದಿರ್ ಅವರನ್ನು ಬಂಧಿಸಲಾಗಿಲ್ಲ, ಕಮಲ್ ಸಿ ಚವ್ರ ಅವರ ಮೇಲೆ ರಾಜದ್ರೋಹದ ಕೇಸ್ ನಿಲ್ಲುವುದಿಲ್ಲ, ಯುಎಪಿಎ ಬಳಸಿಲ್ಲ ಎಂದು ಹೇಳಿದ್ದಾರೆ.

ರಾಜ್ಯಗಳ ಸುತ್ತ



ಭಾರತಿ ಗಾಂವ್ಕರ್

ಕೇರಳ: 2008ರ ಕೊಲೆ ಮೊಕದ್ದಮೆಯಲ್ಲಿ 13 ಆರೆಸ್ಸೆಸ್ ಕಾರ್ಯಕರ್ತರಿಗೆ ಜೈಲು ಶಿಕ್ಷೆ

ಎಪ್ರಿಲ್ 1 2008 ರಂದು ಡಿವೈಎಫ್‌ಐ ಕಾರ್ಯಕರ್ತ ವಿಷ್ಣುವಿನ ಕೊಲೆಯ ಮೊಕದ್ದಮೆಯಲ್ಲಿ ಆಪಾದಿತರಾಗಿದ್ದ ಆರೆಸ್ಸೆಸ್ ಕಾರ್ಯಕರ್ತರಲ್ಲಿ 11 ಮಂದಿಗೆ ತಿರುವನಂತಪುರದ ಅಡಿಶನಲ್ ಸೆಶನ್ಸ್ ನ್ಯಾಯಾಲಯ ದುಪ್ಪಟ್ಟು ಜೀವಾವಧಿ ಜೈಲು ಶಿಕ್ಷೆ ವಿಧಿಸಿದೆ. ಇನ್ನಿಬ್ಬರಲ್ಲಿ ಒಬ್ಬನಿಗೆ ಸಾದಾ ಜೀವಾವಧಿ ಶಿಕ್ಷೆ ಮತ್ತು ಮತ್ತೊಬ್ಬನಿಗೆ ಮೂರು ವರ್ಷಗಳ ಜೈಲುಶಿಕ್ಷೆ ವಿಧಿಸಲಾಗಿದೆ ಎಂದು ವರದಿಯಾಗಿದೆ.

ಈ ಆರೋಪಿಗಳು ತಲ್ವಾರ್, ಕಬ್ಬಿಣದ ಸಲಾಕೆ, ಮತ್ತು ಇನ್ನಿತರ ಆಯುಧಗಳಿಂದ ವಿಷ್ಣು ಅವರ ಮೇಲೆ ಆಕ್ರಮಣ ನಡೆಸಿ ಕೊಲೆಗೈದಿದಿದ್ದಾರೆ ಎಂಬ ಆರೋಪ ಸಾಬೀತಾಗಿದೆ. ಮೊಕದ್ದಮ್ಮೆಯಲ್ಲಿ ಒಟ್ಟು 16 ಜನ ಆರೋಪಿಗಳಿದ್ದರು. ಅದರಲ್ಲಿ ಒಬ್ಬಾತ 2008ರಲ್ಲಿ ಮೃತನಾದ, ಇನ್ನೊಬ್ಬ ತಲೆಮರೆಸಿಕೊಂಡಿದ್ದಾನೆ. ಮತ್ತೊಬ್ಬ ಈಗ ಖುಲಾಸೆಯಾಗಿದ್ದಾನೆ.

ಡಿ. 29: ಅನಾಣ್ಯೀಕರಣ ಪ್ರತಿಭಟಿಸಿ ಕೇರಳದಲ್ಲಿ 700ಕಿ.ಮೀ. ಮಾನವ ಸರಪಳಿ

ಕೇರಳದ ಸಹಕಾರಿ ವಲಯವನ್ನು ಕುಂಠಿತಗೊಳಿಸಿರುವ ಅನಾಣ್ಯೀಕರಣ ಭರದ ವಿರುದ್ಧ ಪ್ರತಿಭಟನೆಯಾಗಿ ಡಿಸೆಂಬರ್29ರಂದು 700 ಕಿ.ಮೀ. ಉದ್ದದ ಮಾನವ ಸರಪಳಿಯನ್ನು ರಾಜ್ಯದ ಎಲ್‌ಡಿಎಫ್ ಸಂಗಟಿಸುತ್ತಿದೆ. ಇದು ದಕ್ಷಿಣದಲ್ಲಿ ತಿರುವನಂತಪುರದ ರಾಜಭವನದಿಂದ ರಾಜ್ಯದ ಉತ್ತರ ತುದಿಯಲ್ಲಿರುವ ಕಾಸರಗೋಡಿನ ವರೆಗೆ ಇರುತ್ತದೆ.

ಅಂದು ಸಂಜೆ ನಾಲ್ಕು ಗಂಟೆಯ ಹೊತ್ತಿಗೆ ಎಲ್‌ಡಿಎಫ್ ಕಾರ್ಯಕರ್ತರು ಮತ್ತು ಬೆಂಬಲಿಗರು ತಮಗೆ ನಿಗದಿ ಪಡಿಸಿದ ಸ್ಥಳಗಳಲ್ಲಿ ಬಂದು ಸೇರುತ್ತಾರೆ. ಐದು ಗಂಟೆಗೆ ಸರಿಯಾಗಿ ಕೈಗಳನ್ನು ಜೋಡಿಸಿ ಸರಪಳಿ ನಿರ್ಮಿಸುತ್ತಾರೆ ಎಂದು ಸಿಪಿಐ(ಎಂ) ಕೇರಳ ರಾಜ್ಯಸಮಿತಿಯ ಹೇಳಿಕೆ ತಿಳಿಸಿದೆ.

ಈ ಮಾನವ ಸರಪಳಿ ಕೇರಳದ ದಕ್ಷಿಣ ಭಾಗ ಮತ್ತು ಉತ್ತರ ಭಾಗವನ್ನು ಜೋಡಿಸುವ ರಾಷ್ಟ್ರೀಯ ಹೆದ್ದಾರಿಯ ಉದ್ದವೂ ನಡೆಯುತ್ತಿದ್ದು, ಈ ಹೆದ್ದಾರಿಯಲ್ಲಿಲ್ಲದ ದಕ್ಷಿಣದ ಜಿಲ್ಲೆಗಳ ಕಾರ್ಯಕರ್ತರು ಅಲಪುಳಕ್ಕೆ ಬಂದು ಸೇರಿಕೊಳ್ಳುತ್ತಾರೆ. ಇಡುಕ್ಕಿ ಮತ್ತು ವೈನಾಡ್ ಜಿಲ್ಲೆಗಳಲ್ಲಿ ಅದೇ ವೇಳೆಗೆ ಪ್ರತ್ಯೇಕ ಪ್ರತಿಭಟನೆಗಳು ನಡೆಯುತ್ತವೆ. ಈ ಬೃಹತ್ ಕಾರ್ಯಕ್ರಮ ಕೇಂದ್ರ ಸರಕಾರದ ತಪ್ಪು ಧೋರಣೆಗಳ ವಿರುದ್ಧ ಪ್ರತಿಭಟನೆಯನ್ನು ದಾಖಲಿಸಲಿಕ್ಕಾಗಿ ಎಂದು ಹೇಳಿಕೆ ತಿಳಿಸಿದೆ.

ಚುನಾವಣಾ ಭರವಸೆಗಳನ್ನು ಈಡೇರಿಸಿದ್ದೇರೆಂದು ಸಾಕ್ಷಿ ತೋರಿಸಿ ಪಾದಯಾತ್ರೆ ನಿಲ್ಲಿಸುತ್ತೇವೆ-ತೆಲಂಗಾಣ ಮುಖ್ಯಮಂತ್ರಿಗೆ ಸಿಪಿಐ(ಎಂ) ಸವಾಲು

ತೆಲಂಗಾಣಾ ಮುಖ್ಯಮಂತ್ರಿಗಳು ಚುನಾವಣಾ ಪ್ರಣಾಳಿಕೆಯಲ್ಲಿ ಅವರ ಪಕ್ಷ ಟಿಆರ್‌ಎಸ್ ನೀಡಿದ ಭರವಸೆಗಳನ್ನು ಈಡೇರಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿರುವದನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳಾದ ತಮ್ಮಿನೇನಿ ವೀರಭದ್ರಂ ತೀಕ್ಷ್ಣವಾಗಿ ಖಂಡಿಸಿದ್ದಾರೆ. ಬಡಜನರಿಗಾಗಿ ಮನೆ ನಿರ್ಮಿಸುವದರ ಬದಲು ಹೈದರಾಬಾದ್‌ನಲ್ಲಿ 50 ಕೋಟಿ ರೂಪಾಯಿಸಾರ್ವಜನಿಕ ಹಣದ ವೆಚ್ಚದಲ್ಲಿ 150 ಕೊಠಡಿಗಳಿರುವ ಹೊಸ ಕ್ಯಾಂಪ್ ಕಚೇರಿಯನ್ನು ನಿರ್ಮಿಸಿದ್ದಾರೆಂದು ಚಾಟಿ ಬೀಸಿದರು.

ಆದಿಲಾಬಾದ್ ಜಿಲ್ಲೆಯಲ್ಲಿ ಮಹಾಜನ ಪಾದಯಾತ್ರೆಯ ಭಾಗವಾಗಿ ಆಯೋಜಿಸಿದ್ದ ಬಹಿರಂಗ ಸಭೆಯಲ್ಲಿ ಮಾತನಾಡುತ್ತಿದ್ದ ಅವರು ಟಿಆರ್‌ಎಸ್ ಸರಕಾರ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ ಭರವಸೆಗಳನ್ನು ಈಡೇರಿಸಿರುವದಕ್ಕೆ ದಾಖಲೆ ನೀಡಲಿ ನಾವು ಪಾದಯಾತ್ರೆಯನ್ನು ನಿಲ್ಲಿಸುತ್ತೇವೆ ಎಂದು ಸವಾಲೆಸೆದರು. ಎಲ್ಲ ಎಡ ಪಕ್ಷಗಳು ಒಟ್ಟು ಸೇರಿ ಸರಕಾರದ ಜನ ವಿರೋಧೀ ನೀತಿಗಳನ್ನು ವಿರೋಧಿಸಲು ಸಂಘಟಿತರಾಗಿ ಕೈ ಜೋಡಿಸಬೇಕೆಂದು ಕರೆ ನೀಡಿದರು.

ಬಡಜನರಿಗೆ 2 ಕೊಟಡಿಗಳಿರುವ ಮನೆ, ದಲಿತರು ಮತ್ತು ತುಳಿತಕ್ಕೆ ಒಳಗಾದ ವರ್ಗದ ಜನರಿಗೆ 3 ಎಕರೆ ಭೂಮಿ ಇವೆಲ್ಲವನ್ನು ಈಡೇರಿಸಲು ಸರಕಾರ ವಿಫಲವಾಗಿದೆ. ಬಿಸಿಯೂಟ ನೌಕರರಿಗೆ ವೇತನ ನೀಡಿಲ್ಲ, ಆಶಾ ಕಾರ್ಯಕರ್ತೆಯರು, ಅಂಗನವಾಡೀ ನೌಕರರು, ತಮ್ಮ ವೇತನವನ್ನು ಪಡೆಯಲು ಬಹಳ ದಿನಗಳಿಂದ ಹೋರಾಟ ನಡೆಸುತ್ತಿದ್ದಾರೆ. ಕೆಆರ್‌ಚಂದ್ರಶೇಖರ್ ಸರಕಾರ ಮುಷ್ಕರಗಳೆಂದರೆ ಭಯ, ಹಾಗಾಗಿ ತೀರಾ ತುಳಿತಕ್ಕೆ ಒಳಗಾಗಿರುವ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಈ ಕಾರ್ಮಿಕರಲ್ಲಿ ಭಯ ಹುಟ್ಟಿಸುವ ಪ್ರಯತ್ನ ಮಾಡುತ್ತಿದೆ ಎಂದರು.

ಸಿಪಿಐ(ಎಂ) ನೇತೃತ್ವದ ಪಾದಯಾತ್ರೆಯನ್ನು ಹೀಗಳೆಯುತ್ತಿರುವ ಮುಖ್ಯಮಂತ್ರಿಗಳು ತೆಲಂಗಾಣ ಅವರ ಉಂಬಳಿ ಅಲ್ಲ, 4000 ಕಮುನಿಸ್ಟರು ಈ ಪ್ರದೇಶವನ್ನು ನಿಜಾಮನ ಪಾಳೆಯಗಾರೀ ಆಳ್ವಿಕೆಯಿಂದ ವಿಮೋಚನೆ ಮಾಡಲು ಪ್ರಾಣಾರ್ಪಣೆ ಮಾಡಿದ್ದಾರೆ ಎಂದು ನೆನಪಿಸಿದ ತಮ್ಮಿನೇನಿಯವರು ಬರಹಗಾರರು, ಬುದ್ಧಿಜೀವಿಗಳು, ದಮನಿತ ಜಾತಿಗಳ ಸಂಘಟನೆಗಳು ಎಲ್ಲರನ್ನೂ ಒಳಗೊಳ್ಳುವ ಬೆಳವಣಿಗೆಯ, ಸರಕಾರದ ಸ್ಕೀಮುಗಳು ಮತ್ತು ಕಾರ್ಯಕ್ರಮಗಳ ಫಲ 93% ಜನರಿಗೆ ಸಿಗುವಂತೆ ಮಾಡುವ ಉದ್ದೇಶ ಸಾಧನೆಗೆ ಒಂದು ವೇದಿಕೆಯ ಮೇಲೆ ಒಂದುಗೂಡಬೇಕು ಎಂದು ಕರೆ ನೀಡಿದರು.

ವಿಜಯವಾಡದಲ್ಲಿ 'ಮಾಕಿನೇನಿ ಬಸವಪುನ್ನಯ್ಯ ವಿಜ್ಞಾನ ಕೇಂದ್ರಂ' ಉದ್ಘಾಟನೆ

ಆಂಧ್ರಪ್ರದೇಶದ ಪ್ರಮುಖ ನಗರ ವಿಜಯವಾಡದಲ್ಲಿ 'ಮಾಕಿನೇನಿ ಬಸವಪುನ್ನಯ್ಯ ವಿಜ್ಞಾನ ಕೇಂದ್ರಂ' ಡಿಸೆಂಬರ್ 13ರಂದು ಉದ್ಘಾಟನೆಯಾಗಿದೆ. ಇದು ಜನಗಳ ನಡುವೆ ಐಕ್ಯತೆ ಮೂಡಿಸುವ ಮತ್ತು ಕಲೆ ಮತ್ತು ಸಂಸ್ಕೃತಿಯನ್ನು ಬೆಳೆಸುವ ಕೇಂದ್ರವಾಗುವ ಆಶಯವನ್ನು ಹೊಂದಿದೆ. ಇದರಲ್ಲಿರುವ 650 ಸೀಟುಗಳ ಸಭಾಂಗಣ ಎಲ್ಲರಿಗೂ ತಲುಪುವಂತಿದೆ. ಸಾರ್ವಜನಿಕರಿಗೆ ಸಂಬಂಧಪಟ್ಟ ಚರ್ಚೆಗಳು, ವಿಚಾರ ಸಂಕಿರಣಗಳು ಮತ್ತು ಸಂವಾದಗಳಿಗೆ ಕೇಂದ್ರವಾಗಲಿರುವ ಈ ಭವನದಲ್ಲಿ ಒಂದು ಬೃಹತ್ ಗ್ರಂಥಾಲಯವೂ ಇದೆ.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಈ ಭವನವನ್ನು ಉದ್ಘಾಟಿಸಿದರು. ನಂತರ ನಡೆದ ಸಮಾರಂಭದಲ್ಲಿ ಅವರು ಭಾರತದ ಕಾರ್ಮಿಕ ವರ್ಗದ ಮಹಾನ್ ನಾಯಕ ಎಂ.ಬಸವಪುನ್ನಯ್ಯನವರ ಕೊಡುಗೆಗಳನ್ನು ಸ್ಮರಿಸಿಕೊಂಡರು.





ಆಂಧ್ರಪ್ರದೇಶ: ಸಾರ್ವಜನಿಕ ಸೌಲಭ್ಯಗಳ ಖಾಸಗೀಕರಣ ವಿಚಾರ ಹಿಂತೆಗೆದುಕೊಳ್ಳದಿದ್ದರೆ ವಿಧಾನಸಭೆ ಮುತ್ತಿಗೆ: ಸಿಪಿಐ(ಎಂ) ಎಚ್ಚರಿಕೆ

ನಾಯ್ಡು ಸರಕಾರವು ನಗರಪ್ರದೇಶಗಳ ಸ್ಥಳೀಯ ಸಂಸ್ಥೆಗಳಲ್ಲಿ ನಾಗರೀಕ ಮೂಲಭೂತ ಸೌಕರ್ಯ ಕಾರ್ಯಗಳನ್ನು ಖಾಸಗೀಕರಿಸುವ ಯೋಚನೆಯನ್ನು ನಿಲ್ಲಿಸದಿದ್ದರೆ ಸಮಾನ ಮನಸ್ಕ ಪಕ್ಷಗಳೊಂದಿಗೆ ಸೇರಿ ಬೃಹತ್ ಚಳುವಳಿ ನಡೆಸುವುದಾಗಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಪಿ. ಮಧು ಹೇಳಿದ್ದಾರೆ.

ಕುಡಿಯುವ ನೀರು ಮತ್ತು ನೈರ್ಮಲ್ಯೀಕರಣವನ್ನು ಒಳಗೊಂಡು ಎಲ್ಲ ನಾಗರೀಕ ಸೌಲಭ್ಯ ಕೆಲಸಗಳನ್ನು ಒಳಗೊಂಡಿರುವ ಮುನಿಸಿಪಲ್ ಕಾಯಿದೆಯನ್ನು ತಿದ್ದುಪಡಿ ಮಾಡಿ ನಗರ ಮೂಲರಚನೆ ನಿರ್ವಹಣಾ ಕಂಪನಿಯೊಂದಕ್ಕೆ ವಹಿಸಿಕೊಟ್ಟು, ಅದಕ್ಕೆ ನಾಗರಿಕರಿಂದ ತೆರಿಗೆ ಗಳನ್ನು ವಸೂಲಿ ಮಾಡುವ ಅಧಿಕಾರಗಳನ್ನು ಕೊಡುವ ಯೋಚನೆ ಈ ಸರಕಾರದ್ದು. ಈ ರೀತಿ ಬಡ ಮತ್ತು ಮಧ್ಯಮ ವರ್ಗದ ಜನರನ್ನು ಹೆಚ್ಚಿನ ತೆರಿಗೆ ವಸೂಲಿ ಮೂಲಕ ಲೂಟಿಹೊಡೆಯಲು ಅನುವು ಮಾಡಿಕೊಡಲು ಹೊರಟಿರುವ ಕ್ರಮವನ್ನು ಹಿಂಪಡೆಯದಿದ್ದರೆ ವಿಧಾನ ಸಭೆಯ ಬಜೆಟ್‌ನ ಅಧಿವೇಶನ ನಡೆಯುವ ಸಂದರ್ಭದಲ್ಲಿ ಪಕ್ಷದ ಕಾರ್ಯಕರ್ತರು ಮುತ್ತಿಗೆ ಹಾಕುವರು ಎಂದವರು ಹೇಳಿದರು.



ಪುನಃ ಮಿಲಿಟರೀಕರಣದತ್ತ ಜಾರುತ್ತಿರುವ ಜಪಾನ್




ಶರತ್‌ಚಂದ್ರ

ಜಪಾನಿನ ಪ್ರಧಾನಿ ಶಿನ್ಜೋ ಅಬೆ ಅವರ ಪಕ್ಷ ಎಲ್.ಡಿ.ಪಿ. (ಲಿಬರಲ್ ಡೆಮೊಕ್ರಾಟಿಕ್ ಪಕ್ಷ) ಇತ್ತೀಚೆಗೆ ನಡೆದ ಚುನಾವಣೆಗಳಲ್ಲಿ ಸಂಸತ್ತಿನ ಮೇಲ್ಮನೆಯಲ್ಲೂ ಬಹುಮತ ಪಡೆದಿದೆ. ಇದ-ರಿಂದಾಗಿ ಆಳುವ ಪಕ್ಷ ಎಲ್.ಡಿ.ಪಿ.ಗೆ ಸಂಸತ್ತಿನ ಎರಡೂ ಸದನಗಳಲ್ಲಿ ದೊಡ್ಡ ಬಹುಮತ ಇದ್ದು ಕೆಲವು ವಿವಾದಿತ ಸಂವಿಧಾನ ತಿದ್ದುಪಡಿಗಳು ಮತ್ತು ಪ್ರಮುಖ ವಿಷಯಗಳ ಬಗ್ಗೆ ಕಾನೂನುಗಳನ್ನು ತರಲು ಅನುಕೂಲವಾಗಲಿದೆ.

'ಅಬೆನೊಮಿಕ್ಸ್' ಎಂದು ಕರೆಯಲಾಗುವ ಹಲವು ಆರ್ಥಿಕ ಕ್ರಮಗಳನ್ನು ಪ್ರಧಾನಿ ಅಬೆ ಅವರು ಕೈಗೊಂಡಿದ್ದರೂ, ಜಪಾನಿನ ಆರ್ಥಿಕತೆಯನ್ನು ಸ್ಥಗಿತತೆಯಿಂದ ನಿವಾರಿಸಲಾಗಿಲ್ಲ. ಇದಕ್ಕಾಗಿ ಮಾರಾಟ ತೆರಿಗೆಯನ್ನು ಶೇ. 4 ರಿಂದ ಶೇ. 8ಕ್ಕೆ ಏರಿಸುವ, ಕಾರ್ಪೊರೆಟ್ ತೆರಿಗೆ ಕಡಿಮೆ ಮಾಡುವುದೇ ಮುಂತಾದ ಕೆಲವು ಕಹಿ ಕ್ರಮಗಳನ್ನು ಕೈಗೊಳ್ಳಲಿದ್ದಾರೆ. ಅವರು ವಿವಾದಿತ ಟ್ರಾನ್ಸ್ ಪೆಸಿಫಿಕ್ ಪಾರ್ಟ್‌ನರ್‌ಶಿಪ್ (ಟಿ.ಪಿ.ಪಿ.) ಕ್ಕೂ ಜಪಾನನ್ನು ಸೇರಿಸಬೇಕೆಂದಿದ್ದಾರೆ. ಜಪಾನ್ ಯಾವುದೇ ಯುದ್ಧದಲ್ಲಿ ಭಾಗಿಯಾಗುವುದನ್ನು ಮತ್ತು ಅದರ ಸೈನ್ಯವನ್ನು ದೇಶದ ಹೊರಗೆ ಯುದ್ಧದಲ್ಲಿ ಅಣಿ ನೆರೆಸುವುದನ್ನು ನಿಷೇಧಿಸುವ ಶಾಂತಿಪ್ರಿಯ ಸಂವಿಧಾನದ ಕಲಮನ್ನು ಬದಲಾಯಿಸುವುದು, ಹಾಗೂ ಅಣು ರಿಯಾಕ್ಟರುಗಳನ್ನು ಪುನರಾರಂಭಿಸುವುದು ಅವರು ಮಾಡಹೊರಟಿರುವ ಅತ್ಯಂತ ವಿವಾದಿತ ಕ್ರಮಗಳು. ಫುಕುಶಿಮಾ ಅಣು ರಿಯಾಕ್ಟರಿನಲ್ಲಿ ಅಘಘಾತದ ನಂತರ ಎಲ್ಲಾ ಅಣು ರಿಯಾಕ್ಟರುಗಳನ್ನು ಮುಚ್ಚಲಾಗಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಇವೆರಡೂ ಕ್ರಮಗಳಿಗೆ ಸಂಸತ್ತಿನಲ್ಲೂ ಜನತೆಯಲ್ಲೂ ತೀವ್ರವಾದ ವಿರೋಧ ಇದೆ.

ಉಗ್ರ ರಾಷ್ಟ್ರೀಯತೆ ಬಡಿದೆಬ್ಬಿಸುವ ಹುನ್ನಾರ

ಅಬೆ ಇತ್ತೀಚೆಗೆ ನಡೆಸಿದ ಸಂಪುಟ ಪುನಾರಚನೆ ಸರಕಾರ ಬಲಪಂಥದತ್ತ ಜಾರುತ್ತಿದೆ ಎಂಬುದನ್ನು ಸ್ಪಷ್ಟ ಪಡಿಸಿದೆ. ರಕ್ಷಣಾ ಮಂತ್ರಿಯಾಗಿ ಟೊಮೊಮಿ ಇನಾದಾ ಅವರ ನೇಮಕ ಇದಕ್ಕೆ ಪುರಾವೆ. ಎರಡನೇ ಮಹಾಯುದ್ಧದಲ್ಲಿ ಜಪಾನಿ ಘೋರ ಯುದ್ಧ-ಅಪರಾಧಗಳನ್ನು ಸಮರ್ಥಿಸಿಕೊಳ್ಳುವ ನಿಪ್ಪನ್ ಕೈಗಿ ಎಂಬ ಬಲಪಂಥೀಯ ಸಂಸ್ಥೆಯ ಸಕ್ರಿಯ ಸದಸ್ಯೆ. ಈಕೆ ಎರಡನೇ ಮಹಾಯುದ್ಧದಲ್ಲಿ ಸತ್ತ ಜಪಾನಿನ ಸೈನಿಕರ ವಿವಾದಿತ ಯಾಸುಕಿನಿ ಸ್ಮಾರಕಕ್ಕೆ ಯಾವಾಗಲೂ ಭೇಟಿ ನೀಡುತ್ತಾರೆ. ಜಪಾನಿ ಸೈನ್ಯ ಸಾವಿರಾರು ಚೀನಿ ಮಹಿಳೆಯರ ಮೇಲೆ ಅತ್ಯಾಚಾರ ಎಸಗಿದ ಮತ್ತು 3 ಲಕ್ಷ ಚೀನಿಯರ ಮಾರಣಹೋಮ ನಡೆಸಿದ 'ನಾನ್‌ಕಿಂಗ್ ನರಮೇಧ' ಎಂದೇ ಕುಖ್ಯಾತವಾಗಿರುವ ಪ್ರಕರಣ ನಡೆದೇ ಇಲ್ಲ ಎಂದು ಈಕೆ ವಾದಿಸುತ್ತಾರೆ.



ಜಪಾನಿನ ಸಂವಿಧಾನದ ಕಲಮು 9 ಯುದ್ಧ ಹೂಡುವುದನ್ನು ಮತ್ತು ಯುದ್ಧ ಹೂಡಲು ಸೈನ್ಯ ಇರಿಸಿಕೊಳ್ಳುವುದನ್ನು ನಿಷೇಧಿಸುತ್ತದೆ. ಜಪಾನಿನ ಸಂವಿಧಾನವನ್ನು ಎರಡನೇ ಮಹಾಯುದ್ಧದಲ್ಲಿ ಜಪಾನ್ ಶರಣಾಗತವಾದಾಗ ಗೆದ್ದ ಅಮೆರಿಕ ಬರೆದಿತ್ತು ಎಂದು ಅಮೆರಿಕದ ಉಪಾಧ್ಯಕ್ಷ ಜೊ ಬಿಡೆನ್ ಇತ್ತೀಚೆಗೆ ಹೇಳಿದ್ದರು. ಅಮೆರಿಕದ ಚುನಾಯಿತ ಅಧ್ಯಕ್ಷ ಟ್ರಂಪ್ ಜಪಾನಿ ರಕ್ಷಣಾ ಖರ್ಚಿನ ದೊಡ್ಡ ಪಾಲನ್ನು ಅಮೆರಿಕ ವಹಿಸುವುದನ್ನು ಮುಂದುವರೆಯುವುದು ಸಾಧ್ಯವಿಲ್ಲ. ಜಪಾನ್ ಅದನ್ನು ತಾನೇ ನಿಭಾಯಿಸಬೇಕು. ಚೀನಾ, ಉತ್ತರ ಕೊರಿಯಾದಂತಹ ದೇಶಗಳ ಬೆದರಿಕೆ ಎದುರಿಸಲು ಅಣ್ವಸ್ತ್ರಗಳನ್ನು ಹೊಂದುವ ಆಯ್ಕೆ ಜಪಾನಿಗಿರಬೇಕು ಎಂದು ಹೇಳಿಕೆ ನೀಡಿದ್ದರು. ಈ ಎರಡು ಹೇಳಿಕೆಗಳನ್ನು ಬಳಸಿ, ಎರಡನೇ ಮಹಾಯುದ್ಧದ ಮೊದಲು ಜಪಾನಿಗಿದ್ದ 'ಮಿಲಿಟರಿ ಮಹಾಶಕ್ತಿಯ ಸ್ಥಾನದ ಗತವೈಭವ' ಪುನಃ ಸ್ಥಾಪಿಸುವ ಉಗ್ರ ರಾಷ್ಟ್ರೀಯವಾದಿ ಅಲೆ ಎಬ್ಬಿಸಿ, ಕಲಮು 9 ತಿದ್ದುಪಡಿ ಮಾಡಲು ಸಾಮೂಹಿಕ ಸಹಮತ ಸೃಷ್ಟಿಸಲು ಅಬೆ ಸರಕಾರ ಪ್ರಯತ್ನಿಸುತ್ತಿದೆ.

ಎರಡನೇ ಮಹಾಯುದ್ಧ ನಂತರದ ಸನ್ನಿವೇಶದಲ್ಲಿ ಜಪಾನಿನ ಮಿಲಿಟರಿ ಆಕಾಂಕ್ಷೆಗಳನ್ನು ಸಂವಿಧಾನಾತ್ಮಕವಾಗಿ ಹತ್ತಿಕ್ಕಿದ ಅಮೆರಿಕ ಈಗ ತನ್ನ ಜೂನಿಯರ್ ಮಿಲಿಟರಿ ಸಹಚರ ಆಗುವಂತೆ ಪ್ರೇರೇಪಿಸುತ್ತಿದೆ. ಈಗ ಚೀನಾದ ವಿರುದ್ಧ ಈ ಪ್ರದೇಶದಲ್ಲಿ ಒಂದು ಮಿಲಿಟರಿ ಕೂಟಕ್ಕೆ ಜಪಾನನ್ನು ಸೆಳೆಯುವುದು ಅದಕ್ಕೆ ಬೇಕಾಗಿದೆ. ಜಪಾನಿನಲ್ಲಿ ಮಿಲಿಟರಿ ನೆಲೆಗಳನ್ನು ಹೊಂದಿರುವ ಅಮೆರಿಕಕ್ಕೆ ತನ್ನ ವ್ಯೂಹದಲ್ಲಿ ಜಪಾನನ್ನು ಸೇರಿಸಿಕೊಳ್ಳುವುದು ಬೇಕಾಗಿದೆ. 'ಚೀನಾದ ಆಕ್ರಾಮಕತೆ ವಿರುದ್ಧ ರಕ್ಷಣೆ'ಯ ಹೆಸರಲ್ಲಿ, ಚಾರಿತ್ರಿಕವಾಗಿ ಈ ಪ್ರದೇಶದಲ್ಲಿ ಜಪಾನೇ ಅತ್ಯಂತ ಆಕ್ರಾಮಕ ಯುದ್ಧಕೋರ ಶಕ್ತಿಯಾಗಿ-ತ್ತು ಎಂಬುದನ್ನು ಮರೆಸಲು ಯತ್ನಿಸುತ್ತಿದೆ. ಇದೇ ಜಪಾನಿ ಆಳುವ ವರ್ಗಗಳಿಗೂ ಬೇಕಾಗಿರುವುದು. ಅದಕ್ಕಾಗಿ ಜಗತ್ತಿನಲ್ಲಿ ಮೊದಲ ಮತ್ತು ಏಕಮಾತ್ರ ಅಣ್ವಸ್ತ್ರ ಬಳಕೆ ಮಾಡಿ ಲಕ್ಷಾಂತರ ಅಮಾಯಕ ಜಪಾನೀಯರ ನರಮೇಧ ಮಾಡಿದ ಅಮೆರಿಕದ ಅಪರಾಧ ಕೃತ್ಯಗಳಿಗೆ ಅದು ಕ್ಷಮೆ ಕೇಳಬೇಕು ಮತ್ತು ಪರಿಹಾರ ಕೊಡಬೇಕು ಎಂಬ ಹಕ್ಕೊತ್ತಾಯಗಳನ್ನು ಬಿಡಲು ತಯಾರಿದೆ. ಆದರೆ ಜಪಾನ್ ಸೇರಿದಂತೆ ಈ ಇಡೀ ಪ್ರದೇಶದ ಜನತೆ ಇದನ್ನು ಮರೆತು ಬಿಡಲು ತಯಾರಿಲ್ಲ. ಆದ್ದರಿಂದ ಅಮೆರಿಕ-ಜಪಾನಿ ಆಳುವ ವರ್ಗಗಳು ಈ ಕಸರತ್ತು ನಡೆಸಿವೆ. ಜಪಾನೀ ಸರಕಾರ ಮತ್ತು ಸಂಸತ್ತು ಹೆಚ್ಚೆಚ್ಚು ಬಲಪಂಥದತ್ತ ವಾಲುತ್ತಿರುವುದು ಇದಕ್ಕೆ ಅನುವು ಮಾಡಿಕೊಡಲಿದೆ.

ಶಾಂತಿಪ್ರಿಯ ದೊರೆಯ ಪ್ರತಿರೋಧ

ಅಬೆ ಸರಕಾರದ ಈ ನಡೆಗೆ ಜಪಾನಿನಲ್ಲಿ ತೀವ್ರ ಪ್ರತಿರೋಧ ವ್ಯಕ್ತವಾಗಿದೆ. ಜಪಾನಿನ ದೊ-ರೆ ಅಕಿಹಿಟೊ ಸಹ ಅಗಸ್ಟ್ ನಲ್ಲಿ ಜನತೆಯನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ಜಪಾನನ್ನು ಪುನಃ ಮಿಲಿಟರೀಕರಣಗೊಳಿಸುವ ಮತ್ತು ಇತರ ಸಂವಿಧಾನಾತ್ಮಕ ಬದಲಾವಣೆಗಳನ್ನು ಪರೋಕ್ಷವಾಗಿ ವಿರೋಧಿಸಿದ್ದಾರೆ. ಜಪಾನಿನಲ್ಲಿ ದೊರೆ ಪ್ರಭುತ್ವದ ಮುಖ್ಯಸ್ಥನಾದರೂ ಜನತೆಯನ್ನು ಉದ್ದೇಶಿಸಿ ಭಾಷಣ ಮಾಡುವ ಸಂಪ್ರದಾಯ ಇಲ್ಲ. ಕಳೆದ ಬಾರಿ ದೊರೆ ಜನತೆಯನ್ನು ಉದ್ದೇಶಿಸಿ ಮಾತನಾಡಿದ್ದು (ಅಕಿಹಿಟೊ ತಂದೆ ಹಿರೊಹಿಟೊ) 70 ವರ್ಷಗಳ ಹಿಂದೆ – 1945 ಅಗಸ್ಟ್ ನಲ್ಲಿ ಜಪಾನಿನ ಶರಣಾಗತಿ ಘೋಷಿಸಿದಾಗ. ಹಿಂದಿನ ದೊರೆ ಹಿರೊಹಿಟೊ ಜಪಾನಿನ ಕ್ರೂರ ಮಿಲಿಟರೀಕರಣದ ಪ್ರತೀಕವಾಗಿದ್ದರೂ, ಈಗಿನ ದೊರೆ ಅಕಿಹಿಟೊ ಎರಡನೇ ಮಹಾಯುದ್ಧದಲ್ಲಿ ಜಪಾನಿನ ಭೀಕರ ಮಿಲಿಟರಿ ಅಪರಾಧಗಳ ಬಗ್ಗೆ ವಿಷಾದಪಡುವ ಜಪಾನಿಗಳ ಬಹುಸಂಖ್ಯಾತ ಜನರ ಧೋರಣೆ ಹೊಂದಿದವರು. ಜಪಾನಿ ಸಂವಿಧಾನದ ಪ್ರಕಾರ ಈಗ ಬರಿಯ ಅಲಂಕಾರಿಕ ಮುಖ್ಯಸ್ಥ. ಎರಡನೇ ಮಹಾಯುದ್ಧದ ನಂತರ ಜಪಾನನ್ನು ಅತಿಕ್ರಮಣ ಮಾಡಿ 7 ವರ್ಷ ಆಳಿದಾಗ, ತಮ್ಮ ಆಳ್ವಿಕೆಗೆ ಜನರ ಸಹಮತ ಒದಗಿಸಲು ತಾವು ಬರೆದ ಸಂವಿಧಾನದಲ್ಲಿ ಈ ವ್ಯವಸ್ಥೆಯನ್ನು ತಂದಿದ್ದರು. ಹಿಂದಿನ ದೊರೆ ಸಾರ್ವಭೌಮನಾಗಿದ್ದು ಪೂರ್ಣ ರಾಜಕೀಯ ಅಧಿಕಾರ ಹೊಂದಿದ್ದ. ಈಗಿನ ಜಪಾನಿ ಸರಕಾರ ಅದನ್ನು ಪುನಃ ತರುವ ಹಾದಿಯಲ್ಲಿ, ದೊರೆ ಚುನಾಯಿತ ಸರಕಾರದ ಸಲಹೆಗಳನ್ನು ಮನ್ನಿಸಲೇಬೇಕು ಎಂಬ ಸಂವಿಧಾನದ ಕಲಮನ್ನು ತೊಡೆಯಲು ಪ್ರಯತ್ನಿಸುತ್ತಿದೆ. ಇದನ್ನೂ ಈಗಿನ ದೊರೆ ಅಕಿಹಿಟೊ ವಿರೋಧಿಸುತ್ತಿದ್ದಾರೆ. ದೊ-ರೆ ಅಕಿಹಿಟೊಗೆ 82 ವರ್ಷವಾಗಿದ್ದು, ಕ್ಯಾನ್ಸರ್ ನಿಂದ ಚೇತರಿಸಿಕೊಳ್ಳುತ್ತಿದ್ದು ತಾವು ದೊರೆ ಪಟ್ಟ ಬಿಟ್ಟು ಕೊಟ್ಟು ನಿವೃತ್ತರಾಗಲು ಬಯಸಿದ್ದಾರೆ. ಒಂದು ಸಮೀಕ್ಷೆ ಪ್ರಕಾರ ಶೇ. 85 ಜಪಾನಿಯರು ದೊರೆ ನಿವೃತ್ತರಾಗಬಯಸಿದರೆ ಅದಕ್ಕೆ ಅನುವು ಮಾಡಿಕೊಡುವುದರ ಪರವಾಗಿದ್ದಾರೆ. ಆದರೆ ಅಬೆ ಸರಕಾರ ಸಂವಿಧಾನದಲ್ಲಿ ಇದಕ್ಕೆ ಅವಕಾಶ ಇಲ್ಲ ಎಂಬ ನೆಪ ಹೇಳಿ ನಿರಾಕರಿಸುತ್ತಿದೆ. ಮುಂದೆ ದೊರೆಯಾಗಲಿರುವ ಅಕಿಹಿಟೊ ಮಗ ನರುಹಿಟೊ ಜಪಾನಿನ ಈಗಿನ ಸಂವಿಧಾನವನ್ನು ಬದಲಾಯಿಸಿ ದೇಶವನ್ನು 'ಮಿಲಿಟರಿ ಸಾಮ್ರಾಜ್ಯ'ವಾಗಿ ಬದಲಾಯಿಸುವುದನ್ನು ಇನ್ನಷ್ಟು ಬಲವಾಗಿ ವಿರೋಧಿಸುತ್ತಿರುವುದು ಇದಕ್ಕೆ ಕಾರಣವಿರಬಹುದು.

ರಶ್ಯನ್ ಕ್ರಾಂತಿಕಾರಿ ವರ್ಗಪ್ರಜ್ಞೆ.......... ಪುಟ 16 ರಿಂದ

ಹೆಚ್ಚಿಸುತ್ತಿದೆ. ದೇಶದಲ್ಲಿ ಶೇ.50ರಷ್ಟು ಕಪ್ಪುಹಣ ದೇವಾಲಯ, ಚರ್ಚ್, ಮಸೀದಿ, ಮಠಗಳು ಸೇರಿದಂತೆ ಧಾರ್ಮಿಕ ಕೇಂದ್ರ್ರಗಳಲ್ಲಿದೆ. ಕಪ್ಪುಹಣವನ್ನು ಹೊಂದಿರುವವರು ಅದರ ರಕ್ಷಣೆಗಾಗಿ ಮಾತ್ರ ದೇವಾಲಯಗಳನ್ನು ನಿರ್ಮಿಸುತ್ತಾರೆ." ಎಂದು ಇಂದಿನ ಕ್ರೂರ ವಾಸ್ತವದ ಕಡೆಗೆ ಗಮನ ಸೆಳೆದರು. ಸಾವಿರಾರು ವರ್ಷಗಳ ಅಸಮಾನತೆ, ಬಡತನ, ಕ್ರೌರ್ಯಗಳ ಚರಿತ್ರೆಯಲ್ಲಿ ಸೋವಿಯೆಟ್ ಸಮಾಜ ಕೆಲವು ದಶಕಗಳಿದ್ದ ಸುಂದರ ಸ್ವಪ್ನವಿದ್ದಂತೆ. ಅಂತಹ ಸುಂದರ ಸ್ವಪ್ನ ನೆನಪಿಸಿಕೊಳ್ಳುವುದು

ಕಾರ್ಯಕ್ರಮದ ಸ್ವಾಗತ ಜೋಮಿ ಜಾರ್ಜ್, ವಂದನಾರ್ಪಣೆ ಪಿ.ಮುನಿರಾಜು ಮತ್ತು ನಿರೂಪಣೆಯನ್ನು ಎನ್.ಪ್ರತಾಪ್ ಸಿಂಹ ರವರು ನೆರವೇರಿಸಿದರು.

'ಮಾರ್ಕ್ಸ್‌ವಾದದ ಮರು ಅಧ್ಯಯನ ಬೇಕು'

ಸಮಕಾಲೀನ ಸಾಮಾಜಿ, ಸಾಂಸ್ಕೃತಿಕ ಹಾಗೂ ರಾಜಕೀಯ ನೆಲೆಯಲ್ಲಿ ಜನ ಸಮುದಾಯವನ್ನು ಒಗ್ಗೂಡಿಸಬೇಕಾದರೆ ಮಾರ್ಕ್ಸ್‌ವಾದವನ್ನು ಮರು ಅಧ್ಯಯನಕ್ಕೆ ಒಳಪಡಿಸಬೇಕಾದ ಅಗತ್ಯವಿದೆ ಎಂದು ಹಿರಿಯ ಚಿಂತಕ ಪ್ರೊ. ಬಿ. ಗಂಗಾಧರ ಮೂರ್ತಿರವರು ಅಭಿಪ್ರಾಯಪಟ್ಟರು.

ಮಧ್ಯಾಹ್ನದ ನಂತರ ಪ್ರಾರಂಭವಾದ ಮುಕ್ತ ಸಂವಾದ ಕಾರ್ಯಕ್ರಮದಲ್ಲಿ ಸಭಿಕರಿಂದ ಎದ್ದು ಬಂದ ಪ್ರಶ್ನೆಗಳಿಗೆ ವೇದಿಕೆ ಮೇಲಿದ್ದ ಗಣ್ಯರು ಉತ್ತರಗಳನ್ನು ನೀಡಿದರು. ಪ್ರೊ. ಬಿ.ಗಂಗಾ ಧರ ಮೂರ್ತಿರವರು ಮುಂದುವರೆದು ಮಾತನಾಡಿ ಇಂದಿನ ಜಾಗತೀಕರಣದ ಯುಗದಲ್ಲೂ ಕೃಷಿ ಹಾಗೂ ಕಾರ್ಮಿಕ ಕ್ಷೇತ್ರದಲ್ಲಿ ಶೋಷಣೆಗೊಳಗಾಗುತ್ತಿರುವುದು ದಲಿತ ಸಮುದಾಯವಾಗಿದೆ. ಈ ಶೋಷಣೆಗೆ ದೇಶದ ಜಾತಿ ವ್ಯವಸ್ಥೆಯು ಪ್ರಮುಖ ಕಾರಣವಾಗಿದೆ. ಮಾರ್ಕ್ಸ್ ಮತ್ತು ಲೆನಿನ್‌ರವರು ಪುಸ್ತಕದ ಜೊತೆಗೆ ಗಾಂಧೀಜಿರವರ ಹಿಂದ್ ಸ್ವರಾಜ್ ಮತ್ತು ಡಾ॥ಬಿ. ಆರ್.ಅಂಬೇಡ್ಕರ್‌ರವರ 'ಜಾತಿ ವಿನಾಶ' ಪುಸ್ತಕವನ್ನು ಮರು ವಿಶ್ಲೇಷಣೆಗೆ ಒಳಪಡಿಸಿಕೊಳ್ಳಬೇಕಾಗಿದೆ ಎಂದರು.

ಮತ್ತೊಂದು ಪ್ರಶ್ನೆಗೆ ಸಿಪಿಐ ರಾಷ್ಟ್ರೀಯ ಮಂಡಳಿ ಸದಸ್ಯರಾದ ಡಾ॥ಸಿದ್ಧನಗೌಡ ಪಾಟೀಲ್‌ರವರು ಉತ್ತರಿಸುತ್ತಾ, "ಕಮ್ಯೂನಿಸ್ಟ್ ಪಕ್ಷಗಳು ಇಂದು ಹಲವು ಗುಂಪುಗಳಾಗಿ ಕೆಲಸ ಮಾಡುತ್ತಿವೆ ಈ ಹಿಂದೆ ಇದ್ದಂತಹ ದೊಡ್ಡ ಭಿನ್ನಾಭಿಪ್ರಾಯಗಳು ಈಗ ಸರಿಪಡಿಸಿಕೊಂಡು ಒಂದೇ ವೇದಿಕೆ ಅಡಿಯಲ್ಲಿ ಹಲವು ಬಾರಿ ಜಂಟಿ ಚಳುವಳಿಯನ್ನು ನಡೆಸಲಾಗುತ್ತಿದೆ. ಇದು ಮತ್ತಷ್ಟು ಮತ್ತಷ್ಟು ಹೆಚಾಗಿ ಎಡಪಕ್ಷಗಳು ಒಂದಾಗಬೇಕು. ಇದಕ್ಕೆ ಪೂರ್ವಭಾವಿಯಾಗಿ ಸಿಪಿಐ, ಸಿಪಿಐ(ಎಂ) ಒಗ್ಗೂಡಬೇಕು ಎಂದರು.

ಸಭಿಕರಿಂದ ಬಂದ ಇನ್ನೊಂದು ಪ್ರಶ್ನೆಗೆ ಉತ್ತರಿಸುತ್ತಾ ಪ್ರಸ್ತುತ ಜಾಲ್ತಿಯಲ್ಲಿರುವ ಎಡ ಅಥವಾ ಬಲ ವಾದಗಳ ಬದಲಾಗಿ ಮಧ್ಯಮ ವಾದದ ಪ್ರಶ್ನೆಯೂ ಎದ್ದು ಬಂದಿದೆ. ಇದು ತಾತ್ಕಾಲಿಕವಾದ ವಾದವಷ್ಟೇ. ಅಂತಿಮವಾಗಿ ಇದು ಬಲ ವಾದದ ಗುಣಗಳನ್ನೇ ಮೈಗೂಡಿಸಿಕೊಳ್ಳುತ್ತದೆ. ಈಗೀನ ಸಂದರ್ಭದಲ್ಲಿ ವ್ಯಾಪಕಗೊಳ್ಳುತ್ತಿರುವ ಬಲ ವಾದಕ್ಕೆ ವಿರುದ್ಧ ಎಡವಾದವೂ ಅಷ್ಟೇ ಪ್ರಮಾಣದಲ್ಲಿ ಬೆಳೆಯುತ್ತಿರುವ ಸಂದರ್ಭದಲ್ಲಿ ಎಡವಾದವನ್ನು ಮೂಲೆಗುಂಪಾಗಿಸಲು ಎಡವೂ ಬ್ಯಾಡ, ಬಲವೂ ಬ್ಯಾಡ ಮಧ್ಯಮ ವಾದ ಸಾಕು ಎಂದು ಚಾಲ್ತಿಗೆ ತರಲಾಗಿದೆ ಎಂದು ವಿವರಿಸಿದರು.

ವೇದಿಕೆ ಮೇಲಿದ್ದ ಪ್ರೋ.ರಾಜೇಂದ್ರ ಚೆನ್ನಿ, ಡಾ॥ಎನ್.ಗಾಯತ್ರಿ, ಬಿ.ರವಿ, ಕೆ.ಪ್ರಕಾಶ್, ಮತ್ತಿತರರು ಪ್ರಶ್ನೆಗಳಿಗೆ ಉತ್ತರಗಳನ್ನು ನೀಡುವ ಮೂಲಕ ಮುಕ್ತ ಸಂವಾದವನ್ನು ಅರ್ಥಪೂರ್ಣಗೊಳಿಸಿದರು. ಸಭಿಕರಿಂದಲೂ ಸಾಕಷ್ಟು ಪ್ರಶ್ನೆಗಳು ಎದ್ದು ಬಂದಿತು. ಕಾರ್ಯಕ್ರಮದ ಸಂಯೋಜನೆಯನ್ನು ಎಸ್.ಕೆ.ಗೀತಾ ಮತ್ತು ಸ್ವಾಗತವನ್ನು ಬಿ.ಎನ್.ಮಂಜುನಾಥ್ ನೆರವೇರಿಸಿದರು.

ಕಾರ್ಯಕ್ರಮ್ರದ ಪ್ರಾರಂಭದಲ್ಲಿ ಅಶೋಕ್ ಮತ್ತು ಮಂಜುರವರು ಅಫ್ರಿಕನ್ ಜಂಬೆ ಮಾದರಿಯ ಸಂಗೀತವನ್ನು ಪ್ರಸ್ತುತಪಡಿಸಿದರು.

JANASHAKTHI KANNADA VARA PATRIKE JAN 01, 2017 Price : Rs. 10/- RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ರಶ್ಯನ್ ಕ್ರಾಂತಿಯ ನೈತಿಕ ಆಕ್ರೋಶ, ಕ್ರಾಂತಿಕಾರಿ ವರ್ಗಪ್ರಜ್ಞೆ ಮತ್ತು ಸಂಘಟನಾ ಶ್ರದ್ಧೆ ಇಂದು ಬೇಕಾಗಿದೆ : ಚೆನ್ನಿ




'ವಿಶ್ವದಲ್ಲಿ ಬಂಡವಾಳಶಾಹಿಶಾಹಿಯ ಬಿಕ್ಕಟ್ಟುಗಳು ಉಲ್ಬಣಗೊಳ್ಳುತ್ತಲೇ ಇದೆ. ಗ್ರೀಸ್ ನಲ್ಲಿ ಮಧ್ಯಮ ವರ್ಗದ ಮಹಿಳೆಯೊಬ್ಬಳು ಭಿಕ್ಷೆ ಬೇಡುತ್ತಿರುವಂತಹ ದೃಶ್ಯಗಳು ನಮ್ಮ ಮುಂದೆ ಇದೆ. ಜನ ಸಮುದಾಯ ಇತಿಹಾಸದಲ್ಲಿ ಎಂದೂ ನೋಡದ ಬಿಕ್ಕಟ್ಟನ್ನು ನೋಡುವ ಪರಿಸ್ಥಿತಿ ಬಂದಿದೆ' ಎಂದು ಪ್ರೋ. ರಾಜೇಂದ್ರ ಚೆನ್ನಿರವರು ಹೇಳಿದರು.

ಅವರು ಡಿಸೆಂಬರ್ 18ರಂದು ಬೆಂಗಳೂರಿನ ಸಚಿವಾಲಯ ಸಭಾಂಗಣದಲ್ಲಿ ನಡೆದ 'ಸಮಾಜವಾದಿ ಕ್ರಾಂತಿ ಒಂದು ತಾತ್ವಿಕ ಮೀಮಾಂಸೆ' ಎಂಬ ವಿಚಾರ ಸಂಕಿರಣವನ್ನು ಉದ್ಘಾಟಿಸುವ ಮೂಲಕ ಮಾತನಾಡಿದರು.

ಕುವೆಂಪು ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ರಾಜೇಂದ್ರ ಚೆನ್ನಿರವರು ಮುಂದುವರೆದು ಮಾತನಾಡಿ 'ಬಂಡವಾಳವು ಉದಾರೀಕರಣ ಮತ್ತು ಮುಕ್ತ ಮಾರುಕಟ್ಟೆಗೆ ಹಾತೊರೆಯುತ್ತದೆ. ಜಾಗತೀಕರಣದಿಂದಾಗಿ ಮಾನವ ಕುಲ ಉದ್ಧಾರವಾಗುತ್ತಿದೆ ಎಂಬು ಬಿಂಬಿಸಲಾಗುತ್ತಿದೆ. ಆದರೆ ವಾಸ್ತವ ಪರಿಸ್ಥಿತಿ ಆ ರೀತಿಯಲ್ಲಿಲ್ಲ ಎಂದುರು.

'ಹೆಣದ ಬಟ್ಟೆ'ಯ ತಂದೆ-ಮಗರಂತಹ ಪರಿಸ್ಥಿತಿ

'ಆಗಿರುವುದು ಸಾವು, ಕೇಳುವುದು ಹೆಣಕ್ಕೆ ಬಟ್ಟೆ, ಆದರೆ ಅದಕ್ಕೆ ಬಂದ ಹಣದಿಂದ ಹೆಂಡ ಕುಡಿದು ವಿಜಯೋತ್ಸವದ ರೀತಿಯಲ್ಲಿ ಕುಣಿದಾಡುವುದು' ಎಂಬ ಪ್ರೇಮಚಂದರ ಕತೆ 'ಹೆಣದ ಬಟ್ಟೆ'ಯಲ್ಲಿ ಬರುವ ತಂದೆ-ಮಗರಂತೆ ಇದೆ ನಮ್ಮ ಜನರ ಪರಿಸ್ಥಿತಿ ಎಂದರು ರಾಜೇಂದ್ರ ಚೆನ್ನಿ. ಅಂತರಾಷ್ಟ್ರೀಯ ಬಂಡವಾಳವು ಸಮಾಜವಾದ ಅಪ್ರಸ್ತುತ, ಬೇಕಿಲ್ಲ ಎಂದು ಹೇಳುವುದು ಮಾತ್ರ ಅಲ್ಲ. ಬದಲಾಗಿ ಅದಕ್ಕೆ ಪೂರಕವಾಗಿ ಸಮಾಜವಾದಿ ಕ್ರಾಂತಿಯ ದೌರ್ಬಲ್ಯಗಳನ್ನು ವಿವರಿಸುವುದು. ದುಡಿಯುವ ವರ್ಗವೇ ಇಲ್ಲ, ವರ್ಗ ಸಮಾಜವೇ ಇಲ್ಲ, ಜನತೆಯಲ್ಲಿ ವರ್ಗ ಕಲ್ಪನೆ ಇಲ್ಲವಾಗಿದೆ ಎಂದು ಪ್ರಚುರಪಡಿಸಲಾಗುತ್ತಿದೆ. ಈ ಬಗ್ಗೆ ಹಲವು ಪುಸ್ತಕಗಳು ಬಂದಿವೆ.



ಬಂಡವಾಳಶಾಹಿ ಸಿದ್ಧಾಂತ ಜಾರಿಗೆ ಬಂದಾಗಿನಿಂದಲೂ ಬಿಕ್ಕಟ್ಟಿನ ಸ್ವರೂಪದಿಂದಲೇ ಕೂಡಿದ್ದು, ಶೋಷಣೆ ಮತ್ತು ದಬ್ಬಾಳಿಕೆಯು ಅದರ ಮೂಲ ಸಿದ್ಧಾಂತವಾಗಿದೆ. ಕಾಲಕ್ಕೆ ತಕ್ಕ ಹಾಗೇ ತನ್ನ ಭೌತಿಕ ಸ್ವರೂಪವನ್ನು ಬದಲಿಸಿಕೊಳ್ಳುತ್ತಾ, ಶೋಷಣೆಯನ್ನು ಮುಂದುವರೆಸುತ್ತಲೇ ಇರುತ್ತದೆ.

ಸಮಾಜವಾದಿ ಕ್ರಾಂತಿ ಮುಂಚಿತವಾಗಿ ಇದ್ದಂತಹ ವ್ಯಾಪಕ ಅಸಮಾನತೆಯ ವಿರುದ್ಧ ರಷ್ಯಾದ ಜನತೆಯಲ್ಲಿ ಆಕ್ರೋಶ ದಿನದಿಂದ ದಿನಕ್ಕೆ ಹೆಚ್ಚಾಗುತ್ತಾ ಹೋಯಿತು. ಆ ಪರಿಣಾಮವಾಗಿ ಅಕ್ಟೋಬರ್ ಕ್ರಾಂತಿ ಸಂಭವಿಸಿತು. ಜಗತ್ತಿನಲ್ಲಿ ಶತಮಾನಗಳ ಕಾಲ ತತ್ವಜ್ಞಾನಿಗಳು ಜಗತ್ತನ್ನು ಅರ್ಥೈಸಿದರು, ಆದರೆ ಕಾರ್ಲ್ ಮಾರ್ಕ್ಸ್‌ರವರು ಜಗತ್ತಿನ ಇತಿಹಾಸ ಬದಲಿಸಬಹುದೆಂದರು. ರಷ್ಯಾದಲ್ಲಿ ಸಮಾಜವಾದಿ ಕ್ರಾಂತಿ ಮೂಲಕ ಅದು ಕಾರ್ಯರೂಪಕ್ಕೆ ಬಂದಿತು.

ಇಂಗ್ಲೆಂಡಿನಲ್ಲಿ ಬಂಡವಾಳಶಾಹಿ ವ್ಯವಸ್ಥೆ ಪ್ರಾರಂಭದ ದಿನಗಳಲ್ಲೇ ಅದರ ವಿಮರ್ಶೆ ಟೀಕೆಗಳೂ ಪ್ರಾರಂಭವಾಯಿತು. ವಿಲಿಯಂ ಬ್ಲೇಕ್ ಇತ್ಯಾದಿ ಕವಿಗಳು ಲೇಖಕರು ತಮ್ಮ ಬರವಣಿಗೆಗಳಲ್ಲಿ ಇದನ್ನು ಮಾಡಿದರು. ಯಾವುದೇ ವ್ಯವಸ್ಥೆಯ ವಿರುದ್ಧ ವಿರೋಧಗಳು ಏಳುತ್ತಲೇ ಇರುತ್ತದೆ. ಜಗತ್ತಿನಲ್ಲಿ ಮನೂಷ್ಯನನ್ನು ರೂಪಿಸುತ್ತಿರುವುದು ದುಡಿಮೆ ಹೊರತು ದೇವರು, ಧರ್ಮ ಅಲ್ಲ. ಜಗತ್ತಿಗೆ ಬೇಕಿರುವುದು ಶ್ರಮ ಜೀವನಕ್ಕೆ ಆಸ್ಪದ ಕೊಡುವ ಸಮಾಜವಾದ ಹೊರತು ಶೋಷಣೆಯ ಸಮಾಜದ ಬಂಡವಾಳಶಾಹಿ ಸಿದ್ಧಂತವಲ್ಲ.

ನಮ್ಮ ಇಂದಿನ ಪರಿಸ್ಥಿತಿ ಬಗ್ಗೆ ನೈತಿಕವಾಗಿ ನಮ್ಮಲ್ಲಿ ಆಕ್ರೋಶ ಹುಟ್ಟಬೇಕು. ದುಡಿಮೆಗಾರರಿಗೆ ದುಡಿಯುವ ವರ್ಗ ಪ್ರಜ್ಞೆ ಇರುವುದಿಲ್ಲ. ಸಮಾಜವನ್ನು ಬದಲಾಯಿಸಲು ಆಗುತ್ತದೆ ಎಂಬ ಪ್ರಜ್ಞೆಯನ್ನು ದುಡಿಯುವ ವರ್ಗದಲ್ಲಿ ತರಬೇಕಿದೆ. ಅದಕ್ಕೆ ಸಂಘಟನೆಯ ಅಗತ್ಯವಿದೆ. ನೈತಿಕ ಆಕ್ರೋಶ, ಕ್ರಾಂತಿಕಾರಿ ವರ್ಗಪ್ರಜ್ಞೆ ಮತ್ತು ಸಂಘಟನಾ ಶ್ರದ್ಧೆ ರಶ್ಯನ್ ಕ್ರಾಂತಿಯನ್ನು ಸಾಧ್ಯ ಮಾಡಿತು. ಅದನ್ನು ಇಂದು ಭಾರತದಲ್ಲಿ ಸಾಧ್ಯ ಮಾಡುವುದೇ ಅದನ್ನು ಸ್ಮರಿಸುವ ಉತ್ತಮ ವಿಧಾನ ಎಂದರು ರಾಜೇಂದ್ರ ಚೆನ್ನಿ.

ಈ ವಿಚಾರ ಸಂಕಿರಣದಲ್ಲಿ "ಅಕ್ಟೋಬರ್ ಕ್ರಾಂತಿಯ ಚಿರಂತನ ಮಹತ್ವ' ಎಂಬ ಪುಸ್ತಕವನ್ನು ಡಾ. ।ಕೆ.ಮರುಳಸಿದ್ಧಪ್ಪರವರು ಬಿಡುಗಡೆಗೊಳಿಸಿದರು.

ಫ್ರೆಂಚ್ ಮತ್ತು ರಶ್ಯನ್ ಮಹಾಕ್ರಾಂತಿಯ ಹಿಂದಿನ ತಾತ್ವಿಕತೆಗಳು

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾ. ಜಿ.ಎನ್.ನಾಗರಾಜ್‌ರವರು



'ಸಮಾಜವಾದಿ ಕ್ರಾಂತಿ ಒಂದು ತಾತ್ವಿಕ ಮೀಮಾಂಸೆ' ವಿಚಾರ ಮಂಡನೆಯನ್ನು ಮಾಡಿದರು. ಅವರು ಫ್ರೆಂಚ್ ಮತ್ತು ರಶ್ಯನ್ ಮಹಾಕ್ರಾಂತಿಗಳ ನಡುವಿನ ಸಂಬಂಧ ವಿವರಿಸಿ ಅವುಗಳ ಹಿಂದಿದ್ದ ತಾತ್ವಿಕತೆಗಳ ಸಂಬಂಧಗಳನ್ನು ವಿವರಿಸಿದರು. "ಶತಮಾನಗಳ ಕಾಲ ಹಲವು ತತ್ವಶಾಸ್ತ್ರಗಳು ಆಗಾಗೇ ಬಂದಿದೆ. ಅವು ಧರ್ಮಾಧಾರಿತವಾಗಿದ್ದವು. ವಿಜ್ಞಾನ ಆಧಾರಿತ ತತ್ವಶಾಸ್ತ್ರವು ಎಲ್ಲಾ ಜ್ಞಾನವೂ ಪಂಚೇಂದ್ರೀಯಗಳಿಂದ ಬರುತ್ತದೆ ಎನ್ನುತ್ತದೆ. ಅನುಭವದಿಂದ ಬರುತ್ತದೆ ಎಂದು ವಿವರಿಸುತ್ತದೆ. ಮೊಟ್ಟ ಮೊದಲ ಬಾರಿಗೆ ಫ್ರೆಂಚ್ ನಲ್ಲಿ ಅಲ್ಲಿನ ತತ್ವಜ್ಞಾನಿಗಳು ಅದನ್ನು ಬೆಳೆಸಿದರು. ಹೊಸ ಪರಿಕಲ್ಪನೆಗಳನ್ನು ನೀಡಿದರು.

ತತ್ವಶಾಸ್ತ್ರ ಎಂದರೆ, ಅದು ಕೇವಲ ವಿಶ್ವವಿದ್ಯಾಲಯಗಳ, ಪ್ರೊಫೆಸರ್‌ಗಳು, ಪಂಡಿತರಿಗೆ ಸೀಮಿತವಾದ ವಿಚಾರ ಎಂದು ತಿಳಿದುಕೊಳ್ಳುತ್ತಾರೆ. ಅದು ಸರಿಯಾದುದ್ದಲ್ಲ, ಬದಲಾಗಿ ಪ್ರತಿ ಮನುಷ್ಯನಿಗೂ ಅದು ಅವಶ್ಯಕವಾದದು.

ಫ್ರಾನ್ಸ್ ಕ್ರಾಂತಿಯ ಮೊದಲು ತತ್ವ ಸಿದ್ಧಾಂತ ಎಂಬುದು ದೇವರು ಹಾಗೂ ಪೋಪ್‌ಗಳ ಹಿಡಿತದಲ್ಲಿತ್ತು. ಈ ಸಂದರ್ಭದಲ್ಲಿಯೇ ಈ ವ್ಯವಸ್ಥೆ ವಿರುದ್ಧ ಫ್ರೆಂಚ್‌ನಲ್ಲಿ ಮೊಟ್ಟ ಮೊದಲ ಬಾರಿಗೆ ಹಲವು ತತ್ವಶಾಸ್ತ್ರಜ್ಞರು ನೀತಿಗಳನ್ನು ರೂಪಿಸಿದರು. ಜನರ ಮಧ್ಯೆ ಅದನ್ನು ಕೊಂಡೊಯ್ಯಲು ಮುಂದಾದರು. ಜ್ಞಾನವನ್ನು ಹರಡಲು ಪ್ರಾರಂಬಿಸಿದರು. ಜನತೆ ಮಧ್ಯೆ ಅವು ಗಟ್ಟಿಯಾಗಿ ನೆಲೆ ನಿಂತಾಗ ಫ್ರೆಂಚ್ ಕ್ರಾಂತಿ ಸಂಭವಿಸಿತು.

ಪ್ರಪಂಚವನ್ನು ಬದಲಾಯಿಸುವುದಕ್ಕೆ ಮೊದಲು ಅದನ್ನು ನಾವು ತಿಳಿದುಕೊಳ್ಳಬೇಕಿದೆ. ಪ್ರಕೃತಿಯ ನಿಯಮಗಳನ್ನು ಅರ್ಥ ಮಾಡಿಕೊಳ್ಳಬೇಕು, ಪ್ರಕೃತಿಯ ಜೊತೆಗಿನ ಒಡನಾಟದಿಂದ ಉತ್ತಮ ಬದುಕು ಪಡೆಯಲು ಮಾನವ ಮುಂದಾಗುತ್ತಾನೆ ಎಂಬುದು ಫ್ರೆಂಚ್ ಕ್ರಾಂತಿಯ ಹಿಂದಿನ ತಾತ್ವಿಕತೆ-ಯ ಇಂದಿನ ಸಾರವಾಗಿತ್ತು. ಅದೇ ರೀತಿ ಸಮಾಜ ಬದಲಾಯಿಸಬೇಕಾದರೆ ಸಮಾಜದ ನಿಯಮಗಳನ್ನು ತಿಳಿದುಕೊಳ್ಳುವುದು ಅಗತ್ಯ. ಚಾರಿತ್ರಿಕವಾಗಿ ಸಮಾಜ ಬದಲಾವಣೆಗಳನ್ನು ಅಧ್ಯಯನ ಮಾಡಿ ಅದರ ನಿಯಮಗಳನ್ನು ಕಂಡು ಹಿಡಿಯಬೇಕು.

ಬಂಡವಾಳಶಾಹಿ ವ್ಯವಸ್ಥೆ ಬದಲಾಯಿಸಬೇಕಾದರೆ ಪ್ರಸ್ತುತ ಬಂಡವಾಳದ ಬಗೆಗಿನ ಹೆಚ್ಚಿನ ಅಧ್ಯಯನವನ್ನು ಮಾಡಬೇಕು ಎಂದು ಫ್ರೆಂಚ್ ಕ್ರಾಂತಿಯ ಹಿಂದಿದ್ದ ವೈಜ್ಞಾನಿಕ ತಾತ್ವಿಕತೆಯನ್ನು ಕಾರ್ಲ್ ಮಾರ್ಕ್ಸ್‌ರವರು ಮುಂದುವರೆಸಿದರು. ಅಂತಹ ಅಧ್ಯಯನದ ಮೂಲಕ ಸಮಾಜವಾದಿ ಸಮಾಜ ಕಟ್ಟುವ ಅನಿವಾರ್ಯತೆಯನ್ನು ಪ್ರಸ್ತುತ ಪಡಿಸಿದರು.

ತತ್ವವು ಜನ ಮಾನಸದೊಳಗೆ ಇಳಿದಾಗ ಬದಲಾವಣೆ ಸಂಭವಿಸುತ್ತದೆ. ರಷ್ಯಾದಲ್ಲಿ ಸಮಾಜವಾದಿ ಕ್ರಾಂತಿ ಸಂಭವಿಸಿದ್ದು ಇದೇ ಮಾದರಿಯಲ್ಲಿ. ಲೆನಿನ್ ರಶ್ಯಾ ಸಮಾಜವನ್ನು ಅಧ್ಯಯನ ಮಾಡಿ ಅದು ಜನಮಾನಸದಲ್ಲಿ ಇಳಿಯುವಂತೆ ಮಾಡಿದರು. ಜನಮಾನಸದಲ್ಲಿ ಹಿಂದೆ ಇದ್ದ ಹಳೆಯ ತಾತ್ವಿಕತೆಯ ವಿರುದ್ಧ ಹೋರಾಡಿ ತೊಡೆದು ಹಾಕಲಾಯಿತು. ಪ್ರಸ್ತುತ ಭಾರತದಲ್ಲೂ ಸಮಾಜದ ಗಂಭೀರ ಅಧ್ಯಯನದ ಅಗತ್ಯವಿದೆ. ಅದೇ ರೀತಿ ಜನಮಾನಸವನ್ನು ಹಿಡಿತದಲ್ಲಿಟ್ಟಿರುವ ತಾತ್ವಿಕತೆಯ ವಿರುದ್ಧ ಹೊಸ ತಾತ್ವಿಕತೆ ಸ್ಥಾಪಿಸಬೇಕಾಗಿದೆ. ಇಂತಹ ತಾತ್ವಿಕ ಸಂಘರ್ಷ ಭಾರತದಲ್ಲು ನಡೆಯುತ್ತಾ ಬಂದಿದೆ. ಸಾಂಖ್ಯ ತತ್ವವು ವೇದಾಂತ ತತ್ವವನ್ನು ಎದುರಿಸಲು ಇರುವ ತತ್ವವಾಗಿದೆ. ಅದರಲ್ಲಿ 24 ಅಂಗ ತತ್ವಗಳು ಇವೆ. ಇದೂ ಜ್ಞಾನದ ಮೂಲ ಪಂಚೇಂದ್ರೀಯಗಳು ಎಂದು ಪ್ರತಿಪಾದಿಸಿವೆ. ವೇದಾಂತ ತತ್ವದ ವಿರುದ್ಧ ಚಳುವಳಿ ಹೂಡಿದ ವಚನ ಚಳುವಳಿ ಮುಂತಾದವು ಸಾಂಖ್ಯ ತತ್ವದಿಂದ ಪ್ರಭಾವಿತವಾಗಿವೆ. ಭಾರತದ ಪ್ರಸ್ತುತ ಸ್ಥಿತಿಯ ಅಧ್ಯಯನದ ಜತೆಗೆ ನಾವು ನಮ್ಮ ನೆಲದಲ್ಲೇ ಹುಟ್ಟಿದ ಇಂತಹ ತಾತ್ವಿಕತೆಯ ಜತೆಗೆ ಆಧುನಿಕ ವೈಜ್ಞಾನಿಕ ತಾತ್ವಿಕತೆಯನ್ನೂ ಜನತೆಯ ಮಧ್ಯೆ ಹಬ್ಬಿಸಬೇಕಾಗಿದೆ. ಎಂದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಹಿರಿಯ ಸಾಹಿತಿ ಪ್ರೊ.ಕೆ.ಮರುಳಸಿದ್ಧಪ್ಪರವರು ಮಾತನಾಡಿ "ಬಂಡವಾಳಶಾಹಿಯು ತನ್ನ ವಿಜೃಂಭಣೆಯಲ್ಲಿ ತೊಡಗಿದೆ. ಜನತೆಯ ಮೂಲ ವಿಷಯಗಳು ಚಲಾವಣೆಯಿಂದ ಹಿಂದೆ ಸರೆದಿದೆ. ಹೊಸದಾಗಿ ಚಲಾವಣೆಗೆ ಬಂದಿರುವ ಮುಕ್ತ ಮಾರುಕಟ್ಟೆಯಿಂದಾಗಿ ಶಿಕ್ಷಣ ಮತ್ತು ಆರೋಗ್ಯದಲ್ಲಿನ ಅಸಮಾನತೆಯನ್ನು

ಪುಟ 15 ಕ್ಕೆ



JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086 Editor : **G.V.SRIRAMA REDDY**